I would like the hon. members to note clearly government have not made any attempt to distribute the land. Nor has it come to my knowledge. I wanted this land to be kept for the purpose for which it was gifted. Unfortunately, by the time I could think of it a portion has been leased out. When once the land is leased to some party, I cannot straightaway say: 'I am going to acquire', because courts might intervenue. I will verify whether the institution to which this land was leased has fulfilled the terms of agreement, when the lease was given. If it has fulfilled, I cannot help it. If it has not, there is the possibility of taking that land leasing it to this institution. This is the position.

SRI C. M. ARMUGAM.—The hon. Chief Minister has said that this land was gifted. Who initiated the acquiring of the land ? I want to know whether the resolution was passed by the CITB *suo moto* or Government has directed it.

SRI D. DEVARAJ URS.—That is why I said the resolution has taken place in the month of April; it was handed over in the month of May 1972. I am not able to find out yet who has been responsible for giving this direction. I can assure him that I and my colleagues have never given this.

SRI C. M. ARMUGAM.—We know you have not done. It has been gifted by the Maharaja and somebody wanted it to be given to the Hyderabad Education Society. It is illegal.

SRI D. DEVARAJ URS.—By 1960 it had been acquired by the CITB. The land which had been gifted had been acquired by the CITB and the land was in its possession. By the time we came, somebody had taken possession of it to give it to somebody else.

ಶ್ರೀ ಎಸ್. ಎಸ್. ಅರಕೇರಿ.—ಮೊದಲನೆಯ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳವರು ಉತ್ತರ ಕೊಟ್ಟಿದ್ದಾರೆ ಅದಕ್ಕಾಗಿ ಅಭಿನಂದಿಸುತ್ತೇನೆ. ಎರಡನೆಯದಾಗಿ ಕಳೆದ ೫ ಮಂತ್ರಿಗಳವರೂ ಮಾಡದೇ ಇದ್ದಂಥ ಒಂದು ಗಂಡು ಎದೆಯ ಧೈರ್ಯ ತೋರಿಸಿ ನಮ್ಮ ಈ ಮುಖ್ಯಮಂತ್ರಿಗಳವರು ಕರ್ನಾಟಕ ಎಂದು ನಾಮಕರಣ ಮಾಡಿದ್ದಾರೆ. ಅದೇ ರೀತಿ ಧೈರ್ಯದಿಂದ ಇಲ್ಲಿ ಡಾ|| ಅಂಬೇಡ್ಕರ್‌ರವರ ಭಾವ ಚಿತ್ರವನ್ನು ಹಾಕಲು ಅಡ್ಡಿ ಏನಿದೆಂದು ಮಾನ್ಯ ಮುಖ್ಯಮಂತ್ರಿಗಳವರಲ್ಲಿ ಕೇಳಬಯಸುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಅದೇ ಬೇರೆ ವಿಷಯ, ಇದೇ ಬೇರೆ ವಿಷಯ ಅದನ್ನೂ ಇದನ್ನೂ ಸೇರಿಸಬೇಡಿ. ತಾವು ಸಲಹೆ ಕೊಟ್ಟಿದ್ದೀರಿ ಬೇಕಾದರೆ ಅದನ್ನು ಪರಿಶೀಲನೆ ಮಾಡೋಣ.

## Budget Estimates for 1978-79
## Demands for Grants

*Demand Nos. 47, 48, 49 and 50 (Debate Continued)*

3-30 P.M.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ರೆವಿನ್ಯೂ ಖಾತೆಯ ಮೇಲೆ ನಾನು ಚರ್ಚೆ ಪ್ರಾರಂಭ ಮಾಡಿದಾಗ ಗ್ರಾಮ ಮಟ್ಟದಲ್ಲಿ ಈ ಇಲಾಖೆ ಯಾವ ರೀತಿ ತನ್ನ ಸ್ವರೂಪವನ್ನು ಕಳೆದುಕೊಂಡಿದೆ ಅನ್ನುವುದು ಮತ್ತು ಅಲ್ಲಿಯ ಕೆಲಸಕಾರ್ಯಗಳು ಸ್ಥಗಿತವಾಗಿದೆ

ಅನ್ನುವುದನ್ನೂ ಸಹ ನಾನು ತಿಳಿಸಿದ್ದೇನೆ. ಅಲ್ಲಿ ಕೆಲಸ ಮಾಡುತ್ತಾ ಇದ್ದಂಥಾ ಪಟೇಲರುಗಳನ್ನು ಮುಂದುವರೆಸುವುದರ ಬಗ್ಗೆ ಸರ್ಕಾರ ಒಂದು ಆಶ್ವಾಸನೆ ಕೊಟ್ಟಿದೆ ಎಂದು ನಾನು ಹೇಳಿದಾಗ ಮಾನ್ಯ ಮಂತ್ರಿಗಳು ಇಲ್ಲ ಎಂದು ಹೇಳಲಿಲ್ಲಾ, ತಲೆ ಅಲ್ಲಾಡಿಸಿದರು ಅಷ್ಟೆ. ಮಾನ್ಯ ರೆವಿನ್ಯೂ ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಇಚ್ಛೆಪಡುತ್ತೇನೆ. ಹೈಕೋರ್ಟ್‌ನ ಒಂದು ರಿಟ್ ಪಿಟಿಷನ್ ಬಗ್ಗೆ ಆದಂಥಾ ಒಂದು ಜಡ್ಜ್‌ಮೆಂಟನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಸುಮಾರು ಸ್ವಲ್ಪ ಹೆಚ್ಚು ಕಡಿಮೆ ಮೈಸೂರು ಜಿಲ್ಲೆಯಲ್ಲಿ ೫೦೦ ಜನ ಪಟೇಲರು ಹೈಕೋರ್ಟ್ ಮುಂದೆ ಹೋಗಿದ್ದಾರೆ, ಅವರು ರಿಟ್ ಪಿಟಿಷನ್ಸ್ ಹಾಕಿದ್ದಾರೆ. ಇವು ೧೯೭೨ನೇ ಇಸವಿಯಲ್ಲಿ ಹಾಕಿದಂಥಾದ್ದು. ಅವುಗಳ ನಂಬರ್ಸ್ ಈ ರೀತಿ ಇವೆ: ೨೦೧೧, ೨೭೧೭, ೨೮೭೦ ಮತ್ತು ೨೯೬೭. ೧೯೭೨ನೇ ಇಸವಿಯಲ್ಲಿ ನಮ್ಮ ಹೈಕೋರ್ಟ್‌ನವರು ಈ ಬಗ್ಗೆ ಒಂದು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಅದರಲ್ಲಿ ಕೆಲವು ಮುಖ್ಯವಾದ ವಿಷಯಗಳನ್ನು ಮಾತ್ರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಅದು ಈ ರೀತಿ ಇದೆ :—

They have filed the writ petitions in the High Court in the year 1972. The W.P. Nos are : 2011, 2717, 2870 and 2967. I would like to quote some portion :

> "The grievance of the Petitioners is though they are rendering service as Patels, no provision has been made for payment of remuneration for the services which they have been rendering. It was submitted on behalf of the Petitioner that even though there is no statutory provision or an executive order of the State Government fixing remuneration of the Patels, they are infact paid potegi as was paid to the hereditary offices of the Patel. It was urged that the petitioners are entitled to be remunerated treating the office of the Patels held by them after coming into force of the Act as stipendiary posts and not as hereditary posts........."

This is what they have alleged.

The Government Pleader has conceded.

> "Sri Puttaswamy, the Learned Additional Government Advacate, appearing for the State, while agreeing with the submission of the Petitioner that they have been continued by the State Government under Section 19 of the Land Revenue Act contended that the State Government has in fact made provision providing remuneration to the Patel who are continued under Section 19 of the said Act........."

This is what the Learned Advocate who has appeared for the Government has said. He has conceded the position.

While passing the Order. the Court has observed ;

* * * *

"In this case we are not concerned with the question as to whether the remuneration fixed by the State Government is adequate or not nor can we be called upon to adjudicate upon

> the orders of the Government which we have referred to above. Infact the State Government is considering the pro–posal to make considerable amends to the Act by making suitable statutory provisions for continuing the posts of Patel as such............"

I want the Hon. Revenue Minister to bestow his attention on this..........

MR. CHAIRMAN.—He is attentive.

SRI M. C. BASAPPA,—The operative portion of the Judgement of the High Court says as follows ;

* * *

> "The High Court has finally eome to the conclusion......... When the steps are taken to make proper legislation in regard to the posts of Patels appropriate provision would also be made to absorb them having regard to the nature of the duties and responsibilities........."

ಈ ಬಗ್ಗೆ ಹೈಕೋರ್ಟಿನವರು ಕೊಟ್ಟಿರತಕ್ಕಂಥಾ ತೀರ್ಮಾನವನ್ನು ಈ ರಿಟ್ ಪಿಟಿಷನ್ಸ್‌ನಲ್ಲಿ ಹೇಳಿದ್ದಾರೆ ಸರ್ಕಾರದವರೂ ಕೂಡ ಈ ಬಗ್ಗೆ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ ಅದನ್ನು ತಾವು ಇಲ್ಲ ಎಂದು ಹೇಳುವುದು ಸರಿಯಲ್ಲ. ಮೊನ್ನೆತಾನೇ ಈ ಬಗ್ಗೆ ಇನ್ನೊಂದು ಡೆವಲಪ್‌ಮೆಂಟ್ ಆಗಿದೆ. ಸರ್ಕಾರದವರು ಈ ಬಗ್ಗೆ ಒಂದು ಹುಕುಂ ಅನ್ನು ಹೊರಡಿಸಿದ್ದಾರೆ. ಬಾಂಬೆ ಕರ್ನಾಟಕ ಏರಿಯಾದಲ್ಲಿರತಕ್ಕಂಥಾ ಪಟೇಲರನ್ನು ಈಗಾಗಲೇ ಟರ್ಮಿನೇಟ್ ಮಾಡಿದ್ದಾರೆ. ಈ ಬಗ್ಗೆ ನೋಟೀಸ್ ಅನ್ನೂ ಕೂಡ ಇಷ್ಯೂ ಮಾಡಿದ್ದೀರಿ, ಅದರ ನಂಬರ್ ಈ ರೀತಿ ಇದೆ. ಎಂ.ಆರ್.ಡಿ ೧೫೧ ಆಫ್ ೧೯೭೮ ಈ ಪ್ರಕಾರ ನಿಮ್ಮ ಸರ್ವಿಸ್ ಅಗತ್ಯ ಇಲ್ಲ ಎಂದು ಅವರನ್ನು ತೆಗೆಯುತ್ತಾ ಇದ್ದಾರೆ. ಇದು ನಿಜವಾಗಿಯೂ ಹೇಳುವುದಾದರೆ ವಿಲೇಜ್ ಮಟ್ಟದಲ್ಲಿ ಸ್ಥಳೀಯ ಅಧಿಕಾರಿಗಳು ಇಲ್ಲದೇ ಹೋದರೆ ನಿಮ್ಮ ಒಂದು ರೆವಿನ್ಯೂ ಕೆಲಸ ಮಾಡುವುದು ತುಂಬಾ ಕಷ್ಟವಾಗುತ್ತದೆ ಮತ್ತು ಸ್ಥಗಿತವಾಗಿದೆ ಎಂದು ಹೇಳುತ್ತೇನೆ. ಇದಲ್ಲದೆ ನಿಮ್ಮ ರೆವಿನ್ಯೂ ಜವಾಬ್ದಾರಿಯನ್ನೂ ಸಹ ನಿರ್ವಹಿಸುವುದು ಬಹಳ ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ಗ್ರಾಮಾಧಿಕಾರಿಗಳನ್ನು ಮುಂದುವರಿಸತಕ್ಕದು ಮತ್ತು ಅವರಿಗೆ ಕೊಡತಕ್ಕಂಥಾ ರೆನ್ಯೂಮರೇಷನ್ ಅನ್ನು ಕೊಡುವುದು ಮತ್ತು ಅವರ ಸರ್ವಿಸ್ ಅನ್ನು ಮುಂದುವರೆಸತಕ್ಕುದ್ದು ಸಹ ಹೈಕೋರ್ಟ್‌ನವರು ಹೇಳಿದ ರೀತಿಯಲ್ಲಿ ಸರ್ಕಾರದವರು ಸೂಕ್ತ ಒಂದು ಕಾನೂನನ್ನು ಈ ಬಗ್ಗೆ ಅಳವಡಿಸಿ ಅದನ್ನು ಜಾರಿಗೆ ತರಬೇಕು ಎಂದು ಹೇಳುತ್ತೇನೆ. ಆದರೆ ಈ ವಿಲೇಜ್ ಅಕೌಂಟೆಂಟರ್ ಕೈಯಲ್ಲಿ ಜಮೀನಿನ ಈ ಒಂದು ಲೆಕ್ಕಪತ್ರದ ವಹಿವಾಟನ್ನು ಕೊಡುತ್ತೇವೆ ಎಂದು ಅದು ಬಹಳ ಕಷ್ಟವಾಗುತ್ತದೆ. ಅವನಿಗೆ ಸರಿಯಾಗಿ ಪಹಣಿ ಬರೆಯುವುದೇ ಗೊತ್ತೇ ಇರುವುದಿಲ್ಲ, ಯಾರ ಯಾರ ಸರ್ವೇ ನಂಬರ್ ಎಲ್ಲಿರುತ್ತದೋ ಅನ್ನುವುದೇ ಗೊತ್ತಿರುವುದಿಲ್ಲ. ಈ ಒಂದು ಕಾರಣದಿಂದಲೂ ಕೂಡ ನಿಮ್ಮ ಅರಿಯರ್ಸ್ ಉಳಿಯುವುದಕ್ಕೆ ಕಾರಣವಾಗಿದೆ. ಅವನಿಗೆ ಕುಳವಾರು ಪಟ್ಟಿ ತಯಾರು ಮಾಡುವುದು ಬಹಳ ಕಷ್ಟ. ಆದುದರಿಂದ ಅಲ್ಲಿ ಸ್ಥಳೀಯವಾಗಿರತಕ್ಕಂಥಾ ಪಟೇಲರನ್ನು ಮುಂದುವರೆಸುವುದಕ್ಕೆ ಒಂದು ಅವಕಾಶ ಕೊಟ್ಟರೆ ನಿಮ್ಮ ಇಲಾಖೆ ಬಹಳ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ ತಾವು ಹೇಗಾದರೂ ಈ ಅಧಿಕಾರಿಗಳಿಗೆ ಒಂದು ವಸತಿ ಕೊಡುತ್ತೇವೆ ಎಂದು ಹೇಳುತ್ತೀರಿ. ಹಾಗೆಯೇ ಈ ವಿಲೇಜ್ ಅಕೌಂಟೆಂಟರಿಗೆ ಆಫೀಸ್ ಕಮ್ ರೆಸಿಡೆನ್ಸ್ ಇರುವ ರೀತಿಯಲ್ಲಿ ಪ್ರತಿ ಹಳ್ಳಿಯಲ್ಲೂ ಕೂಡ ಒಂದು ಕಟ್ಟಡವನ್ನು ಕಟ್ಟಿಕೊಟ್ಟರೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಏತಕ್ಕೆಂದರೆ ರೆವಿನ್ಯೂ ರಿಕಾರ್ಡ್ ಯಾವಾಗಲೂ ಬೇಕಾಗುತ್ತದೆ, ರೈತನಿಗೆ ಒಂದು ಸೊಸೈಟಿಯಲ್ಲಿ ಸಾಲ ತೆಗೆದುಕೊಳ್ಳುವುದಕ್ಕಾಗಲೀ ಬೇರೆ ಎಲ್ಲಾದೂ ಬ್ಯಾಂಕ್ ಈ ಕಡೆ ಸಾಲ ತೆಗೆದುಕೊಳ್ಳುವುದಕ್ಕಾಗಲಿ, ಸಾಲ ಸೌಲಭ್ಯಗಳನ್ನು ಪಡೆಯುವುದಕ್ಕೆ ರಶೀತಿ ಪಟ್ಟಿ, ಆರ್.ಆರ್.

ರಶೀತಿ ವಗೈರೆ ದಾಖಲೆಗಳು ಅತ್ಯಗತ್ಯವಾಗಿ ಬೇಕಾಗಿರುತ್ತದೆ. ಇದು ತಕ್ಷಣವಾಗಿ ಗ್ರಾಮ ಮಟ್ಟದಲ್ಲಿ ಸಿಗುವ ಹಾಗೆ ಏರ್ಪಾಡು ಮಾಡದೇ ಹೋದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಗ್ರಾಮಮಟ್ಟದಲ್ಲಿ ವಿಲೇಜ್ ಅಕೌಂಟೆಂಟರವರಿಗೆ ಆಫೀಸ್ ಕಮ್ ರೆಸಿಡೆನ್ಸ್ ಇರುವ ಹಾಗೆ ಒಂದು ಕಟ್ಟಡವನ್ನು ಕಟ್ಟುವುದು ಸೂಕ್ತ ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಜಮೀನು ಕೊಡತಕ್ಕಂಥಾ ವಿಚಾರದಲ್ಲಿ ಒಂದು ಹೇಳಿಕೆಯನ್ನೂ ಕೊಟ್ಟಿದ್ದೀರಿ ಮತ್ತು ನನಗೆ ಸಿಕ್ಕಿದಾಗಲೂ ಕೂಡ ತಾವು ಹೇಳಿದ್ದೀರಿ. ಏನು ಹೇಳಿದ್ದೀರಿ ಎಂದರೆ ಒಂದು ತಿಂಗಳಿನಲ್ಲಿ ಈ ಬಗ್ಗೆ ಇರತಕ್ಕಂಥಾ ರೆವಿನ್ಯೂ ಕೆಲಸವನ್ನು ಮುಗಿಸುತ್ತೇನೆ ಎಂದು. ನಿಮಗೆ ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ತರುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಎಷ್ಟು ಸರ್ವೆ ನಂಬರುಗಳಲ್ಲಿ ಎಷ್ಟು ಜಮೀನುಗಳು ಹಂಚಿಕೆಯಾಗಬೇಕಾಗಿವೆ ? ಈ ಜಮೀನುಗಳನ್ನು ಏತಕ್ಕೆ ಇದುವರೆಗೆ ಹಂಚಿಕೆಯಾಗಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆ ದಿವಸ ನಾನು ಉದಹರಿಸಿದ ಹಾಗೆ ೧೮೨೫ ಎಕರೆಯಷ್ಟು ಜಮೀನು ಫಾರೆಸ್ಟ್ ಲ್ಯಾಂಡ್ ರಿಲೀಸ್ ಆಗಿದೆ. ಈವೊತ್ತಿನವರೆಗೂ ಕೂಡ ಅವರಿಗೆ ಸಾಗುವಳಿ ಚೀಟಿಯನ್ನು ಕೊಟ್ಟಿಲ್ಲಾ. ಇದು ಒಂದನೇ ವಿಚಾರ. ಎರಡನೇ ವಿಷಯ ಏನೆಂದರೆ ೧೯೬೬ನೇ ಇಸವಿಯಲ್ಲಿ ಸುವರ್ಣಾವತಿ ಪ್ರಾಜೆಕ್ಟ್ ಸ್ಯಾಂಕ್ಷನ್ ಆದ ಸಮಯದಲ್ಲಿ ೧೫೦೦ ಎಕರೆ ಜಮೀನಷ್ಟು ಸುವರ್ಣಾವತಿ ಪ್ರಾಜೆಕ್ಟ್ ಕೆಳಗೆ ಇರುವ ಲ್ಯಾಂಡ್ ರಿಲೀಸ್ ಮಾಡಿದ್ದೀರಾ. ಈವೊತ್ತಿನವರಿಗೂ ಕೂಡ ಅವರಿಗೂ ಸಹ ಸಾಗುವಳಿ ಚೀಟಿ ಕೊಟ್ಟಿಲ್ಲಾ, ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ಈ ಸಂದರ್ಭದಲ್ಲಿ ತರುವುದಕ್ಕೆ ಇಷ್ಟಪಡುತ್ತೇನೆ. ನಾನು ಹೇಳತಕ್ಕಂಥಾ ಜಮೀನುಗಳೆಲ್ಲಾ ರಿಲೀಸ್ ಆಗಿವೆ. ಆದರಲ್ಲಿ ರೆವಿನ್ಯೂ ಪೊಸಿಷನ್‌ನಲ್ಲಿ ಕೆಲವು ಇವೆ, ಮತ್ತು ಇತ್ತೀಚೆಗೆ ಫಾರೆಸ್ಟ್‌ನಿಂದ ರೆವಿನ್ಯೂಗೆ ವರ್ಗಾಯಿಸಿದ್ದರಲ್ಲಿ ಅವರ ಪೊಸಿಷನ್‌ನಲ್ಲಿ ಕೆಲವು ಜಮೀನು ಇವೆ. ಇನ್ನು ಕೆಲವು ಎಕ್ಸೈಜ್ ಪೊಸಿಷನ್‌ನಲ್ಲಿ ಇವೆ. ಈ ಎಲ್ಲಾ ಸರ್ವೆ ನಂಬರ್‌ಗಳಲ್ಲೂ ಕೂಡ ೨೫–೩೦ ವರ್ಷದ ಲಾಗಾಯ್ತು ಅವರು ತಮ್ಮ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿದ್ದಾರೆ, ಅಲ್ಲದೆ ಇದನ್ನು ಅವರು ಅನುಭವಿಸುತ್ತಿದ್ದಾರೆ. ಅಂಥಾವರಿಗೂ ಕೂಡ ಸಾಗುವಳಿ ಚೀಟಿ ಇನ್ನೂ ಸಿಕ್ಕಿಲ್ಲಾ. ಈ ಬಗ್ಗೆ ನಾನು ಕೆಲವು ಸರ್ವೆ ನಂಬರ್ಸ್‌ಗಳನ್ನು ತಮ್ಮ ಗಮನಕ್ಕೆ ತರುತ್ತೇನೆ, ನಾನು ಈ ಮೊದಲು ಹೇಳಿದ ಹಾಗೆ ೧೮೨೫ ಎಕರೆ ಒಂದು ಇನ್ನೊಂದು ಸುವರ್ಣಾವತಿ ಪ್ರಾಜೆಕ್ಟ್ ಕೆಳಗೆ ಇರುವಂಥಾದ್ದು ೧೫೦೦ ಎಕರೆ ಜಮೀನು, ಇದಲ್ಲದೆ ಇನ್ನೂ ಕೆಲವು ಸರ್ವೆ ನಂಬರುಗಳ ಹೆಸರು ಹೇಳಬೇಕಾದರೆ ಅಮಚವಾಡಿ ಗ್ರಾಮದ ಸರ್ವೆ ನಂಬರ್ ೪೪೫ರಲ್ಲಿ ೫೭೪ ಎಕರೆ ಜಮೀನು ಮತ್ತು ಅರಕಲವಾಡಿ ಗ್ರಾಮದ ಸರ್ವೆ ನಂಬರ್ ೪೯೮ರಲ್ಲಿ ೫೦೬ ಎಕರೆ ಜಮೀನು, ಇವಕ್ಕೂ ಕೂಡ ಸಾಗುವಳಿ ಚೀಟಿ ಕೊಟ್ಟಿಲ್ಲಾ. ಇದು ಯಾವುದು ಬಂಜರು ಭೂಮಿಯಲ್ಲ. ೨೦–೨೫ ವರ್ಷಗಳಿಂದ ಈ ಜಮೀನುಗಳನ್ನು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ, ಆದರೆ ಅವರಿಗೆ ಸಾಗುವಳಿ ಚೀಟಿ ಇನ್ನೂ ಕೊಟ್ಟಿಲ್ಲಾ. ಆದರೆ, ಪುಸ್ತಕದಲ್ಲಿ ಮಾತ್ರ ಅರಣ್ಯ ಇಲಾಖೆ ಅಥವಾ ಅಬ್ಕಾರಿ ಇಲಾಖೆಯದೋ ಎಂದು ಬರೆದುಕೊಂಡಿರಬಹುದು. ನಾನು ಹೇಳುವುದು ವಾಸ್ತವ ಸಂಗತಿ. ಬೊಕ್ಕೆಪುರದ ಸರ್ವೆ ನಂ. ೧೨ರಲ್ಲಿ ೩.೧೨ ಎಕರೆ ಮತ್ತು ಸರ್ವೆ ನಂ. ೧೩ರಲ್ಲಿ ೫೦.೨ ಎಕರೆ ಹಾಗೂ ಸರ್ವೆ ನಂ. ೪೧ರಲ್ಲಿ ೫.೨೦ ಎಕರೆ, ಚೌಡಹಳ್ಳಿಯಲ್ಲಿನ ಸರ್ವೆ ನಂ. ೪೬ರಲ್ಲಿ ೫೯ ಎಕರೆ ಜಮೀನು ಸಾಗುವಳಿ ಮಾಡಲ್ಪಡುತ್ತಿದೆ. ಉಳುವವನೇ ಭೂಮಿ ಗೊಡೆಯನ್ನನಾಗಿ ಮಾಡುವ ತತ್ವವನ್ನು ನೀವು ಒಪ್ಪಿಕೊಂಡಿದ್ದರೆ, ಈ ಮೇಲಿನ ಜಮೀನುಗಳನ್ನು ಸಾಗುವಳಿ ಮಾಡುತ್ತಿರುವವರಿಗೆ ಕೊಡಿ. ಒಂದು ವೇಳೆ, ಈ ಜಮೀನು ಅರಣ್ಯ ಇಲಾಖೆಯ ವಶದಲ್ಲಿದ್ದರೆ, ರಿಲೀಸ್ ಮಾಡಿಸಿ. ಆದರೆ, ೨೦–೨೫ ತೆಂಗಿನ ಗಿಡ ಇದ್ದರೆ ಆದನ್ನು ಡೀಟ್ ರಿಜರ್ವ್ ಎಂದು ಮಾಡುವುದರಲ್ಲಿ ಅರ್ಥವೇನಿದೆ ? ಅದರಲ್ಲಿ ವಾಸ್ತವತೆ ಏನಿದೆ ? ಅಧಿಕಾರಿಗಳು ಖುದ್ದು ಹೋಗಿ ಜಮೀನಿನ ಪರಿಶೀಲನೆ ಮಾಡಬೇಕು. ೨೦–೨೫ ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದರೆ ಡೀಟ್ ರಿಜರ್ವ್ ಎಂದು ಏತಕ್ಕೆ ಪರಿಗಣಿಸಬೇಕು ? ಸಂಬಂಧಪಟ್ಟ ಇಲಾಖೆಗೆ ಬರೆದು, ಸನ್ನಿವೇಶ ತಿಳಿಸಿ ಜಮೀನನ್ನು ಏತಕ್ಕೆ ಬಿಡುಗಡೆ ಮಾಡಬಾರದೆಂದು ನಾನು ಒಬ್ಬ ಅಧಿಕಾರಿಯನ್ನು ಕೇಳಿದೆ. ಆ ಅಧಿಕಾರಿ ನನ್ನ ಅಭಿಪ್ರಾಯವನ್ನು ಒಪ್ಪಿದ. ಆದರೆ, ಈ ಬಗ್ಗೆ ಕಾರ್ಯವೇನೂ ಆಗಿಲ್ಲ. ಮಾನ್ಯ ಸಚಿವರು ಇದನ್ನೆಲ್ಲಾ ಒಂದು ತಿಂಗಳಲ್ಲಿ ಮಾಡಲಾಗುವುದೆಂದು ಹೇಳುತ್ತಾರೆ. ಒಂದು ತಿಂಗಳು ಬೇಡ, ಒಂದು ವರ್ಷ ಕಾಲಾವಕಾಶ ತೆಗೆದುಕೊಳ್ಳಿ, ಮುಂದಿನ ವಿಧಾನ ಸಭೆಯ ಅಧಿವೇಶನದೊಳಗೆ, ಜಮೀನನ್ನು ಸಾಗುವಳಿ ಮಾಡುತ್ತಿರುವವರಿಗೆ ಕೊಡುವುದಕ್ಕೆ ಏರ್ಪಾಡು ಮಾಡಿದರೆ ಒಳ್ಳೆಯದೆಂದು ನಾನು ಮಾನ್ಯ ಮಂತ್ರಿಯವರಿಗೆ ಹೇಳಬಯಸುತ್ತೇನೆ.

ಜನಗಳ ಯೋಗಕ್ಷೇಮ ನೋಡಿಕೊಳ್ಳುವ ವಿಚಾರ ಕಂದಾಯ ಇಲಾಖೆಗೆ ಸೇರಿದ್ದು. ಕ್ಷಾಮ ಡಾಮರಗಳು,ನೆರೆ ಬಂದರೆ ಈ ಇಲಾಖೆ ಜವಾಬ್ದಾರಿ ಹೆಚ್ಚು ಇರುತ್ತದೆ. ಅನೇಕ ಸಂದರ್ಭಗಳಲ್ಲಿ ಬೇರೆ ಇಲಾಖೆಗಳು ಕಂದಾಯ ಇಲಾಖೆ ಕಡೆ ಬೆರಳು ತೋರಿಸಿ ಇದರ ಮೇಲೆ ಸಂಪೂರ್ಣ ಜವಾಬ್ದಾರಿಯನ್ನು ಹೊರಿಸುತ್ತವೆ, ಅವು ಮಾತ್ರ ಹೊಗುವುದಿಲ್ಲ. ಕಳೆದ ಎರಡೂವರೆ ತಿಂಗಳಿನಿಂದ ನಮ್ಮ ಕಡೆ ಮಳೆಯಾಗಿಲ್ಲ. ಹೊಸದಾಗಿ ಚುನಾಯಿತರಾದ ನಮ್ಮ ತಾಲ್ಲೂಕು ಮಂಡಲಿಯ ಅಧ್ಯಕ್ಷರು ಮೊಟ್ಟಮೊದಲ. ನನಗೆ ಬರೆದ ಪತ್ರದಲ್ಲಿ, ಅಲ್ಲಿ ಮಳೆ ಇಲ್ಲದೆ ಬೆಳೆ ಎಲ್ಲಾ ನಷ್ಟವಾಗಿದೆ ಎಂದು ತಿಳಿಸಿದ್ದಾರೆ? ಅಲ್ಲಿ ಎರಡೂವರೆ ತಿಂಗಳಿಂದ ಮಳೆ ಇಲ್ಲದೆ ಮುಖ್ಯ ಬೆಳೆಯಾದ ಜೋಳ ಸಂಪೂರ್ಣವಾಗಿ ನಾಶವಾಗಿದೆ, ವಾಣಿಜ್ಯ ಬೆಳೆಯಾದ ಹಿಪ್ಪನೇರಳೆ ಸಹ ಒಣಗಿ ಹೋಗುತ್ತಿದೆ. ಇದರಿಂದ ಕೂಲಿಗಳನ್ನು ಅವಲಂಬಿಸಿರುವ ಜನಗಳಿಗೆ ಕೂಲಿ ಸಿಕ್ಕದೆ ಬಹಳ ಕಷ್ಟವಾಗಿದೆ. ಆದುದರಿಂದ, ನಮ್ಮ ತಾಲ್ಲೂಕಿನಲ್ಲಿ ಆದಷ್ಟು ಬೇಗ ಪರಿಹಾರ ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ನಿನ್ನೆ ಮೊನ್ನೆ ಸ್ವಲ್ಪ ಮಳೆ ಬಿದ್ದಿದೆ ಎಂದು ಕೇಳಿದ್ದೇನೆ. ಅಲ್ಲಿನ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಮಾತ್ರ ಸುಧಾರಿಸಿದೆ. ಆದರೂ ಅಲ್ಲಿನ ರೈತರು ಬೆಳೆಯನ್ನು ಕಳೆದುಕೊಂಡಿದ್ದಾರೆ. ಇನ್ನೊಂದು ವಿಚಾರವೇನೆಂದರೆ. ಕಳೆದ ವರ್ಷ ಕೈಗೊಂಡ ಪರಿಹಾರ ಕಾರ್ಯದಲ್ಲಿ ಮೈಸೂರು ಜಿಲ್ಲೆಯ ಕೆಲವರು ಏಜನ್ಸಿಗಳಿಗೆ ಇನ್ನೂ ಪೇಮೆಂಟ್ ಆಗಿಲ್ಲ. ನಮ್ಮ ಚಾಮರಾಜನಗರ ತಾಲ್ಲೂಕಿನಲ್ಲೇ ೩೬ ಸಾವಿರ ರೂಪಾಯಿಗಳ ಬಾಕಿ ಇದೆ. ಇದೆಲ್ಲಾ? ಯಾರು ಕೆಲಸ ಮಾಡಿದರು ? ಯಾರು ಕೊಟ್ಟರು ? ಏನಿದೆಲ್ಲಾ ? ಈ ವರ್ಷದ ಬಡ್ಜೆಟ್ ಮಂಜೂರಾದ ಮೇಲೆ ಬಾಕಿ ಕೊಡಲಾಗುವುದೆಂದು ಅದನ್ನು ಹಾಗೆಯೇ ನಿಲ್ಲಿಸಿಕೊಂಡಿದ್ದಾರೆ. ಆದುದರಿಂದ, ತಾವು ಇಲ್ಲಿ ಯಾವ ರೀತಿ ಕೆಲಸವಾಗುತ್ತಿದೆ ಎನ್ನುವುದನ್ನು ವಿಚಾರ ಮಾಡಬೇಕು. ಮೈಸೂರು ಜಿಲ್ಲೆಯಲ್ಲಿ ಒಟ್ಟು ೨-೩ ಲಕ್ಷ ರೂಪಾಯಿಗಳ ಪೇಮೆಂಟ್ ಇನ್ನೂ ಆಗಬೇಕಾಗಿದೆ ಎಂಬ ವರ್ತಮಾನವಿದೆ. ಅದನ್ನು ತಾವು ವಿಚಾರ ಮಾಡಬೇಕು.

ಭೂಸುಧಾರಣೆ ವಿಚಾರವಾಗಿ ಸರ್ಕಾರದವರು ಬಹಳವಾಗಿ ಹೇಳಿದ್ದಾರೆ. ಅದರ ಬಗ್ಗೆ ಕೆಲವು ವಾಸ್ತವಾಂಶಗಳನ್ನು ಕೊಡಬೇಕೆಂದು ನಾನು ಇಚ್ಛೆಪಡುತ್ತೇನೆ. ಭೂ ನ್ಯಾಯ ಮಂಡಲಿಗಳ ಮುಂದೆ ಬಂದಿರುವ ಒಟ್ಟು ಘೋಷಣೆಗಳು ೭,೫೬,೩೬೧. ಇವುಗಳಲ್ಲಿ ಡಿಪೋಸ ಆಗಿರುವುದು. ೨,೯೩,೨೬. ಇದರಲ್ಲಿ ೨೫,೯೬೮ ಪ್ರಕರಣಗಳಲ್ಲಿ ಪ್ರೀಮಿಯಂ ಹಣವನ್ನು ಪೂರ್ತ ಕಟ್ಟಲಾಗಿದೆ. ಇವುಗಳಲ್ಲಿ೪,೯೧೬ ಪ್ರಕರಣಗಳಿಗೆ ಮಾತ್ರ ಹಕ್ಕು ಪತ್ರವನ್ನು ಕೊಡಲಾಗಿದೆ. ಇಷ್ಟು ವರ್ಷಗಳಿಂದ ಕೇವಲ ೨೧ ಸಾವಿರ ಪ್ರಕರಣಗಳಿಗೆ ಮಾತ್ರ ಹಕ್ಕು ಪತ್ರವದ್ನು ಕೊಟ್ಟಿರುವುದು ನಿಮ್ಮ ಸಾಧನೆಯೋ ? ಇದೇ ಏನು ನಿಮ್ಮ ಪ್ರಗತಿ ?

ಸಣ್ಣ ಹಿಡುವಳಿದಾರರಿಗೆ ಮತ್ತು ವಿಧವೆಯರಿಗೆ ಭೂಸುಧಾರಣೆ ಶಾಸನದಿಂದ ರಿಯಾಯಿತಿ ಕೊಡಿ ಎಂದು ಸರ್ಕಾರವನ್ನು ನಾವು ಅನೇಕ ಬಾರಿ ಮನವಿ ಮಾಡಿಕೊಂಡೆವು. ಆದರೆ, ವಿನಾಯಿತಿಯನ್ನು ಸರ್ಕಾರ ಕೊಡಲಿಲ್ಲ. ಹೋಗಲಿ, ಪೇಮೆಂಟ್‌ನಾದರೂ ಲಂಪ್‌ಸಂ ಆಗಿ ಕೊಡುವ ಹಾಗೆ ಅವಕಾಶ ಮಾಡಿರಿ ಎಂದು ಈಗ ಕೇಳುತ್ತಿದ್ದೇನೆ. ಈ ಸಾರಿಯು ಬಡ್ಜೆಟ್‌ನಲ್ಲಿ ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಭೂ ನ್ಯಾಯ ಮಂಡಲಿಗಳ ತೀರ್ಮಾನದ ಮೇಲೆ ಅಪೀಲ್‌ಗೆ ಅವಕಾಶವಿರಬೇಕೆಂದು ನಾವು ಎಷ್ಟು ಹೇಳಿದರೂ ನೀವು ಮಾಡುವುದಿಲ್ಲ. ಹೋಗಲಿ, ರಿವಿಜನ್‌ಅಧಿಕಾರವಾದರೂ ಸರ್ಕಾರ ಇಟ್ಟುಕೊಳ್ಳಲಿ. ಈ ರಿವಿಜನ್ ಪವರ್ ಇದ್ದಿದ್ದೇ ಆದರೆ, ನಾವು ನೀಡುವ ತೀರ್ಪು ಸರ್ಕಾರದ ಗಮನಕ್ಕ ಬರುತ್ತದೆ, ಅದಲ್ಲೇನಾದರೂ ತಪ್ಪು ಮಾಡಿದ್ದರೆ ಸರ್ಕಾರದವರು ಆಕ್ಷೇಪ ಮಾಡತಕ್ಕ ಸನ್ನಿವೇಶವಿದೆ ಎಂದು ಅಸಿಸ್ಟೆಂಟ್ ಕಮಿಷನರಿಗೆ ಸ್ವಲ ಭಯ ಬರುತ್ತದೆ. ಅಷ್ಟೇ ಅಲ್ಲದೆ, ರಿವಿಜನ್ ಅಧಿಕಾರವಿರುವುದರಿಂದ, ಎಷ್ಟೋ ತೊಂದರೆಗಳನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಆದರೆ, ಇದೆಲ್ಲಾ ಕಾಲಹರಣವಾಗುತ್ತದೆ, ಇದಕ್ಕೆಲ್ಲಾ ಅವಕಾಶ ಕೊಡುವುದು ಸಾಧ್ಯವಿಲ್ಲದ ಮಾತು ಎಂದು ಸರ್ಕಾರದವರು ಹೇಳುತ್ತಿದ್ದಾರೆ. ನ್ಯಾಯಾಲಯಗಳಿಗೆ ಅಪೀಲು ಹೋಗುವುದರಲ್ಲಿ ಸ್ವಲ್ಪ ಕಾಲವಿಳಂಬವಾಗುತ್ತದೆ ಎನ್ನುವುನಾದರೆ, ರಿವಿಜನಲ್ ಅಧಿಕಾರವನ್ನು ಸಂಬಂಧಪಟ್ಟ ವಿಭಾಗಾಧಿಕಾರಿಗೆ ಕೊಡಿ ಅಥವಾ ಸರ್ಕಾರವೇ ಇಟ್ಟುಕೊಳ್ಳಲಿ. ಇದರಿಂದ, ಕೈಕೆಳಗಿರುವ ಅಧಿಕಾರಿಗಳಿಗೆ ಭಯವಿರುತ್ತದೆ. ಮಾನ್ಯ ಕಂದಾಯ ಸಚಿವರು ಈ ಅಧಿವೇಶನದಲ್ಲಿ ಸುಮಾರು ೩೦ ತಿದ್ದುಪಡಿಗಳನ್ನು ತರುವುದಾಗಿ ಹೇಳಿಕೆ ಕೊಟ್ಟಿದ್ದಾರೆ. ಆ

ಪೈಕಿ ಈ ಒಂದು ತಿದ್ದುಪಡಿಯನ್ನೂ ತರಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥಿಸುತ್ತೇನೆ. ಹೇಳತಕ್ಕ ವಿಚಾರಗಳು ಹಲವಾರು ಇದ್ದರೂ ಕಾಲಾವಕಾಶವಿಲ್ಲದಿರುವುದರಿಂದ, ಇಷ್ಟು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ (ಸಾಗರ)—ಮಾನ್ಯ ಸಭಾಪತಿಗಳೇ, ಮಾನ್ಯ ಕಂದಾಯ ಸಚಿವರು ಈ ಸಭೆಯ ಮುಂದೆ ಮಂಡಿಸಿರುವ ಕಂದಾಯ ಖಾತೆ ಬೇಡಿಕೆಯನ್ನು ಬೆಂಬಲಿಸುತ್ತಾ ಕೆಲವೊಂದು ಅಂಶಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಮುಖ್ಯವಾಗಿ; ಕಂದಾಯ ಖಾತೆ ರೈತರಿಗೆ ಸಂಬಂಧಪಟ್ಟ ಖಾತೆ. ಸುಮಾರು ಶೇಕಡ ಎಪ್ಪತ್ತರಷ್ಟು ರೈತರಿರುವ ಈ ರಾಜ್ಯದಲ್ಲಿ ಸರ್ಕಾರ ಎಂದರೆ ಅವರು ತಿಳಿದುಕೊಂಡಿರುವುದು ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ಮತ್ತು ಗ್ರಾಮ ಮಟ್ಟದಲ್ಲಿ ಗ್ರಾಮಲೆಕ್ಕಿಗ ರೈತರ ದೈನಂದಿನ ಕೆಲಸ ಕಾರ್ಯಗಳಲ್ಲಿ ಈ ಅಧಿಕಾರಿಗಳ ನಿಕಟ ಸಂಪರ್ಕವಿರುತ್ತದೆ. ಆದುದರಿಂದ, ಈ ಮಟ್ಟದಲ್ಲಿ ರೈತರಿಗಾಗುವ ಕೆಲವು ತೊಂದರೆಗಳನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಮೊಟ್ಟಮೊದಲು ರೈತ ವರ್ಗದ ಪರವಾಗಿ ನಾನು ಈ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಏಕೆಂದರೆ, ಭೂ ಒಡೆತನ ತನಗೆ ಬೇಕೆಂದು ತಲೆತಲಾಂತರದಿಂದ ಆಶೋತ್ತರಗಳ ಹಾದಿಯಲ್ಲಿ ಬಂದ ಗೇಣಿದಾರನ ಆಸೆ ಇಂದು ಕೈಗೂಡಿದೆ. ಭೂ ನ್ಯಾಯ ಮಂಡಲಿಗೆ ಗೇಣಿದಾರರಿಂದ ಬಂದ ಏಳು ಲಕ್ಷ ಚಿಲ್ಲರೆ ಅರ್ಜಿಗಳಲ್ಲಿ ಸುಮಾರು ಮೂರು ಲಕ್ಷಕ್ಕೂ ಮೇಲ್ಪಟ್ಟು ಅರ್ಜಿಗಳು ತೀರ್ಮಾನವಾಗಿವೆ. ಅಂದರೆ ಅಷ್ಟು ಮಂದಿ ಇಂದು ಭೂ ಒಡೆತನದ ಆನಂದವನ್ನು ಅನುಭವಿಸುತ್ತಿದ್ದಾರೆ. ತಲತಲಾಂತರದಿಂದ ಬಂದ ಆಶೋತ್ತರ ಈ ಸರ್ಕಾರದ ಆಡಳಿತದ ಕಾಲದಲ್ಲಿ ಈಡೇರಿತಲ್ಲ ಎನ್ನುವುದು ಅವರ ಸಂತೋಷಕ್ಕೆ ಇನ್ನೊಂದು ಕಾರಣ. ಅದಕ್ಕಾಗಿ ನಾವು ಈ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಮಾನ್ಯ ಬಸಪ್ಪನವರು ಮಾತನಾಡುತ್ತಾ ಅರ್ಜಿಗಳು ಇತ್ಯರ್ಥವಾಗುವುದರಲ್ಲಿ ತಡವಾಗುತ್ತಿದೆ, ಅದು ತೀವ್ರಗತಿಯಲ್ಲಿ ಕಾರ್ಯಗತವಾಗುತ್ತಿಲ್ಲವೆನ್ನುವ ಮಾತನ್ನು ಹೇಳಿದರು. ಇಷ್ಟು ಹೊತ್ತಿಗೆ ಈಗಾಗಲೇ ಎಲ್ಲಾ ಅರ್ಜಿಗಳೂ ತೀರ್ಮಾನವಾಗುತ್ತಿದ್ದುವು. ಮಧ್ಯೆ ಟ್ರಿಬ್ಯೂನಲ್‌ಗಳು ರದ್ದಾದುವು. ಯಾವ ವೇಗದಲ್ಲಿ ಭೂಸುಧಾರಣೆಯನ್ನು ಜಾರಿಗೆ ತರಬೇಕು ಎಂದು ಕೆಲಸ ಮಾಡುತ್ತಿದ್ದರೋ ಅದು ನಿಂತು ಹೋದದ್ದು ಜನಪ್ರಿಯ ಸರ್ಕಾರ ರದ್ದುಗೊಳಿಸಿ ರಾಜ್ಯಪಾಲರ ಆಡಳಿತ ಜಾರಿಗೆ ತಂದ ಕೇಂದ್ರ ಸರ್ಕಾರದ ಕ್ರಮದಿಂದ ಎಂದು ಮಾನ್ಯ ಸದಸ್ಯರು ಗಮನಿಸಬೇಕು. ಮುಂದೆ ಮಾನ್ಯ ರೆವಿನ್ಯೂ ಮಂತ್ರಿಗಳು ಬಹಳ ತೀವ್ರಗತಿಯಲ್ಲಿ ಈ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂದು ನಮ್ಮ ಗಮನಕ್ಕೆ ಬಂದಿದೆ. ಈ ಕೂಡಲೇ ಇದಕ್ಕೆ ಮಾನ್ಯ ಮಂತ್ರಿಗಳು ಒಂದು ಚಾಲನೆಯನ್ನು ಕೊಟ್ಟು ಭೂಸುಧಾರಣೆಯನ್ನು ಅತ್ಯಂತ ವೇಗದಿಂದ ಆರಂಭವಾಗುವ ರೀತಿಯಲ್ಲಿ ಮಾಡುತ್ತಾರೆ ಎಂದು ನಾನು ನಂಬಿ ರೈತರ ಪರವಾಗಿ ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ.

ಇನ್ನು ಭೂಮಿಯನ್ನು ಕಳೆದುಕೊಂಡ ಮಾಜಿ ಭೂಮಾಲೀಕರಿಗೆ ಪರಿಹಾರವನ್ನು ಕೊಡುವುದು, ಅಂಗವಿಕಲರಿಗೆ, ವಿಧವೆಯರಿಗೆ, ಮತ್ತು ಅತ್ಯಂತ ಸಣ್ಣ ಹಿಡವಳಿದಾರರಿಗೆ ಎರಡು ಸಾವಿರ ರೂಪಾಯಿಗಳ ವರೆಗೆ ಪರಿಹಾರವನ್ನು ಕೊಡಬೇಕೆಂದು ವಿಧಿಸಿದ್ದಾರೆ ಅದನ್ನು ಕೊಡವುದರಲ್ಲಿಯೂ ಬಹಳ ತಡವಾಗುತ್ತಿದೆ ಅದು ಅವರಿಗೆ ಬಹಳ ತೀವ್ರವಾಗಿ ಸಿಕ್ಕಬೇಕು. ಅವರಲ್ಲಿ ಅನೇಕರು ಬಡವರು ೫೦೦ ರೂಪಾಯಿಗಳು ಸಿಕ್ಕಿದರೆ ತಮಗೆ ಸಾಕು ಎನ್ನುವರೂ ಇದ್ದಾರೆ. ಅಂಥವರ ಬಗೆ ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸಿ ಶೀಘ್ರವಾಗಿ ಪರಿಹಾರವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಈಗ ಪರಿಹಾರವನ್ನು ಕೊಡತಕ್ಕ ಕ್ರಮದಲ್ಲಿ ಅಧಿಕಾರಿಗಳು ವಿಶೇಷವಾದ ಆಸಕ್ತಿಯನ್ನು ವಹಿಸುತ್ತಾ ಇಲ್ಲ. ಅವರು ಯಾರಿಗೆ ಮೊದಲು ಪರಿಹಾರವನ್ನು ಕೊಡುತ್ತಾರೆ ಎಂದರೆ ಯಾರು ಸಂಬಂಧಪಟ್ಟ ಅಧಿಕಾರಿಗಳನ್ನು ಮೊದಲೇ ಭೇಟಿ ಮಾಡಿ ಮಾತನಾಡಿಕೊಂಡು ಹೋಗುತ್ತಾರೆಯೋ ಅಂಥವರಿಗೆ ಬೇಗ ಪರಿಹಾರವನ್ನು ಅಧಿಕಾರಿಗಳು ಕೊಡುತ್ತಿದ್ದಾರೆ. ಕ್ರಮವಾಗಿ ಎಲ್ಲರಿಗೂ ಪರಿಹಾರವನ್ನು ಕೊಡುವಂತಾಗಬೇಕು. ಈ ದೃಷ್ಟಿಯಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಟ್ಟು ಸರಿಯಾಗಿ ಪರಿಹಾರ ವಿತರಣೆಯಾಗುವಂತೆ ಮಾಡಬೇಕು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಂಗವಿಕಲರು ವಿಧವೆಯರು, ಇವರಿಗೆ ಪರಿಹಾರವನ್ನು ಕೊಡುವುದರಲ್ಲಿ ಆದ್ಯತೆ ದೊರೆಯುತ್ತದೆ ಎಂದು ಹೇಳುತ್ತಾರೆ. ಆದರೆ ಅದು ನಿಜವಲ್ಲ. ಇನ್ನೊಂದು ವಿಷಯವೇನೆಂದರೆ ಈ ಕಾನೂನು ಬರುವುದಕ್ಕೆ ಮುಂಚೆ ಯಾರು ವಿಧವೆಯರು ಇದ್ದರು ಅವರಿಗೆ ಮಾತ್ರ ಆದ್ಯತೆ ದೊರೆಯುತ್ತದೆ. ಈ ಕಾನೂನು ಬಂದ ನಂತರ ಯಾರು ವಿಧವೆಯಾ

ರಾಗಿದ್ದಾರೆ ಅವರಿಗೆ ಈ ಸೌಲಭ್ಯ ಇಲ್ಲ ಎಂದು ಹೇಳುವುದು ನಿಜವಾಗಿಯೂ ತೀವ್ರತರವಾಗಿ ಪರಿಗಣನೆ ಮಾಡತಕ್ಕ ವಿಷಯ ಮತ್ತು ಇದರ ಬಗ್ಗೆ ಮಾನ್ಯ ಮಂತ್ರಿಗಳು ನಿಗಾ ವಹಿಸಿ ಅದಕ್ಕೆ ಬೇಕಾದ ವಿವರಣೆ ಯನ್ನು ಅಧಿಕಾರಿಗೆ ಕೊಡಬೇಕೆಂದೂ ನಾನು ಒತ್ತಾಯಿಸುತ್ತೇನೆ.

ಮತ್ತೊಂದು ವಿಷಯ ಭೂಸುಧಾರಣೆಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ ಅತ್ಯಂತ ಚಿಕ್ಕ ಹಿಡುವಳಿದಾರರು ಎಂದರೆ ಎರಡು ಹೆಕ್ಟೇರು ಖುಷ್ಕಿ ಜಮೀನನ್ನು ಇಟ್ಟುಕೊಂಡಿರುವವರು ಮತ್ತು ಒಂದು ಹೆಕ್ಟೇರು ನೀರಾವರಿ ಜಮೀನನ್ನು ಇಟ್ಟುಕೊಂಡಿರುವವರು ಇವರ ಬಗ್ಗೆ ವಿಶೇಷವಾಗಿ ಪರಿಗಣನೆ ಮಾಡಬೇಕು. ಇಂಥವರಿಗೆ ಕಂದಾಯನ್ನು ಕೂಡ ಕೊಡುವುದಕ್ಕೆ ಶಕ್ತಿ ಇಲ್ಲ ಅವರಿಗೆ ಕಂದಾಯವನ್ನು ವಿನಾಯ್ತಿ ಮಾಡುವ ಔದಾರ್ಯವನ್ನು ತೋರಿಸಿದ ಸರ್ಕಾರ ದವರು ಅವರು ಪರಿಹಾರದ ಕಂತನ್ನು ಕೊಡಬೇಕು ಎಂದರೆ ೧೦ ವರ್ಷ ೧೫ ವರ್ಷಗಳು ಕಂತನ್ನು ಕೊಡುವುದಕ್ಕೆ ಮಾಡಿದ ಸಾಲದ ಹೊರೆಯಿಂದ ತೊಂದರೆಯಾಗಿ ಆ ಜಮೀನನ್ನು ಕೂಡ ಸರ್ಕಾರದವರೇ ತೆಗೆದುಕೊಳ್ಳತಕ್ಕಂಥಾ ರಿಸ್ಥಿತಿ ಬರುತ್ತದೆ. ಈ ಒಂದು ದೌರ್ಬಲ್ಯ ಇರತಕ್ಕ ವಸ್ತು ಸ್ಥಿತಿಯ ಕಡೆಗೆ ಲಕ್ಷ್ಯ ಕೊಟ್ಟು ಇಂಥಾ ಚಿಕ್ಕ ಹಿಡುವಳಿದಾರರಿಗೆ ಪರಿಹಾರವನ್ನು ಕೊಡದೆ ಭೂ ಒಡೆಯರನ್ನಾಗಿ ಮಾಡುವ ಕ್ರಾಂತಿಕಾರಕ ಸುಧಾರಣೆಯನ್ನು ಮಾನ್ಯ ಮಂತ್ರಿಗಳು ತಮ್ಮ ಕಾಲದಲ್ಲಿ ಜಾರಿಗೆ ತರಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ನಾನು ಮಲೆನಾಡು ಭಾಗದಿಂದ ಬಂದಿರುವವನಾಗಿರುವುದರಿಂದ ಒಂದೆರಡು ವಿಷಯಗಳನ್ನು ಕಂದಾಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳುತ್ತೇನೆ. ತಮಗೆ ಗೊತ್ತಿದೆ, ಮಳೆ ಬಾರದಿದ್ದರೆ ಕ್ಷಾಮ ಪ್ರದೇಶ ಎಂದು ಪರಿಗಣಿಸಿ ಕಂದಾಯವನ್ನು ರಿಮಿಷನ್ ಮಾಡತಕ್ಕಂಥಾ ಕ್ರಮ ಹಾಗೂ ಈ ವಿಚಾರ ಅನೇಕ ಸಲ ನಾವು ಪತ್ರಿಕೆಯಲ್ಲಿ ನೋಡುತ್ತಿದ್ದೇವೆ. ಮಲೆನಾಡಿನಲ್ಲಿ ಹೆಚ್ಚಿಗೆ ಮಳೆಯಾಗಿ ರೈತರು ತೊಂದರೆಗೆ ಸಿಕ್ಕಿಕೊಳ್ಳುತ್ತಿದ್ದಾರೆ. ಆದರೆ ಯಾವಾಗಲೂ ಆ ಕಡೆ ಸರ್ಕಾರದವರು ಕಡಿಮೆ ಲಕ್ಷ್ಯ ಕೊಡು ತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇವೊತ್ತು ಮಲೆನಾಡಿನಲ್ಲಿ ವಿಪರೀತವಾಗಿ ಮಳೆಯಾಗಿ ಭೀಕರ ವಾದ ಒಂದು ವಾತಾವರಣ ಉಂಟಾಗಿದೆ ಎಂದು ಈ ದಿವಸ ಕೂಡ ನನ್ನ ಕ್ಷೇತ್ರದಿಂದ ಸುದ್ದಿ ಬರುತ್ತಿದೆ. ಅಲ್ಲಿ ಹಳ್ಳಿಗರು ಅತ್ಯಂತ ಕಷ್ಟ ಪರಿಸ್ಥಿತಿಯಲ್ಲಿ ಇದ್ದಾರೆ. ಬತ್ತದ ಬೆಳೆಗಳು, ನಾಟಿ ಹಾಕಿದಂಥದ್ದು, ಎಲ್ಲವೂ ಕೂಡ ತೊಳೆದು ಹೋಗಿದೆ, ಕೊಚ್ಚಿ ಹೋಗಿದೆ. ಮೈದಾನ ಪ್ರದೇಶದಲ್ಲಿ ಮಳೆ ಬಾರದೆ ಹೋದರೆ ಬೆಳೆಗಳೆಲಾ ಒಣಗಿ ಹೋಗುತ್ತದೆ. ನಮ್ಮ ಮಲೆನಾಡಿನಲ್ಲಿ ಹೆಚ್ಚು ಮಳೆ ಆದಾಗ ಬೆಳೆಯೆಲ್ಲಾ ಹಾಳು ಮಾಡುವುದರ ಜೊತೆಗೆ ಭೂಮಿ ಎಲ್ಲಾ ಕೊರಕಲು ಬಿದ್ದು ಹೋಗುತ್ತದೆ. ಆಮೇಲೆ ಆ ಭೂಮಿಗೆ ಹಣ ಖರ್ಚು ಮಾಡಿ ಅದನ್ನು ಬೆಳೆಯನ್ನು ಬೆಳೆಯುವುದಕ್ಕೆ ಯೋಗ್ಯವಾದುದನ್ನಾಗಿ ಮಾಡಬೇಕು. ಮಲೆನಾಡಿನ ಪರಿಸ್ಥಿತಿ ತೊಂದರೆ ವಿಶಿಷ್ಟವಾಗಿದೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಟ್ಟು ಮಲೆನಾಡಿನವರ ಪರಿಸ್ಥಿತಿಯನ್ನು ಔದಾರ್ಯದಿಂದ ಪರಿಶೀಲನೆ ಮಾಡಬೇಕು ಎಂದು ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಆದರಲ್ಲೂ ಇಲ್ಲಿಯ ರೈತರ, ಸಾಮಾನ್ಯವಾಗಿ ಕಂದಾಯ ವನ್ನು ಬಾಕಿ ಇಟ್ಟುಕೊಳ್ಳತಕ್ಕವರಲ್ಲ. ಕಂದಾಯವನ್ನು ನಿಷ್ಠೆಯಿಂದ ಕೊಡುತ್ತಿದ್ದರು. ಯಾವ ಖರ್ಚಿಗೆ ಇಲ್ಲದಿದ್ದರೂ ಕೂಡ ಮೊದಲು ಕಂದಾಯವನ್ನು ಕೊಡಬೇಕು ಎನ್ನುವ ನಿಷ್ಠೆ ಇರುವ ರೈತರು ಮಲೆನಾಡಿನ ಭಾಗದಲ್ಲಿ ಇದ್ದಾರೆ ಕಂದಾಯದ ಬಾಕಿಯನ್ನು ಇಟ್ಟುಕೊಳ್ಳದೆ ಪ್ರಾಮಾಣಿಕ ರೈತರು ಇಂದು ಕಂದಾಯದ ಬಾಕಿಯನ್ನು ಇಟ್ಟುಕೊಂಡು ಅವರನ್ನು ಕೋರ್ಟಿಗೆ ದಬ್ಬುವಂತಹ ಪರಿಸ್ಥಿತಿ ಉಂಟಾಗಿದೆ. ಅವರು ಕಂದಾಯವನ್ನು ಕೊಡದಿರುವುದಕ್ಕೆ ಡಿಮೆಂಡ್‌ನ ಲೋಪದೋಷಗಳೇ ಕಾರಣ. ಮುಖ್ಯವಾಗಿ ನೀರಾವರಿ ತೆರಿಗೆಯ ವಿಚಾರ. ಮಲೆನಾಡಿನ ಕೆರೆಗಳು ಮೈದಾನದ ಕೆರೆಗಳಂತೆ ನೀರು ಭರ್ತಿಯಾಗಿ ನಿಂತು ಅಷ್ಯೂರ್ಡ್ ಇರಿಗೇಷನ್ ಅಂದರೆ ಅಚ್ಚುಕಟ್ಟಿನ ಜಮೀನುಗಳಿಗೆ ನೀರನ್ನು ನಿರ್ದಿಷ್ಟ ವಾಗಿ ಕೊಡತಕ್ಕಂಥಾ ಸ್ಥಿತಿಯಲ್ಲಿ ಇಲ್ಲ ತುಂಬುವ ಕೆರೆಗಳೇ ಇಲ್ಲ. ಕೆರೆಗಳಲ್ಲಿ ಹೂಳು ತುಂಬಿ ಮುಚ್ಚಿ ಹೋಗಿವೆ ಈ ವಿಷಯದಲ್ಲಿ ಲೋಕೋಪಯೋಗಿ ಇಲಾಖೆಯ ಬೇಡಿಕೆಗಳು ಬಂದಾಗ ನಾನು ಪ್ರತ್ಯೇಕವಾಗಿ ವಿವರಿಸುತ್ತೇನೆ. ಈಗ ಸೂಕ್ಷ್ಮವಾಗಿ ಹೇಳುವುದಾದರೆ ಅಲ್ಲಿನ ಕೆರೆಗಳಿಗೆ ತೂಬು, ಕೋಡಿ ಮತ್ತು ಏರಿಯ ಕಾಮಗಾರಿಗಳನ್ನು ಮಾಡಿಸುತ್ತಾರೆ. ಇದರಿಂದ ಕಂಟ್ರಾಕ್ಟರುಗಳಿಗೆ ಹಣ ಹೋಗು ತ್ತದೆಯೋ ಹೊರತು ಜನಗಳಿಗೆ ಅನುಕೂಲವಾಗಿಲ್ಲ ಈ ಕೆರೆಗಳಲ್ಲಿ ನೀರು ನಿಲ್ಲುವ ಮಟ್ಟ ಅಚ್ಚುಕಟ್ಟಿನ ಜಮೀನಿಗೆ ನೀರು ಪೂರೈಸುವ ಸ್ಥಿತಿಯಲ್ಲಿ ಇಲ್ಲ. ಮಳೆಗಾಲದಲ್ಲಿ ಜಮೀನಿಗೆ ನೀರು ಕಟ್ಟಬೇಕಾಗಿಲ್ಲ. ಅಲ್ಲಿ ಕೆರೆಗಳನ್ನು ಕಟ್ಟುವಂತೆ ಮಾಡುವುದು ಏತಕ್ಕೆಂದರೆ ಕಣಿವೆ ಪ್ರದೇಶದಲ್ಲಿ ಇರತಕ್ಕ ಭಾಗಾಯಿತು

ಮತ್ತು ತರೀ ಜಮೀನಿನಲ್ಲಿ ಕೊರಕಲು ಬೀಳದಂತೆ ಇರಲಿ. ಜಮೀನಿನ ಸಾರವೆಲ್ಲಾ ನೀರಿನಲ್ಲಿ ಕೊಚ್ಚಿಕೊಂಡು ಹೋಗದಂತೆ ಇರಲಿ ಎನ್ನುವ ಉದ್ದೇಶದಿಂದ ಕಟ್ಟಿದಂತಹ ಕೆರೆಗಳು. ಆ ಕೆರೆಯಲ್ಲಿ ಒಂದೂ ಬೆಳೆಗೆ ನೀರನ್ನು ಉಪಯೋಗಿಸುವುದಿಲ್ಲ. ಬರೀ ಮಳೇ ನೀರೇ ಸಾಕಾಗುತ್ತದೆ. ಎರಡು ಬೆಳೆಯನ್ನು ತೆಗೆದರೆ ಮಾತ್ರ ಅಂಥವರು ನೀರನ್ನು ಉಪಯೋಗಿಸಬಹುದು. ಶಿವಪ್ಪನಾಯಕನ ಕಾಲದಲ್ಲಿ ಕಟ್ಟಿದಂತಹ ದೊಡ್ಡ ದೊಡ್ಡ ಕೆರೆಗಳು ಏನಿವೆ ಅಲ್ಲಿ ಮಾತ್ರ ಬೇಕಾದರೆ ನೀರಾವರಿ ತೆರಿಗೆಯನ್ನು ಹಾಕಬಹುದು. ಸಣ್ಣ ಪುಟ್ಟ ಕೆರೆಗಳು ಸರಿಯಾಗಿ ತುಂಬುವುದೇ ಇಲ್ಲ ಎಲ್ಲಾ ಕೆರೆಗಳೂ ಹೂಳುತುಂಬಿಕೊಂಡು ಮುಚ್ಚಿ ಹೋಗಿವೆ. ತೂಬಿನ ಮಟ್ಟಕ್ಕೆ ನೀರು ಏರುವುದಿಲ್ಲ ನೀರು ಜಮೀನಿಗೆ ಹರಿಯುವುದಿಲ್ಲ ಇಂಥಾ ಜಮೀನನ್ನು ಅಚ್ಚುಕಟ್ಟು ಪ್ರದೇಶ ಎಂದುಪರಿಗಣನೆ ಮಾಡಿ ನೀರಾವರಿತೆರಿಗೆಯನ್ನು ವಿಧಿಸಿದ್ದಾರೆ ಇದನ್ನು ದಯೆಮಾಡಿ ಮಾನ್ಯಮಂತ್ರಿಗಳು ಪರಿಶೀಲನೆ ಮಾಡಬೇಕು. ಈ ಭೂಮಿಗೆ ಬೇರೆ ಜಲಾಯಶದಮುಂದೆ ಇರತಕ್ಕ ಜಮೀನಿಗೂ ಅಲ್ಲಿ ನೀರನ್ನು ಪಡೆಯುವುದಕ್ಕೂ ಇಲ್ಲಿನೀರನ್ನು ಪಡೆಯುವುದಕ್ಕೂ ವ್ಯತ್ಯಾಸ ಇದೆ. ಈ ದೃಷ್ಟಿಯಿಂದ ಮಲೆನಾಡಿನ ರೈತರ ಕಷ್ಟವನ್ನು ಪರಿಗಣಿಸಿ ಅವರಿಗೆ ನೀರಾವರಿ ತೆರಿಗೆಯಿಂದ ವಿನಾಯ್ತಿ ನೀಡಿ ಹಿಂದೆ ಇದ್ದಂತಹ ಕನ್‌ಸಾಲಿಡೇಟೆಡ್ ಅಸೆಸ್‌ಮೆಂಟ್ ರೀತಿಯಲ್ಲಿ ನಮ್ಮ ಮಲೆನಾಡಿನ ಭೂಮಿಗೆ ಕಂದಾಯವನ್ನು ವಿಧಿಸಬೇಕು. ನೀರಾವರಿ ತೆರಿಗೆಯನ್ನು ಹಾಕುವ ಕ್ರಮವನ್ನು ತಪ್ಪಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ಮೇಲ್ಪಟ್ಟ ಅಧಿಕಾರಿಗಳಿಗೆ ಅಪೀಲು ಹಾಕಿಕೊಳ್ಳಬಹುದು ಎಂದು ನಿಯಮ ಇದ್ದರೂ ಕೂಡ ಪ್ರತಿಯೊಬ್ಬ ರೈತರೂ ಅಪೀಲು ಹಾಕುವುದು ಕಷ್ಟವಾಗುತ್ತದೆ, ಕೆಲವು ಸಂದರ್ಭಗಳಲ್ಲಿ ಅಪೀಲು ಹಾಕಿದರೂ ಕೂಡ ಸಂಬಧಂಪಟ್ಟವರ ಜಮೀನಿಗೆ ಯಾವಾಗಲಾದರೂ ಒಂದು ಸಲ ಅಧಿಕಾರಿಗಳು ಜೀಪಿನಲ್ಲಿ ಸುಮ್ಮನೆ ಇನ್‌ಸ್ಪೆಕ್ಷನ್‌ಗೆ ಬಂದು ಹೋಗುತ್ತಾರೆ. ಆದರೆ ಅವರು ವಾಸ್ತವವಾಗಿ ಕರೆಯಿಂದ ಜಮೀನಿಗೆ ನೀರು ಹರಿಯುತ್ತಿದೆಯೇ ಜಮೀನು ಯಾವ ಲೆವೆಲ್‌ನಲ್ಲಿ ಇದೆ, ಕೆರೆಯ ನೀರು ಯಾವ ಲೆವೆಲ್‌ನಲ್ಲಿ ಹರಿಯುತ್ತಿದೆ ಎಂಬುದನ್ನು ನೋಡುವುದೇ ಇಲ್ಲ. ಸುಮ್ಮನೆ ನೀರು ತೆರಿಗೆಯನ್ನು ವಿಧಿಸುತ್ತಾರೆ. ಇದರಿಂದ ಅನಗತ್ಯ ತೊಂದರೆ ಉಂಟಾಗಿದೆ. ವಿಶೇಷವಾಗಿ ಇನ್ನೂ ಕೆಲವು ವಿಚಾರಗಳನ್ನು ನಾನು ಹೇಳಬೇಕಾಗಿದೆ. ಇದನ್ನು ತಿಳಿಸುವುದಾಗಿ ನನಗೆ ಮಾನ್ಯ ಅಧ್ಯಕ್ಷರು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕೆರೆಗಳ ಬಗೆ ಕನ್‌ಸಾಲಿಡೇಟೆಡ್ ಅಸೆಸ್‌ಮೆಂಟ್ ಮಾಡಬೇಕೆಂದು ಮಾನ್ಯ ಕಂದಾಯ ಮಂತ್ರಿಗಳನು ಕೇಳಿಕೊಳ್ಳುತ್ತೇನೆ. ನಮ್ಮ ಡಿವಿಜನ್‌ನ ಈ ಕಂದಾಯುದ ಬಗ್ಗೆ ೧೯೬೫ರಲ್ಲಿ ಹೈಕೋರ್ಟ್‌ನಲ್ಲಿ ಪ್ರಶ್ನಿಸಲ್ಪಟ್ಟಾಗ ಹೊಸದಾಗಿ ಈ ವಿಷಯುವನ್ನು ಲೆಜಿಸ್ಲೇಚರ್‌ನಲ್ಲಿ ತಂದು ಅನುಕೂಲ ಮಾಡುವುದಾಗಿ ಹಿಂದಿನ ಸರ್ಕಾರ ಹೇಳಿತ್ತು. ಆದರೆ ಈಗ ಏಕಾಏಕಿ ಮತ್ತೆ ೧೯೬೫ನೇ ಇಸವಿಯಿಂದಲೇ ಈ ಕಂದಾಯವನ್ನು ಕೊಡಬೇಕೆಂದು ಕೇಳುತ್ತಿರುವುದರಿಂದ ರೈತರ ಮೇಲೆ ಎಷ್ಟು ಹೊರೆ ಬೀಳುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ೧೯೭೫ರ ಸೆಟ್ಲ್‌ಮೆಂಟ್ ಕಂದಾಯವನ್ನು ಕೊಡುವುದರಲ್ಲಿ ನಮ್ಮ ವಿರೋಧ ಏನೂ ಇಲ್ಲ, ಆದರೆ ೧೯೬೫ರಿಂದ ಪೂರ್ವಾನ್ವಯ ಜಾರಿಗೊಳಿಸಿದ ನೀತಿಯಿಂದ ಪ್ರಾಮಾಣಿಕವಾಗಿ ಸರ್ಕಾರಕ್ಕೆ ಕಂದಾಯವನ್ನು ಕೊಡಬೇಕೆಂದಿರುವ ರೈತರೂ ಕೂಡ ದಿಕ್ಕು ತೋಚದೆ ಕೋರ್ಟ್‌ಗೆ ಹೋಗಿ ಅಲೆಯುವ ಪರಿಸ್ಥಿತಿ ಬಂದಿದೆ. ಈ ಒಂದು ತೊಂದರೆಯನ್ನು ಹೋಗಲಾಡಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ತರಿ ಮತ್ತು ಭಾಗಾಯ್ತು ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಮಲನಾಡಿನಲ್ಲಿ ಸಾಗುವಳಿ ಭೂಮಿಗಳೆಲ್ಲಾ ಕಣಿವೆಗಳಲ್ಲಿದೆ. ಇಲ್ಲಿ ಮಳೆ ಬಿದ್ದಾಗ ಅಲ್ಲಲ್ಲೇ ಮಣ್ಣು ಕೊಚ್ಚಿಹೋಗಿ ಕೊರಕಲುಗಳಾಗುತ್ತವೆ. ಸಣ್ಣ ಸಣ್ಣ ಹಿಡುವಳಿದಾರರಿಗೆ ಅವರ ಜಮೀನಿನ ಪಕ್ಕದಲ್ಲಿ ಮಣ್ಣು ತೆಗೆದು ಕೊಡಿಸಿಕೊಂಡ ಒತ್ತುವರಿ ಭೂಮಿ ೨ ಗುಂಟೆ ೪ ಗುಂಟೆ ಜಮೀನು ಆ ರೈತರಿಗೇ ಕೊಡುವುದು ನ್ಯಾಯವಾಗಿದೆ. ಸರ್ಕಾರಕ್ಕೆ ಕಂದಾಯ ಕೂಡ ಜಾಸ್ತಿ ಬರುತ್ತದೆ. ಆದ್ದರಿಂದ ಸರ್ಕಾರದವರು ಇದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಇನ್ನೊಂದು ವಿಷಯ ಹೇಳುವುದಾದರೆ ತಹಸೀಲ್ದಾರರು ಮತ್ತು ಗ್ರಾಮ ಲೆಕ್ಕಾಧಿಕಾರಿಗಳಿಂದ ಲ್ಯಾಂಡ್ ಗ್ರಾಂಟ್ ಕೆಲಸ ವೇಗವಾಗಿ ಆಗುವುದಕ್ಕೆ ಬಹಳ ಅಡಚಣೆಯಾಗಿವೆ. ಉದಾಹರಣೆಗೆ ಹೇಳುವುದಾದರೆ ೭೧-೭೨ನೇ ಇಸವಿಯಲ್ಲಿ ಲ್ಯಾಂಡ್ ಗ್ರಾಂಟ್ ಕಮಿಟಿಯಲ್ಲಿ ಯಾರ್ಯಾರಿಗೆ ಜಮೀನನ್ನು ಕೊಡಬೇಕೆಂದು ತೀರ್ಮಾನವಾಗಿತ್ತೋ ಅದರ ಪ್ರಕಾರ ಇದುವರೆಗೂ ಸಂಬಂಧಪಟ್ಟವರಿಗೆ ಜಮೀನನ್ನು ಕೊಟ್ಟಿಲ್ಲ. ಇಂಥ ಅರ್ಜಿಗಳು ಅನೇಕ ವರ್ಷಗಳಿಂದ

ಹಾಗೆಯೇ ಬಿದ್ದಿವೆ. ನಾನು ಹೇಳುವುದರಲ್ಲಿ ತಮಗೆ ನಂಬಿಕೆ ಇಲ್ಲದಿದ್ದರೆ, ತಾವು ನಾನು ಹೇಳುವ ಸ್ಥಳಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಯಾವ ಅಧಿಕಾರಿ ತಪ್ಪು ಮಾಡಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಈ ಪೆಂಡಿಂಗ್ ಇರುವ ಅರ್ಜಿಗಳು ಇನ್ನು ಒಂದು ವರ್ಷದೊಳಗಾಗಿ ತೀರ್ಮಾನವಾಗು ವಂತೆ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ ಈ ಗ್ರಾಮ ಲೆಕ್ಕಿಗರಿಗೆ ಒಂದು ತರಬೇತಿಯನ್ನು ಕೊಡುತ್ತೇವೆಂದು ಹೇಳಿದ್ದೀರಿ. ಅದು ಒಳ್ಳೆಯದು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳು ವುದಾದರೆ ಈಗಿನ ಗ್ರಾಮಲೆಕ್ಕಿಗರು ವರ್ತಿಸುವ ರೀತಿಯನ್ನು ನೋಡಿದರೆ ಹಿಂದಿನ ಶ್ಯಾನುಭೋಗರೇ ಎಷ್ಟೋ ಪಾಲು ಉತ್ತಮವಾಗಿದ್ದರು ಎನಿಸುತ್ತದೆ. ಹೇಗೆ ಎಂದರೆ ಹಿಂದೆ ಶ್ಯಾನುಭೋಗರಿಗೆ ತರ ಕಾರಿ, ತುಪ್ಪ, ಬಾಳೆಹಣ್ಣು ಮುಂತಾದ್ದನ್ನು ತೆಗೆದುಕೊಂಡು ಹೋಗಿ ಕೊಟ್ಟರೆಅಷ್ಟಕ್ಕೇ ತೃಪ್ತರಾಗು ತ್ತಿದ್ದರು. ಆದರೆ ಈಗಿರುವ ಗ್ರಾಮಲೆಕ್ಕಿಗರಿಗೆ ನಾವು ಎಷ್ಟು ದುಡ್ಡು ಕೊಟ್ಟರೂ ಅವರು ತೃಪ್ತ ರಾಗುವುದಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ, ರೈತರು ಈ ಗ್ರಾಮಲೆಕ್ಕಿಗರ ವರ್ತನೆಯನ್ನು ನೋಡಿ ಸರ್ಕಾರದ ಬಗೆಗೇ ತಪ್ಪು ತಿಳಿದುಕೊಳ್ಳುವ ಸ್ಥಿತಿಯಾಗಿದೆ. ಆದ್ದರಿಂದ ಈ ಗ್ರಾಮಲೆಕ್ಕಿಗರು ರೈತರ ಬಳಿ ಯಾವ ರೀತಿ ನಡೆದುಕೊಳ್ಳಬೇಕು ಎನ್ನುವ ಬಗ್ಗೆ ಸೂಕ್ತ ಬಂದೋಬಸ್ತು ಮಾಡಿ ರೈತರಿ ಗಾಗುವ ಕಿರುಕುಳವನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಮತ್ತೊಂದು ವಿಷಯ ಹೇಳುವುದಾದರೆ, ಸರ್ವೆ ಇಲಾಖೆಯ ನಿಧಾನ ಪ್ರವೃತ್ತಿಯನ್ನು ಇಷ್ಟೇ ಎಂದು ಹೇಳುವುದಕ್ಕಾಗುವುದಿಲ್ಲ. ಅನೇಕ ವರ್ಷಗಳಿಂದ ಫೋಡಿ ಪೀಸ್‌ಕಟ್ಟಿರುವ ಜಮೀನು ಗಳೂ ಸರ್ವೆಯಾಗಿಲ್ಲ. ಯಾವ ಯಾವ ಗ್ರಾಮದಲ್ಲಿ ಎಷ್ಟೆಷ್ಟು ಪೋಡಿ ರಿಕಾರ್ಡುಗಳು ಸರ್ವೆ ಆಗದೇ ಬಾಕಿ ಉಳಿದಿದೆ ಎಂಬ ಬಗ್ಗೆ ತನಿಖೆ ಮಾಡಬೇಕು, ತಾವು ಬಹಳ ದೂರದೃಷ್ಟಿಯುಳ್ಳವರು ಕ್ರಾಂತಿ ಕಾರಿ ವಿಚಾರವುಳ್ಳ ವ್ಯಕ್ತಿಗಳು, ರೈತರ ಕಷ್ಟ ಸುಖಗಳನ್ನು ಚೆನ್ನಾಗಿ ಅರಿತವರಾಗಿರುವುದರಿಂದ ನಾನು ಹೆಚ್ಚಿಗೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಮಲೆನಾಡಿನ ವಿಚಾರಗಳು ಬಹಳವಾಗಿರುವುದ ರಿಂದ ವಿಶೇಷವಾದ ಗಮನವನ್ನು ನಮ್ಮ ಭಾಗಕ್ಕೆ ಕೊಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಂಚೇಗೌಡ (ಮದ್ದೂರು).—ಸನ್ಮಾನ್ಯ ಅಧ್ಯಕ್ಷರೆ, ರೆವಿನ್ಯೂ ಇಲಾಖೆ ಬೇಡಿಕೆ ಗಳಿಗೆ ಸಂಬಂಧಪಟ್ಟಂತೆ ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ಈ ಇಲಾಖೆಯ ಬಗ್ಗೆ ಕೆಲವು ಅಂಶಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ.

ಮೊದಲನೆಯದಾಗಿ ಹೇಳುವುದಾದರೆ, ನಮ್ಮ ತಾಲ್ಲೂಕಿನಲ್ಲಿ ಸರ್ಕಾರಿ ಜಮೀನು ಏನಿದೆ ಇದರಲ್ಲಿ ಬಹುತೇಕ ನೀರಾವರಿ ಪ್ರದೇಶ. ಅಲ್ಲದೆ ಬಹು ಬೆಲೆಬಾಳತಕ್ಕ ಭಾಗ. ಇದನ್ನು ವಿಲೇವಾರಿ ಮಾಡುವ ಬಗ್ಗೆ ಸರ್ಕಾರದವರು ಒಂದು ಕಾನೂನು ಮಾಡಿದ್ದಾರೆ, ಆದರೆ ಆ ಕಾನೂನು ಪ್ರಕಾರ ಯಾರಿಗೆ ಜಮೀನು ಎಷ್ಟು ಸೇರಬೇಕಾಗಿತ್ತೋ ಅದರಲ್ಲೂ ಹರಿಜನರಿಗೆ ಸೇರಬೇಕಾಗಿತ್ತೋ ಅದು ಸಿಕ್ಕದೆ ಅಲ್ಲಿನ ಕೆಲವು ಪ್ರಭಾವೀ ವ್ಯಕ್ತಿಗಳಿಗೆ ಸಿಕ್ಕುವಂತಾಗಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಅನೇಕ ಅರ್ಜಿಗಳು ಮಾನ್ಯ ಕಂದಾಯ ಮಂತ್ರಿಯವರಿಗೆ ಬಂದಿವೆ. ಇದರ ಬಗ್ಗೆ ಕೂಲಂಕಷ ವಿಚಾರಣೆ ನಡೆಸಿ ಯಾರಿಗೆ ಕಾನೂನು ಪ್ರಕಾರ, ನ್ಯಾಯವಾಗಿ ಆ ಜಮೀನು ದೊರಕಬೇಕೋ ಅವರಿಗೆ ದೊರಕಿಸಿ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಸುಮಾರು ೨೦ ವರ್ಷಗಳ ಹಿಂದೆ ನಮ್ಮ ತಾಲ್ಲೂಕಿನಲ್ಲಿ ತರೀಕೆರೆ ಕಾಲೋನಿ ಎಂದು ಮಾಡಿ ಅದಕ್ಕೆ ಸುಮಾರು ೨೦೦ ಎಕರೆ ಜಮೀನನ್ನು ಕೊಟ್ಟು ಅದರಲ್ಲಿ ಸುಮಾರು ೮೦ ಮನೆಗಳನ್ನೂ ಕಟ್ಟಿಕೊಟ್ಟರು. ಈಗ್ಗೆ ೫-೬ ವರ್ಷಗಳಿಂದೀಚೆಗೆ ಅಲ್ಲಿ ವಾಸಿಸುತ್ತಿದ್ದ ಹರಿಜನರಿಗೆ ಚಿತ್ರಹಿಂಸೆ ಕೊಟ್ಟು ಅವರನ್ನು ಅಲ್ಲಿಂದ ಓಡಿಸಿ ಕೆಲವು ಪ್ರಭಾವಿ ರೈತರು ಆ ಜಮೀನನ್ನು ಉಳುಮೆ ಮಾಡುತ್ತಿದ್ದಾರೆ. ಈ ಬಗ್ಗೆ ಪೋಲೀಸ್‌ನವರಿಗೂ, ಸರ್ಕಾರಕ್ಕೂ ಎಷ್ಟೇ ದೂರುಗಳನ್ನು ಕೊಟ್ಟರೂ ಇದುವರೆಗೂ ಆ ಜನರಿಗೆ ನ್ಯಾಯ ದೊರಕಿಲ್ಲ. ಇವತ್ತು ಅವರು ಪ್ರಾಣ ಭಯದಿಂದ ಊರನ್ನು ಬಿಟ್ಟು ಹೊರಗಡೆ ಹೋಗಿ ಜೀವನ ಮಾಡುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈಗಲಾದರೂ ಆ ಸ್ಥಳಕ್ಕೆ ಭೇಟಿ ಕೊಟ್ಟು ನಿಜಸ್ಥಿತಿ ಏನು ಎಂಬುದನ್ನು ತಿಳಿದು ಯಾರಿಗೆ ಅನ್ಯಾಯವಾಗಿದೆ ಅವರಿಗೆ ನ್ಯಾಯವನ್ನು ಒದಗಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ನಮ್ಮ ಊರು ಪಕ್ಕದಲ್ಲಿ ಅವ್ವೇರಹಳ್ಳಿ ಎಂದು ಒಂದು ಗ್ರಾಮ ಇದೆ. ಅಲ್ಲಿರುವ ೨ ಮತ್ತು ೩ ಸರ್ವೆ ನಂಬರ್ ಜಮೀನಿಗೆ ಹರಿಜನರು ಮತ್ತು ಜಮೀನು ಇಲ್ಲದವರು ಅರ್ಜಿಯನ್ನು ಕೊಟ್ಟುಕೊಂಡಿದ್ದರು. ಅದು ಒಳ್ಳೆಯ ಫಲವತ್ತಾದಂಥ ಜಮೀನು. ಸುಮಾರು ೧೯೫೮ನೇ ಇಸವಿಯಿಂದಲೂ ಆ ಊರಿನ

ಪ್ರಭಾವಯುತವಾದಂಥ ವ್ಯಕ್ತಿಗಳು ತೋಪು ಬೆಳೆಸುವುದಕ್ಕೆ ಎಂದು ಸನ್ನದ್ ಪಡೆದಿದ್ದರು. ಕಳೆದ ಸಾರಿ ನಾನು ಶಾಸಕನಾಗಿದ್ದಾಗ ಇದರ ಬಗ್ಗೆ ಪರತ್ತುಗಳು ಏನು ಇವೆ ಅವುಗಳಿಗೆ ತದ್ವಿರುದ್ಧವಾಗಿ ನಡೆದು ಕೊಂಡು ಅದನ್ನು ತರಿ ಜಮೀನಾಗಿ ಮಾರ್ಪಾಡು ಮಾಡಿಕೊಂಡು ಅದರ ಮುಖಾಂತರ ಫಸಲು ಬೆಳೆಯು ತ್ತಿರುವುದನ್ನು ಹೇಳಿದ್ದೆ. ಇಂಥ ಒಂದು ದೂರನ್ನು ನಾವು ಕೊಟ್ಟಾಗ ಅದನ್ನು ಪರಿಶೀಲನೆ ಮಾಡಿ ೬೯ನೇ ಇಸವಿಯಲ್ಲಿ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿ, ಆ ಜಮೀನನ್ನು ಸರ್ಕಾರದವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು ೧೯೭೩ನೇ ಇಸವಿಯಲ್ಲಿ ಇದೇ ಜಮೀನನ್ನು ಅದೇ ವ್ಯಕ್ತಿಗಳಿಗೆ ತೋಪು ಬೆಳೆಸುವುದಕ್ಕೆಂದು ಮತ್ತೆ ಮಂಜೂರು ಮಾಡಿದ್ದಾರೆ. ಅಲ್ಲೆ ಗೋಕಟ್ಟೆ ಇದೆ, ನಮ್ಮ ತಾಲ್ಲೂಕಿನ ಕೆಲವು ಗೋಕಟ್ಟೆಗಳನ್ನು ಮೈನರ್ ಇರಿಗೇಷನ್ ಟ್ಯಾಂಕ್ ಆಗಿ ಮಾರ್ಪಾಟು ಮಾಡುವುದಕ್ಕೆ ಅವಕಾಶ ಕೊಡಿ ಎಂದು ನಾನು ಅರ್ಜಿಯನ್ನು ಕೊಟ್ಟುಕೊಂಡಿದ್ದೆ. ಇದಕ್ಕೆ ನನಗೆ ನಮ್ಮ ರೆವಿನ್ಯೂ ಸೆಕ್ರೆಟರಿಯವರಿಂದ ಒಂದು ಪತ್ರ ಬಂತು ಏನೆಂದರೆ, ಗೋಕಟ್ಟೆಯನ್ನು ಯಾವ ಉದ್ದೇಶದಿಂದ ಸರ್ಕಾರದವರು ಮಾಡಿದ್ದಾರೋ ಆ ಉದ್ದೇಶ ಸಾಫಲ್ಯವಾಗಬೇಕಾದರೆ ಇದನ್ನು ಸಣ್ಣ ನೀರಾವರಿ ಟ್ಯಾಂಕ್ ಆಗಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಈಗ ಅದೇ ವ್ಯಕ್ತಿಗಳು ಸನ್ನದ್ ಪಡೆದುಕೊಂಡು ಗೋಕಟ್ಟೆಯನ್ನು ನೀರಾವರಿ ಕೆರೆಯನ್ನಾಗಿ ಮಾಡಿಕೊಂಡು ಸುಮಾರು ಐದು ವರ್ಷಗಳಿಂದಲೂ ಪದೇ ಪದೇ ಕೆರೆ ಒಡೆದು ಹೋಯಿತು ಎಂದು ರಿಪೇರಿ ನೆಪ ಹಾಕಿಕೊಂಡು, ರಿಪೇರಿ ಅವಶ್ಯಕತೆ ಇಲ್ಲದಿದ್ದರೂ ಕೂಡ ಕ್ಷಾಮ ಪೀಡಿತ ಪ್ರದೇಶಗಳಿಗೆ ಇಟ್ಟಂಥ ಹಣವನ್ನು ವೆಚ್ಚಮಾಡಿದ್ದಾರೆ. ಆ ಗೋಕಟ್ಟೆಗೆ ಸುಮಾರು ಇಲ್ಲಿಯವರೆಗೆ ೫೦ ಸಾವಿರ ರೂಪಾಯಿಗಳನ್ನು ಇಂಜಿನಿಯರುಗಳು ಖರ್ಚು ಮಾಡಿದ್ದಾರೆಂದು ಗೊತ್ತಾಗಿದೆ. ಸನ್ನದ್‌ಗೆ ಕೊಟ್ಟಂಥ ಜಮೀನಿನಲ್ಲಿ ತೋಪು ಬೆಳೆಸುವುದಕ್ಕೆ ಬದಲಾಗಿ, ಬುಲ್ಡೋಜರ್ ತೆಗೆದುಕೊಂಡು ಬಂದು ಗರೀಬಿ ಹಟಾವ್ ಕಾರ್ಯಕ್ರಮದಲ್ಲಿ ಸೈಟುಗಳನ್ನು ಮಾಡಿ ಮನೆಕಟ್ಟುವ ನೆಪದಲ್ಲಿ, ಜಮಾನನ್ನು ರೈತ ಮಾಡಿಕೊಂಡು ಕಬ್ಬನ್ನು ಬೆಳೆದು, ಅದನ್ನು ಚಾಮುಂಡೇಶ್ವರಿ ಫ್ಯಾಕ್ಟರಿಗೆ ಹೊಡೆದಿದ್ದಾರೆ. ಈ ವರ್ಷವೂ ಕಬ್ಬನ್ನು ಬೆಳೆದು ಫ್ಯಾಕ್ಟರಿಗೆ ಸರಬರಾಜು ಮಾಡುವುದಲ್ಲಿದ್ದಾರೆ. ಇದು ಸುಮಾರು ೧೧ ಎಕರೆಯುಳ್ಳ ಜಮೀನು. ಆ ಊರಿನ ಪಟೇಲರು, ಮತ್ತು ಪಂಚಾಯತಿಯವರು, ಅಲ್ಲಿ ಯಾರು ಯಾರಿಗೆ ಜಮೀನು ಇಲ್ಲವೋ ಅಂಥವರಿಗೆ ಈ ಜಮೀನನ್ನು ಕೊಡಿಸಬೇಕೆಂದು ಅರ್ಜಿಯನ್ನು ಹಾಕಿಕೊಂಡರೂ ಇವತ್ತಿನವರೆಗೂ ಅವರಿಗೆ ನ್ಯಾಯ ದೊರೆತಿಲ್ಲ ಮತ್ತು ಆ ಜಮೀನಿನಲ್ಲಿ ತೋಪು ಬೆಳಸಲು ಸನ್‌ದ್ ಕೊಡುವುದಕ್ಕೆ ಸರ್ಕಾರಿ ಆಜ್ಞೆಯಾಗಿದೆ. ಇದರ ಬಗ್ಗೆ ನಾನು ಒಂದು ಕಾಪಿಯನ್ನು ಪಡೆಯುವುದಕ್ಕೋಸ್ಕರ ಲಾಯರ್ ಮೂಲಕ ಪ್ರಯತ್ನ ಪಟ್ಟರೂ ಕೂಡ ಇದುವರೆಗೂ ಕಾಪಿಯನ್ನು ಕೊಟ್ಟಿಲ್ಲ. ಇದು ಏನು ಉದ್ದೇಶ ಅಂದರೆ, ಸರ್ಕಾರದ ಕಾನೂನು ಒಂದೊಂದು ಪಕ್ಷದವರಿಗೆ ಒಂದು, ಒಬ್ಬ ವ್ಯಕ್ತಿಗೆ ಒಂದೊಂದು ಇದೆಯೋ ಅಥವಾ ಎಲ್ಲರಿಗೂ ಒಂದೆ ಕಾನೂನು ಅನ್ವಯವಾಗುತ್ತದೆ ಎನ್ನು ವುದನ್ನು ತಿಳಿದುಕೊಳ್ಳುವುದಕ್ಕೋಸ್ಕರ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಮುಖಂಡರುಗಳು ಎಂದು ಹೇಳಿಗೊಳ್ಳುವವರು, ಶಾಸಕರಾಗಿ, ಮಂತ್ರಿಗಳಾಗಿ ಬರುತ್ತಾರೆ, ಅವರು ಮಾಡತಕ್ಕ ಕೆಲಸಗಳು ಯಾವುವು ಎನ್ನುವುದನ್ನು ಜನಗಳಿಗೆ ಹೇಳುವುದಕ್ಕೋಸ್ಕರ ನಾನು ಇದನ್ನು ಹೇಳುತ್ತಿದ್ದೇನೆ. ದಯ ವಿಟ್ಟು ಮಾನ್ಯ ಮಂತ್ರಿಗಳು ಈ ಬಗ್ಗೆ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಕೇಳಿ ಕೊಳ್ಳುತ್ತೇನೆ.

ಚೇರ್ಮನ್‌ರವರು.—ಈ ವಿಷಯ ಕೋರ್ಟಿನಲ್ಲಿ ಏನಾದರೂ ಇದೆಯೋ ?

ಶ್ರೀ ಎಂ. ಮಂಚೇಗೌಡ.—ಇಲ್ಲ. ಇನ್ನು ವಿಲೇಜ್ ಅಕೌಟೆಂಟರ ಬಗ್ಗೆ ಇದುವರೆಗೂ ಮಾನ್ಯ ಸದಸ್ಯರುಗಳು ಕೆಲವರು ಹೇಳಿದ್ದಾರೆ. ಇದರ ಬಗ್ಗೆ ನಾನು ಹೇಳುವುದಾದರೆ, ಸ್ವಲ್ಪ ಕಾನೂನಿನಲ್ಲಿ ಮಾರ್ಪಾಡು ಮಾಡುವುದು ಒಳ್ಳೆಯದು. ಯಾವ ಬ್ಯಾಂಕಿಗೆ, ಯಾವ ಸೊಸೈಟಿಗಾದರೂ ನಾವು ಹೋದರೆ ಖಾತೆಯಿಲ್ಲದೆ ಸಾಲ ಕೊಡುವುದಕ್ಕೆ ಸಾಧ್ಯವಿಲ್ಲ. ಲ್ಯಾಂಡ್ ರಿಫಾರಂಸ್ ಆಕ್ಟ್ ಪ್ರಕಾರ ಯಾವುದೇ ಜಮೀನನ್ನು ಪರಭಾರೆ ಮಾಡುವುದಕ್ಕೆ ಸಾಧ್ಯಯಿಲ್ಲ, ಕ್ರಯ ಹಾಗೂ ವಿಭಾಗವಾದಲ್ಲಿ ಪರ ಬಾರೆ ಸಾಧ್ಯ ಪಹಣಿ ಖಾತೆದಾರರ ಹೆಸರಿಗೆ ಇರಬೇಕಾಗುತ್ತದೆ. ಇದಕ್ಕೆ ಬೇಕಾದ ಪಹಣಿಯನ್ನು ಒಂದೊಂದು ಸಾರಿ, ಒಬ್ಬೊಬ್ಬರಿಗೆ ಬರೆದಂಥ ಸನ್ನಿವೇಶಗಳು ಇರುವುದಿಲ್ಲ. ಇಲ್ಲಿಯೂ ಲಂಚ ನಡೆಯು ವುದಕ್ಕೆ ಅವಕಾಶವಾಗುತ್ತವೆ. ಯಾರು ದುಡ್ಡು ಕೊಡುತ್ತಾರೋ ಅವರ ಹೆಸರಿಗೆ ಪಹಣಿ ಬರೆಯುತ್ತಾರೆ. ಈ ಕಾನೂನಿನ ಅವಕಾಶವನ್ನು ಉಪಯೋಗಿಸಿಕೊಂಡು ಜನರಿಗೆ ಇಲ್ಲದೆ ಇರತಕ್ಕ ತೊಂದರೆಯನ್ನು ಇವರು ಕೊಡುತ್ತಿದ್ದಾರೆ. ಅನೇಕ ಜನ ಪಹಣಿ ಕಾಪಿಯನ್ನು ತಂದಿಟ್ಟು ಕೊಳ್ಳುತ್ತಿದ್ದಾರೆ. ಪಹಣಿ

ಬದಲಾವಣೆಗಳ ಬಗ್ಗೆ, ದೂರುಗಳನ್ನು ಯಾರಾದರೂ ಸರ್ಕಾರದ ಗಮನಕ್ಕೆ ತಂದರೆ, ತೀವ್ರಗತಿಯಿಂದ ವಿಲೇಜ್ ಅಕೌಂಟೆಂಟರನ್ನು ಕೆಲಸದಿಂದ ವಜಾ ಮಾಡತಕ್ಕದ್ದು ಸೂಕ್ತ ಈ ಬಗ್ಗೆ ಅಂದರೆ ಖಾತೆದಾರರ ಹೆಸರಿಗೆ ಪಹಣಿ ಬರೆಯುವಂತೆ ಕಾನೂನು ಮಾಡುವುದು ಸೂಕ್ತ. ಜೊತೆಗೆ, ಈ ದಿಸೆಯಲ್ಲಿ ಕಾನೂನಿಗೆ ಒಂದು ತಿದ್ದುಪಡಿಯನ್ನೂ ಕೂಡ ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸರ್ಕಾರದವರು ಓಲ್ಡೇಜ್ ಪೆನ್‌ಷನ್‌ನ್ನು ಜಾರಿಗೆ ಕೊಡುವುದಕ್ಕೆ ಅವಕಾಶ ಮಾಡಿದ್ದಾರೆ. ಇದಕ್ಕಾಗಿ ಅನೇಕ ಅರ್ಜಿಗಳು ತಾಲ್ಲೂಕು ಆಫೀಸಿಗೆ ಬರುತ್ತಲಿವೆ. ಇಲ್ಲಿಯ ೂ ಕೂಡ ಲಂಚಗುಳಿತನ ಬಹಳ ತಾಂಡವಾಡುತ್ತಿದೆ. ಒಂದು ವರ್ಷದಿಂದ, ಎರಡು ವರ್ಷದಿಂದ ಈ ಅರ್ಜಿಗಳು ಇತ್ಯರ್ಥವಾಗದೆ ಪೆಂಡಿಂಗ್ ಇವೆ. ಇದರ ಬಗ್ಗೆ ಸರ್ಕಾರದ ಉದ್ದೇಶ ಏನು ಇತ್ತೋ ಅದು ಈಡೇರಬೇಕಾದರೆ, ಸರ್ಕಾರದವರು ಒಂದು ತನಿಖೆಯನ್ನು ನಡೆಸಿ, ಎಲ್ಲಿಯೂ ಈ ಅರ್ಜಿಗಳು ಪೆಂಡಿಂಗ್ ನಿಲ್ಲದ ರೀತಿಯಲ್ಲಿ ಕ್ರಮ ತೆಗಿದುಕೊಳ್ಳುವಂತೆ ಸೂಚನೆ, ಕೊಡಬೇಕು. ಇಷ್ಟು ಪ್ರಮುಖವಾದ ಅಂಶಗಳನ್ನು ತಮ್ಮ ಮುಂದಿಟ್ಟು ಈ ಬಗ್ಗೆ ತೀವ್ರ ಕ್ರಮವನ್ನು ತಾವು ತೆಗದುಕೊಳ್ಳಬೇಕು ಎಂದು ಕೇಳಿಕೊಂಡು ಅಧ್ಯಕ್ಷರಿಗ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಬಿ. ಬ್ಯಾಡಗಿ (ಸದಲಗ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯಮಂತ್ರಿಗಳಾದಂಥ ಶ್ರೀಮಾನ್ ಬಸವಲಿಂಗಪ್ಪನವರು ತಮ್ಮ ಖಾತೆಯ ಬೇಡಿಕೆಗಳನ್ನು ಇಲ್ಲಿ ಮಂಡಿಸಿದ್ದಾರೆ, ಅದಕ್ಕೆ ನಾನು ಬೆಂಬಲ ಕೊಡುವ ಸಲುವಾಗಿ ಇಲ್ಲಿ ನಿಂತಿದ್ದೇನೆ. ಅವರು ತಮ್ಮ ಖಾತೆಯ ವಿವಿಧ ಬೇಡಿಕೆಗಳನ್ನು ಇಲ್ಲಿ ಮಂಡಿಸಿದ್ದಾರೆ. ಲ್ಯಾಂಡ್ ರೆವಿನ್ಯೂ ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್ ರಿಲೀಫ್ ಆನ್ ಆಕೌಂಟ್ ಆಫ್ ನ್ಯಾಚುರಲ್ ಕೆಲಮಿಟಿ ಸ್ಟೇಟ್ ಎಕ್ಸೈಸ್ ಮತ್ತು ಲೇಬರ್ ಅಂಡ್ ಎಂಪ್ಲಾಯಮೆಂಟ್ ಎಂದು ಇಷ್ಟು ಬೇಡಿಕೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದರಲ್ಲಿ ಮಹತ್ವದ ವಿಷಯ ಅಂದರೆ ಲೇಬರ್ ಅಂಡ್ ಎಂಪ್ಲಾಯ್‌ಮೆಂಟ್. ಜನಸಾಮಾನ್ಯರ ಜೀವನದಲ್ಲಿ ಕಂದಾಯ ಖಾತೆಯು ದಿನನಿತ್ಯದ ಖಾತೆಯಾಗಿ ವ್ಯಾಪಿಸಿರುವುದು. ಬಹುಕಾಲದಿಂದಲೂ ಪರಂಪರಾನುಗತವಾಗಿ ಶಾಸನದ ಒಂದು ಅಂಗವಾಗಿ ಕಂದಾಯ ಖಾತೆ ಜನಸಾಮಾನ್ಯರಲ್ಲಿ ದಿನ ನಿತ್ಯ ಒಂದಲ್ಲ ಒಂದು ರೀತಿಯಲ್ಲಿ ಸಂಪರ್ಕದಲ್ಲಿ ಬಂದೇ ಬರುತ್ತದೆ.

ಹೀಗಿದ್ದರೂ ಕೂಡ ಜನಸಾಮಾನ್ಯರಿಗೆ ದಾರಿದೀಪವಾಗಿರುವಂತ ನಮ್ಮ ದೇವರಾಜ ಅರಸರು ಮಂತ್ರಿಮಂಡಲದಲ್ಲಿ ಶ್ರೀಮಾನ್ ಬಸವಲಿಂಗಪ್ಪನವರು ಈ ಖಾತೆಯನ್ನು ವಹಿಸಿಕೊಂಡು ಈ ಖಾತೆಯಲ್ಲಿ ವಿವಿಧ ಹಂತಗಳಲ್ಲಿ ಅನೇಕ ಕ್ರಾಂತಿಕಾರಕವಾದ ಸುಧಾರಣೆಗಳನ್ನು ಮಾಡುತ್ತಿರುವುದು ಜನಸಾಮಾನ್ಯರ ದೃಷ್ಟಿಯಿಂದ ಮತ್ತು ಬಡ ಜನತೆಯ ದೃಷ್ಟಿಯಿಂದ ಆಶಾದಾಯಕ ಹಾಗೂ ಸ್ತುತ್ಯಾರ್ಹವಾದ ಕೆಲಸ ಎಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಇಂಥ ವ್ಯಾಪಕವಾದ ಖಾತೆಯಲ್ಲಿ ಪರಂಪರಾನುಗತವಾಗಿ ಬರುತ್ತಿರುವಂತ ಹಳ್ಳಿಯ ತಲಾಟಿ ಅಥವಾ ಗ್ರಾಮ ಲೆಕ್ಕಿಗ ಪ್ರಮುಖವಾದ ಮನುಷ್ಯ. ಕುಲಕರ್ಣಿ, ತಲಾಟಿ, ಗ್ರಾಮ ಲೆಕ್ಕಿಗ ಅಥವಾ ವಿಲೇಜ್ ಅಕೌಂಟೆಂಟ್ ಎಂದು ವಿವಿಧ ನಾಮಗಳಿಂದ ಈ ಮನುಷ್ಯ ಸರ್ವರಿಗೂ ಪರಿಚಿತನಾಗಿರುತ್ತಾನೆ. ಅವನು ಎಲ್ಲರಿಗೂ ಭಯಪಡುವ ವ್ಯಕ್ತಿಯಾಗಿ ಪರಿಣಮಿಸಿದ್ದಾರೆ. ಬ್ಯಾಂಕಿನಲ್ಲಿರುವ ಹಣದ ಬಗ್ಗೆ ಎಷ್ಟು ಕಾಳಜ ಇರುತ್ತದೆಯೋ ಅದೇ ಪ್ರಕಾರ ಭೂಮಿಯ ಲೆಕ್ಕಪತ್ರದ ಬಗ್ಗೆ ಮತ್ತು ಇವನ ಬಗ್ಗೆ ಕಾಳಜಿ ಇರುತ್ತದೆ. ಭೂಮಿಯ ದಾಖಲೆಗಳನ್ನು ಎಲ್ಲಿ ಅದಲುಬದಲು ಮಾಡುತ್ತಾರೋ ಎನ್ನುವ ಭಯ ಇವತ್ತು ಜನಸಾಮಾನ್ಯರಲ್ಲಿತ್ತದೆ. ಇವತ್ತು ನಮ್ಮ ಕಂದಾಯ ಮಂತ್ರಿಗಳು ಜನಸಾಮಾನ್ಯರಲ್ಲಿರತಕ್ಕ ಭಯವನ್ನು ತೊಡೆದುಹಾಕಲು ವಿವಿಧ ಸುಧಾರಣೆಗಳನ್ನು ಕೈಗೊಳ್ಳುತಾರೆಂದು ಆಶಿಸುತ್ತೇನೆ. ಒಂದು ಭಾಗಗಳಿಗೆ ಸರ್ಕಲ್ ಆಫೀಸರಾಗಿ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ಕಛೇರಿಗಳು ಕಂದಾಯದ ಸಂಬಂಧವಾಗಿ ವಿವಿಧ ಹಂತಗಳಲ್ಲಿ ಕೆಲಸ ಮಾಡುತ್ತಿವೆ. ಆದರೂ ಕೂಡ ಕೆಲವೊಂದು ಪ್ರಸಂಗಗಳಲ್ಲಿ ಜನಸಾಮಾನ್ಯರಿಗೆ ಆನೇಕ ತೊಂದರೆಗಳು ಬರುತ್ತವೆ. ಉದಾಹರಣಾರ್ಥವಾಗಿ ಹೇಳುವುದಾದರೆ ದೈನಂದಿನ ರೈತರಿಗೆ ಉತ್ತರಿಗಳು ಯಾವತ್ತೂ ಅವಶ್ಯಕವಾಗಿ ಬೇಕಾಗುತ್ತವೆ. ಇವುಗಳು ಸುಭವಾಗಿ ಸಿಗುವಹಾಗೆ ಏನಾದರೂ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಪಾರ್ಥಿಸಿಕೊಳ್ಳುತ್ತೇನೆ. ಅದೇ ಪ್ರಕಾರ ಮತ್ತೊಂದು ಮಹತ್ವದ ವಿಷಯ ಅಂದರೆ ಜಮೀನು ಅದಲು ಬದಲು ಮಾಡದಂತೆ ಖಾತೆ ಮತ್ತಿತರ ಕೆಲಸಗಳು ನಿರ್ವಿವಾದವಾಗಿ ನಿರ್ವಿಜವಾಗಿ ಮಾಡಿಕೊಡುವಂತ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ವಿನಂತಿಸುವೆ.

ಸರ್ಕಾರದವರು ಭೂ ನ್ಯಾಯಮಂಡಲಿಗಳನ್ನು ಮಾಡಿ ಐತಿಹಾಸಿಕವಾದಂತ ಕೆಲಸವನ್ನು ಮಾಡಿದ್ದಾರೆ. ಇದರಿಂದ ಬಡ ಜನತೆಗೆ ಜನಸಾಮಾನ್ಯರಿಗೆ ಉತ್ಕರ್ಷ ಆದಾಯಕವಾದ ಭವಿಷ್ಯತದಾಯಕವಾದ ಮಹಾ ಕಾರ್ಯವಾಗುತ್ತಿದೆ. ಇದರಿಂದ ಕೆಲವರಿಗೆ ಅತ್ಯಂತ ತೊಂದರೆಗಳು ಕೂಡ ಆಗಿದೆ ಸಣ್ಣ ಪುಟ್ಟ ಜಮೀನು ಇಟ್ಟುಕೊಂಡಿದ್ದಂತ ವಿಧವೆಯರಿಗೆ, ಅಂಗವಿಕಲರಿಗೆ ತೊಂದರೆಯಾಗಿದೆ. ಅವರಿಗಿದ್ದ ಜಮೀನುಗಳು ಈ ಕಾಯಿಂದೆ ಮೇರೆಗೆ ಉಳುವವನಿಗೆ ಹೋದದ್ದರಿಂದ ಇವತ್ತು ಅವರು ಜೀವನ ಮಾಡುವುದೇ ಕಷ್ಟವಾಗಿದೆ. ಅವರಿಗೆ ಮತ್ತೆ ಯಾವುದೇ ದೃಷ್ಟಿಯಿಂದಲೂ ಜೀವನ ಮಾಡುವಂತ ವ್ಯವಸ್ಥೆ ಇಲ್ಲದಂತಾಗಿದೆ. ಆದುದರಿಂದ ಮಾನ್ಯ ಮಂತ್ರಿಗಳಲ್ಲಿ ನಾನು ಕಳಕಳಿಯಿಂದ ವಿನಂತಿಸಿಕೊಳ್ಳುವುದೇನೆಂದರೆ ಅಂತಹವರಿಗೆ ಕೂಡಲೇ ಪರಿಹಾರ ಒದಗಿಸುವಂತ ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ, ಇನ್ನು ಭೂ ಸ್ವಾಧೀನದ ವಿಚಾರ ಹೇಳುವುದಾದರೆ ಇವತ್ತು ಸರ್ಕಾರದವರು ರಸ್ತೆ ಮಾಡುವುದಕ್ಕಾಗಲೀ, ಕೆರೆ ಕಟ್ಟುವುದಕ್ಕಾಗಲೀ ಜಮೀನುಗಳನ್ನು ಸ್ವಾಧೀನಕ್ಕೆ ಪಡಿಸಿಕೊಂಡರೇ ಸ್ವಾಧೀನ ಪಡಿಸಿಕೊಂಡ ಜಮೀನುಗಳ ಒಡೆಯರಿಗೆ ಕೂಡಲೇ ಪರಿಹಾರ ಕೊಟ್ಟರೆ ಅವರುಗಳು ಬೇರೆ ಏನಾದರೂ ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ, ಈಗ ವಶಪಡಿಸಿಕೊಂಡ ಜಮೀನುಗಳಿಗೆ ಪರಿಹಾರ ಕೊಡುವುದರಲ್ಲಿ ಬಹಳ ವಿಳಂಬವಾಗುತ್ತಿದೆ. ಇದನ್ನು ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದುಕೊಂಡು ಕೂಡಲೇ ಪರಿಹಾರ ಒದಗಿಸುವಂತ ಏರ್ಪಾಡುಮಾಡಬೇಕೆಂದು ವಿನಂತಿಸುವೆ.

ಅಧ್ಯಕ್ಷರೇ, ಬಹಳ ಮಹತ್ವವಾದ ವಿಷಯ ಇವತ್ತು ಈ ದೇಶದ ಉತ್ಪತ್ತಿ ಈ ದೇಶದಲ್ಲಿ ಸುಖ ಜೀವನ ಅವಲಂಬಿಸಿರುವುದು ಕೂಲಿಕಾರರ ಸಲುವಾಗಿ. ಇವತ್ತು ಈ ಕೂಲಿಕಾರರ ಬಗ್ಗೆ ಯಾವರೀತಿಯ ಸುಧಾರಣೆಯಾಗಲೀ ಶಾಶ್ವತವಾದ ಒಂದು ಪರಿಹಾರವಾಗಲೀ ಜಾರಿಗೆ ಬಂದಿಲ್ಲ. ಇವತ್ತು ಪಕ್ಕದ ರಾಷ್ಟ್ರವಾದ ಮಹಾರಾಷ್ಟ್ರದಲ್ಲಿ ಕೂಲಿಕಾರರನ್ನು ರಕ್ಷಿಸಲು ದೊಡ್ಡ ಪ್ರಮಾಣದಲ್ಲಿ ಕೆಲಸಗಳು ನಡೆಯುತ್ತಿವೆ. ಇವತ್ತು ಬೇರೆ ಬೇರೆ ಕಾರ್ಮಿಕರು ಸಂಘಗಳನ್ನು ಮಾಡಿಕೊಂಡು ಸರ್ಕಾರಕ್ಕೆ ಬೇಡಿಕೆಗಳನ್ನು ಹಾಕಿ, ೫೦೦–೧೦೦೦ ರೂಪಾಯಿ ಸಂಬಳ ತೆಗೆದುಕೊಂಡು ಸುಂದರವಾದ ಜೀವನ ಸಾಗಿಸಿಕೊಂಡು ಹೋಗುತ್ತಿದ್ದಾರೆ. ಇವತ್ತು ಇದು ರಾಷ್ಟ್ರದ ಸಮಸ್ಯೆಯಾಗಿದೆ ಮಾನ್ಯ ಬಸವಲಿಂಗಪ್ಪನವರು ಕಳೆದ ೧೫–೨೦ ದಿವಸಗಳ ಹಿಂದೆ ಒಂದು ಪರಿಪತ್ರವನ್ನು ಕಳುಹಿಸಿ ಈ ವಿಚಾರದಲ್ಲಿ ಒಂದು ಪರಿಹಾರವನ್ನು ಕಂಡುಹಿಡಿಯುವ ಪ್ರಯತ್ನವನ್ನು ಮಾಡುತ್ತಿದ್ದಾರೆಂದು ಗೊತ್ತಾಗಿದೆ. ಇದು ಸ್ತುತ್ಯಾರ್ಹವೂ ದೀನ ದಲಿತರ ಒಂದು ಏಳಿಗೆಗೆ ಉತ್ಕರ್ಷದಾಯಕವಾದ ಒಂದು ಕಾರ್ಯವೂ ಎಂದು ಹೇಳುತ್ತೇನೆ. ಇನ್ನೂ ಮಾನ್ಯ ಮಂತ್ರಿಗಳು ಉತ್ತಮವಾದ ಕಾರ್ಯಗಳನ್ನು ಕೈಗೊಳ್ಳಲಿ ಎಂದು ಹೇಳಿ ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ಭಕ್ತಿ ಪೂರ್ವಕವಾದ ವಂದನೆಗಳನ್ನರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ,

[MR. SPEAKER in the Chair]

† ಶ್ರೀ ವೈ. ರಾಮಕೃಷ್ಣ (ಆನೇಕಲ್).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಕಂದಾಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳು ಏನು ಇವೆ ಇವುಗಳನ್ನು ತೀವ್ರವಾಗಿ ವಿರೋದಿಸಿ ಕೆಲವಾರು ಸಲಹೆಗಳನ್ನು ಕೊಡುವುದಕ್ಕೆ ನಿಂತಿದ್ದೇನೆ, ಇವತ್ತು ಈ ಕಂದಾಯ ಇಲಾಖೆ ಜನ ಸೇವೆಯ ಇಲಾಖೆ ಆಗದೆ ಜಬರ್‌ದಸ್ತ ಇಲಾಖೆಯಾಗಿದೆ. ಕಂದಾಯ ಅಧಿಕಾರಿಗಳು ನಡೆದುಕೊಳ್ಳತಕ್ಕ ನಡತೆ, ವರ್ತನೆ ಇವತ್ತು ಸಹಿಸಲು ಅಸಾಧ್ಯವಾಗಿದೆ. ಇದನ್ನು ಎರಡನೆ ಪೋಲೀಸ್ ಇಲಾಖೆ ಎಂದು ಹೇಳಿದರೆ ತಪ್ಪಾಗಲಾರದು. ಸ್ವಾಮಿ ತಮಗೆ ಗೊತ್ತಿದ್ದಹಾಗೆ ನಮ್ಮ ರಾಜ್ಯದಲ್ಲಿ ಸುಮಾರು ಶೇಕಡ ೮೦ರಷ್ಟು ಜನ ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡತಕ್ಕ ರೈತರಾಗಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು ೭೦ರಷ್ಟು ಜನ ಅವಿದ್ಯಾವಂತರು ವಿದ್ಯಾವಂತರ ಸಂಖ್ಯೆ ಕೇವಲ ಮೂವತ್ತು ಪರ್ಸೆಂಟ್ ಮಾತ್ರ ಇಂಗ್ಲಿಷ್ ಬಲ್ಲವರು ಮೂರು ಕೋಟಿ ಎಲ್ಲಿ? ಮೂರು ಪರ್ಸೆಂಟ್ ಎಲ್ಲಿ? ತಾವೇ ಆಲೋಚನೆಮಾಡಿ. ಆದುದರಿಂದ ಕಂದಾಯ ಇಲಾಖೆಯ ಎಲ್ಲ ವ್ಯವಹಾರಗಳು ಪತ್ರ ವ್ಯವಹಾರಗಳು ಇಂಗಿಷ್‌ನಲ್ಲಿಯೇ ನಡೆಯುತ್ತಿವೆ. ತಹಶೀಲ್ದಾರ್‌ರವರ ಕಛೇರಿಯಿಂದ ಇಡಿದು ಮುಖ್ಯ ಕಾರ್ಯದರ್ಶಿಯವರ ಕಛೇರಿಯವರೆವಿಗೂ ಇಂಗ್ಲಿಷ್ ಟೈಪ್‌ರೈಟಿಂಗ್ ಇಟ್ಟುಕೊಂಡು ಇಂಗ್ಲಿಷಿನಲ್ಲಿಯೇ ವ್ಯವಹಾರ ಮಾಡುತ್ತಿದ್ದಾರೆ. ಸ್ವಾಮಿ, ತಾವು ಕಾಂತ್ರಿಕಾರಕವಾದ ಬದಲಾವಣೆ ಮಾಡಬೇಕಾದರೆ ತಹಶೀಲ್ದಾರ್‌ರವರ ಕಛೇರಿಯಿಂದ ಹಿಡಿದು ಮುಖ್ಯ ಕಾರ್ಯದರ್ಶಿ ಮಟ್ಟದವರಿಗೂ ಪ್ರತಿಯೊಂದು ಕಾಗದ ಪತ್ರಗಳ ವ್ಯವಹಾರವೆಲ್ಲವೂ ಕನ್ನಡದಲ್ಲಿಯೇ ನಡೆಯಬೇಕೆಂದು ತಾವು ನಿರ್ದೇಶನ ಕೊಡಿ. ಅದು ಕ್ರಾಂತಿಕಾರವಾದ ಸುಧಾರಣೆ ಬದಲಾಗು

ತ್ತದೆ. ಮಾನ್ಯ ಮಿತ್ರರೊಬ್ಬರು ಈಗತಾನೇ ಹೇಳಿದರು ಮಾನ್ಯ ಕಂದಾಯ ಮಂತ್ರಿಗಳು ಕ್ರಾಂತಿಕಾರಕವಾದ ಸುಧಾರಣೆಗಳನ್ನು ತರುತ್ತಿದ್ದಾರೆಂದು ಬಹುಶ: ಈ ಒಂದು ಕೆಲಸವನ್ನು ಮಾಡಿದರೆ ಅದು ಕ್ರಾಂತಿಕಾರಕ ಸುಧಾರಣೆ ಮಾಡಿದಂತಾಗುತ್ತದೆ. ಸ್ವಾಮಿ, ನಮ್ಮ ರಾಜ್ಯದಲ್ಲಿ ಎಲ್ಲರೂ ಸಂಘಟಿತರಾಗಿದ್ದಾರೆ, ಸರ್ಕಾರಿ ನೌಕರರು ಸಂಗಟಿತರಾಗಿದ್ದಾರೆ. ಕೊಳಚೆ ಪ್ರದೇಶಗಳಲ್ಲಿ ವಾಸಮಾಡತಕ್ಕ ಜನರು ಇವತ್ತು ಸಂಘಟಿತರಾಗಿದ್ದಾರೆ. ಕಾರ್ಮಿಕರು ಸಂಘಟಿತರಾಗಿದ್ದಾರೆ. ಹಾಗೆಯೇ ಅಷ್ಟೇ ಅಲ್ಲ, ಅನೇಕಾನೇಕ ವ್ಯಾಪಾರಸ್ತರು ಸಂಘಗಳನ್ನು ಕಟ್ಟಿಕೊಂಡು ಅವರ ಹಕ್ಕು ಭಾದ್ಯತೆಗಳನ್ನು ದಕ್ಕಿಸಿಕೊಳ್ಳತಕ್ಕ ಪರಿಸ್ಥಿತಿಯಲ್ಲಿ ಇದ್ದಾರೆ. ಆದರೆ ಸರ್ವವನ್ನೂ ಅಂದರೆ ಎಳ್ಳಿನಿಂದ ಜೀರಿಗೆತನಕ ಸೃಷ್ಟಿಮಾಡತಕ್ಕ ರೈತವರ್ಗ ಏನಿದೆ ಅದು ಮಾತ್ರ ಇನ್ನೂ ಸಂಘಟಿತವಾಗಿಲ್ಲ. ನಮ್ಮ ಮಾನ್ಯ ಹಣಕಾಸು ಸಚಿವರಾದ ಎಸ್. ಎಂ, ಯಾಹ್ಯಾ ಅವರು ತಮ್ಮ ಬಜೆಟ್ ಭಾಷಣದಲ್ಲಿ ರೈತರು ಸಂಘಟನೆಯಾಗಬೇಕು ಎಂದು ಹೇಳಿದ್ದಾರೆ. ಆದರಲ್ಲೂ ಹಣಕಾಸಿನ ಸಚಿವರ ಬಾಯಲ್ಲಿ ರೈತರು ಸಂಘಟಿತರಾಗಬೇಕು ಎಂದು ಹೇಳಿದಾಗ ಅದಕ್ಕೆ ಹಣವನ್ನೇನಾದರೂ ಇಟ್ಟಿದ್ದಾರೋ ಏನೋ ಎಂದು ನೋಡಿದಾಗ ಏನೂ ಇಲ್ಲ ಎಂದು ಗೊತ್ತಾಯಿತು, ಬರೀ ಮಾತಿನ ಸಂಘಟನೆ ಹಣವಿಲ್ಲ ಕಾರ್ಯಕ್ರಮವಿಲ್ಲ ಸರಸ್ವತಿ ಪ್ರಸಾದ ಅಷ್ಟೇ. ಅವರು ಸಂಘಟಿತರಾಗುವ ಹಾಗಿಲ್ಲ ಇವರನ್ನು ಎದುರಿಸುವ ಹಾಗಿಲ್ಲ ಇವರಿಗೂ ಗೊತ್ತು ಅವರು ಸಂಘಟಿತರಾಗುವುದಿಲ್ಲ ಎಂದು. ರೈತರ ಸ್ಥಿತಿ ಈಗ ಚಿಂತಾಜನಕವಾಗಿದೆ. ಅವರಿಗೆ ಸಂಘಟಿತರಾಗುವುದಕ್ಕೆ ಮನಸ್ಸಿದ್ದರೂ ಕೂಡ ಕೆಲವು ಜನ ಅದಕ್ಕೆ ಅಡ್ಡಿ ಬರುತ್ತಿದ್ದಾರೆ.

೪-೩೦ ಪಿ. ಎಂ.

ಶ್ರೀ ಎಸ್. ಎಂ. ಯಾಹ್ಯಾ.—ಯಾರೂ ಮಾಡದಂಥ ಕೆಲಸವನ್ನು ನಾವು ಮಾಡುವುದಕ್ಕೆ ಹೊರಟಿದ್ದೇವೆ. ಹಣದ ಬಗ್ಗೆ ಏನೂ ತೊಂದರೆ ಇಲ್ಲ, ಈ ವರ್ಷ ಇಲ್ಲದಿದ್ದರೆ ಇನ್ನೊಂದು ವರ್ಷ ಕೊಡುತ್ತೇವೆ.

ಶ್ರೀ ವೈ. ರಾಮಕೃಷ್ಣ,—ಆ ಪುಣ್ಯದ ಕೆಲಸವನ್ನು ನೀವು ಮಾಡಿದ ದಿವಸವೇ ನಿಮ್ಮ ಸರ್ಕಾರ ಕೊಚ್ಚಿ ಹೊಯಿತು ಎಂದು ಅರ್ಥ. ಆದ್ದರಿಂದ ಈ ಕೆಲಸವನ್ನು ನೀವು ಖಂಡಿತ ಮಾಡುವುದಿಲ್ಲ ಅವರು ಸಂಘಟಿತರಾದರೆ ನೀವು ಉಳಿಯುವುದಿಲ್ಲ.

ಶ್ರೀ ಎಸ್. ಎಂ. ಯಾಹ್ಯಾ. - ರಾಜಕೀಯವಾಗಿ ಹೆದರಿಕೆ ಇರುವುದು ನಿಮಗೆ. ರೈತರು ಬಡವರು ವರು ನಮ್ಮ ಹಿಂದೆ ಇದ್ದಾರೆ. ಅವರು ಎಲ್ಲಿಯವರೆಗೆ ನಮ್ಮೊಡನಿರುತ್ತಾರೆ ಅಲ್ಲಿಯವರೆಗೂ ನಮಗೆ ಭಯ ಇಲ್ಲ.

ಶ್ರೀ ವೈ. ರಾಮಕೃಷ್ಣ.—ನಮ್ಮ ರಾಜ್ಯದಲ್ಲಿ ಒಂದು ಎಕರೆ ಅಥವಾ ಒಂದು ಎಕರೆಗಿಂತ ಕಡಿಮೆ ಹಿಡುವಳಿಯನ್ನು ಹೊಂದಿರತಕ್ಕ ಜಮೀನುದಾರರ ಸಂಖ್ಯೆ ಕೇವಲ ೧೮ ಪರ್ಸೆಂಟ್. ೧ ಎಕರೆಯಿಂದ ೫ ಎಕರೆಯವರೆಗೆ ಜಮೀನು ಇಟ್ಟುಕೊಂಡಿರುವವರ ಸಂಖ್ಯೆ ೪೫ ಪರ್ಸೆಂಟ್. ಸುಮಾರು ೫ ಎಕರೆಯಿಂದ ೨೦ ಎಕರೆಯವರೆಗೆ ಜಮೀನು ಹೊಂದಿರುವವರ ಸಂಖ್ಯೆ ೩೩ ಪರ್ಸೆಂಟ್ ೨೦ ರಿಂದ ೫೦ ಎಕರೆಯವರೆಗೆ ಜಮೀನು ಹೊಂದಿರುವವರ ಸಂಖ್ಯೆ ಕೇವಲ ೩ ಪರ್ಸೆಂಟ್. ೫೦ ಎಕರೆಗಿಂತ ಹೆಚ್ಚು ಜಮೀನಿರುವವರ ಸಂಖ್ಯೆ ೧ ಪರ್ಸೆಂಟ್. ಸ್ವಾಮಿ ಇದರಲ್ಲಿ ೧ ಎಕರೆಯಿಂದ ೫ ಎಕರೆ ಜಮೀನಿಟ್ಟುಕೊಂಡಿರುವವರ ಸಂಖ್ಯೆ ೬೩ ಪರ್ಸೆಂಟಾಗುತ್ತದೆ, ಈ ೬೩ ಪರ್ಸೆಂಟ್ ರೈತರ ಅಭಿವೃದ್ಧಿಯಾಗುವ ತನಕ ರೆವಿನ್ಯೂ ಅಧಿಕಾರಿಗಳು ಅವರನ್ನು ಮೇಲಕ್ಕೆತ್ತುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ತನಕ ಅವರ ಭವಿಷ್ಯ ಖಂಡಿತವಾಗಿ ಹಸನಾಗುವುದಿಲ್ಲ ಎಂದು ತಾವು ತಿಳಿದುಕೊಳ್ಳಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಅದಕ್ಕೇ ಲ್ಯಾಂಡ್ ರೆವಿನ್ಯೂ ವಜಾ ಮಾಡಿದ್ದೇವೆ.

ಶ್ರೀ ವೈ. ರಾಮಕೃಷ್ಣ.—ಅವರ ಪರಿಸ್ಥಿತಿ ಹೇಗಿದೆ ಸ್ವಾಮಿ? ನಿಜವಾಗಿಯೂ ಅವರು ಚಿಂತಾಜನಕ ಸ್ಥಿತಿಯಲ್ಲಿದ್ದಾರೆ. ಅವರು ಹಾಕಿಕೊಳ್ಳುವ ಬಟ್ಟೆ ಹರಕಲು ಬಟ್ಟೆ. ಕೊಳಕು ಬಟ್ಟೆ, ಚಿಂದಿ ಬಟ್ಟೆ ತಾಯಂದರಿಗೆ ಉಡಲು ಒಂದೇ ಸೀರೆ. ಒಂದು ಎಕರೆಯಿಂದ ೫ ಎಕರೆವರೆಗೆ ಡ್ರೈ ಜಮೀನಿರುವ ಕುಟುಂಬದವರು ಯಾರಿರುತ್ತಾರೆ ಅವರ ಪರಿಸಿ ತಿ ನೋಡಿದಾಗ ಎಂಥವರಿಗೂ ಅಯ್ಯೋ ಎನಿಸುತ್ತದೆ. ಹಳ್ಳಿನ ಗುಡಿಸಲುಗಳಲ್ಲಿ ಯಾರೂ ವಾಸ ಮಾಡುವುದಕ್ಕೆ ನಾಲಾಯಕ್ಕಾಗಿರುವ ಜಾಗದಲ್ಲಿ ಅವರು ವಾಸ ಮಾಡುತ್ತಾರೆ. ಜೊತೆಗೆ ಅರೆಹೊಟ್ಟೆ, ಅರೆ ಬಟ್ಟೆ ಕಾಫಿ, ಬೆಳಗಿನ ಟಿಫನ್ ಅಂತ ನಾವೇನು ತಿನ್ನುತ್ತೇವೆ

ಅವರು ಅದನ್ನು ನೋಡೇ ಇರುವುದಿಲ್ಲವೇನೊ ಯಾರಾದರೂ ಖಾಯಿಲೆ ಬಿದ್ದರೆ ಡಾಕ್ಟರು ರವೆ ಗಂಜಿ ಕುಡಿ ಅಂತ ಹೇಳುತ್ತಾರಲ್ಲಾ ಆ ರವೆ ಗಂಜಿಯೇ ಅವರಿಗೆ ಸ್ವೀಟ್, ಮಕ್ಕಳಿಗೆ ವಿದ್ಯಾಭ್ಯಾಸದ ಸೌಲಭ್ಯ ಇಲ್ಲ. ಆರೋಗ್ಯದ ಸೌಲಭ್ಯ ವಿಲ್ಲ. ಒಟ್ಟಿನಲ್ಲಿ ಅವರ ಪರಿಸ್ಥಿತಿ ಚಿಂತಾಜನಕವಾಗಿದೆ, ಹಿಂದು ನಾವು ಸರ್ಕಾರ ನಡೆಸುತ್ತಿದ್ದಾಗ ಇವರಿಗೆ ಕಂದಾಯ ವಿನಾಯಿತಿ ನೀಡಿದ್ದೆವು. ಈಗ......

ಶ್ರೀ ಬಿ. ಬಸವಲಿಂಗಪ್ಪ.—ಡಾ॥ ಲೋಹಿಯಾ ಅವರು ಹೇಳಿದ್ದನ್ನು ನಾವು ಮಾಡಿದ್ದೇವಲ್ಲ ಸ್ವಾಮಿ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಬಸವಲಿಂಗಪ್ಪನವರು ಡಾ॥ ಲೋಹಿಯಾ ಅವರು ಹೇಳಿದ್ದನ್ನು ಮಾಡಿದ್ದಾರೋ ಅಥವಾ ಶ್ರೀಮತಿ ಇಂದಿರಾಗಾಂಧಿಯವರು ಹೇಳಿದ್ದನ್ನು ಮಾಡಿದ್ದಾರೋ

ಒಬ್ಬ ಜನತಾ ಸದಸ್ಯರು.— ಲೋಹಿಯಾ ಅವರು ಹೇಳಿದ್ದನ್ನು ಮಾಡುವುದಾದರೆ ಈ ಕಡೆಗೆ ಬನ್ನಿ

ಶ್ರೀ ವೈ. ರಾಮಕೃಷ್ಣ.— ರಾಜಾಸ್ಥಾನದಲ್ಲಿ ಎರಡೂವರೆ ಹೆಕ್ಟೇರ್‌ವರೆಗೆ ಭೂ ವಿನಾಯಿತಿ ಕೊಟ್ಟಿದ್ದಾರೆ. ಆದರೆ ಪಶ್ಚಿಮ ರಾಜಾಸ್ಥಾನದಲ್ಲಿ ೧೬ ರಿಂದ ೨೨ ಎಕರೆಯವರೆಗೆ ವಿನಾಯಿತಿ ನೀಡಿದ್ದಾರೆ. ಅವರ ಪರಿಸ್ಥಿತಿ ತಿಳಿದುಕೊಂಡು ಹಾಗೆ ವಿನಾಯಿತಿಕೊಟ್ಟಿದ್ದಾರೆ. ಅದೇರೀತಿ ಹಿಮಾಚಲ ಪ್ರದೇಶದಲ್ಲೂ ವಿನಾಯಿತಿ ಕೊಟ್ಟಿದ್ದಾರೆ. ಎಲ್ಲೆಲ್ಲಿ ನಮ್ಮ ಜನತಾ ಸರ್ಕಾರ ಇದೆ ಅಲ್ಲೆಲ್ಲಾ ಮೊಟ್ಟಮೊದಲು ರಕ್ಷಣೆ ಕೊಟ್ಟಿರುವುದು ಎಂದರೆ ರೈತರಿಗೆ. ಆದರೆ ನೀವು (ಸರ್ಕಾರ) ಆ ಕೆಲಸ ಮಾಡುತ್ತಿಲ್ಲ. ನಾನು ಧೈರ್ಯವಾಗಿ ಹೇಳುತ್ತಿದ್ದೇನೆ ನೀವು ಮಾಡುತ್ತಿಲ್ಲ ಎಂದು. ದಯವಿಟ್ಟು ಆ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿ. ಎರಡನೆಯದಾಗಿ ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡತಕ್ಕ ೬೩ ಪರ್ಸೆಂಟ್ ಬಡರೈತರೇನಿದ್ದಾರೆ ಅವರ ಕೈಗೆ ಕೆಲಸ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಕೆಲಸ ಕೊಡಬೇಕೆಂದು ಮಾಡಿದ್ದೇವೆ ಈಗ.

ಶ್ರೀ ವೈ. ರಾಮಕೃಷ್ಣ.— ನೀವು ಕಾನೂನುಜಾರಿಗೆ ತೆಗೆದುಕೊಂಡು ಬನ್ನಿ. ಯಾರು ಬೇಡ ಎಂದು ಹೇಳುತ್ತಾರೆ. ಅಂಥ ಜನ ೫೦ ಲಕ್ಷ ಜನ ಇದ್ದಾರೆ. ನೀವು ೩೦ ಲಕ್ಷಕ್ಕೆ ಲಿಮಿಟ್ ಮಾಡಿಕೊಂಡಿದ್ದೀರಿ. ಅವರ ಬಾಳನ್ನು ಹಸನು ಮಾಡುವುದಕ್ಕೆ ತಾವು ಏನು ಮಾಡಿದ್ದೀರಿ? ನಾವು ನಮ್ಮ ಪಕ್ಷದವರು ಎಲ್ಲಾ ಕೂಗಾಡಿದಮೇಲೆ ೮ ವರ್ಷಕ್ಕೆ ನನ್ನ ಮಗ ದಂಟು ಅಂದ ಅನ್ನೋ ಹಾಗೆ ಈಗ ನೋಟಿಫಿಕೇಷನ್ ತಂದಿದ್ದೀರಿ. ಆಂಧ್ರಪ್ರದೇಶದಲ್ಲಿ ಮಹಾರಾಷ್ಟ್ರದಲ್ಲಿ ೧೯೭೭ ರಲ್ಲಿ ಇದನ್ನು ಜಾರಿಗೆ ತಂದಿದ್ದಾರೆ ನಿಮಗೆ ಇವತ್ತು ಪರಿಜ್ಞಾನ ಬಂದಿದೆ. ನೀವು ಎಂಪ್ಲಾಯ್‌ಮೆಂಟ್ ಗ್ಯಾರಂಟಿಸ್ಕೀಮನ್ನು ಈ ರಾಜ್ಯದಲ್ಲಿ ಜಾರಿಗೆ ತರುವುದಕ್ಕೆ ಮೀಟಿಂಗ್ ಕರೆದಿದ್ದೇವೆ ಎಂದು ಹೇಳಿದ್ದೀರಿ. ಜಾರಿಗೆ ತರುತ್ತೇವೆ ಎಂದು ಹೇಳಿಲ್ಲ ಇನ್ನೂ ಮೀಟಿಂಗ್ ಕರೆಯುತ್ತಿದ್ದೀರಿ ಅಷ್ಟೆ ನಾನು ಈ ಹಿಂದೆ ೬೩ ಪರ್ಸೆಂಟ್ ಜನ ಇದ್ದಾರೆ ಎಂದು ಏನು ಹೇಳಿದೆ ಜನರ ಭವಿಷ್ಯ ಉತ್ತಮವಾಗುವುದಕ್ಕೆ ಅಂತ್ಯೋದಯ ಸ್ಕೀಮನ್ನು ಜಾರಿಗೆ ತರುತ್ತೀರಾ ಎಂದು ಮಂತ್ರಿಗಳನ್ನು ಕೇಳಿದಾಗ ತರುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ನಿಮ್ಮ ಕಡೆಯ ಕೆಲವು ಸದಸ್ಯರು ಹೇಳಿದ್ದಾರೆ. ಈ ಸ್ಕೀಮನ್ನು ಜಾರಿಗೆ ತರಲಿಲ್ಲ ಎಂದು ಇಟ್ಟುಕೊಳ್ಳಿ ಮತ್ತೆ ಯಾವ ಸ್ಕೀಮ್ ಇದೆ ನಿಮ್ಮ ಹತ್ತಿರ? ನೀವು ಜಾರಿಗೆ ತಂದಿರುವ ಸ್ಕೀಮಿನ ಪ್ರಕಾರ ಮನೆ ಕಟ್ಟಿದ್ದೀರಿ. ಅದು ಹೇಗಿದೆ ಎಂದರೆ ಗಂಡ ಹೆಂಡತಿ ಜಗಳ ಆಡಿದಾಗ ಗಂಡ ಏನಾದರೂ ಹೆಂಡತಿಗೆ ಹೊಡೆದರೆ ಆಕೆ ಗೋಡೆಮೇಲೆ ಬಿದ್ದರೆ ಆ ಮನೆಯೇ ಮುರಿದುಹೋಗುತ್ತದೆ. ಅಥವಾ ಹೆಂಡತಿಗೆ ಬೀಳಬೇಕಾದ ಏಟು ತಪ್ಪಿ ಗೋಡೆಗೆ ಬಿದ್ದರೆ ಗೋಡೆ ಬಿದ್ದುಹೋಗುತ್ತದೆ. ಅದೊಂದೇ ಸ್ಕೀಂ ನಿಮ್ಮಲ್ಲಿರುವುದು. ಅಂತ್ಯೋದಯ ಸ್ಕೀಮ್ ಸರ್ವ ವಿಧದಲ್ಲಯು ಒಳ್ಳೆಯ ಸ್ಕೀಮಾಗಿದೆ. ನಾನು ಮಾನ್ಯ ಬಸವಲಿಂಗಪ್ಪನವರ ಕೈಯ್ಯಲ್ಲಿ ರಾಜಾಸಾ ನದಲ್ಲಿ, ಬಿಹಾರದಲ್ಲಿ ಮತ್ತು ಹಿಮಾಚಲ ಪ್ರದೇಶದಲ್ಲಿ ಏನೇನು ಸ್ಕೀಮನ್ನು ಮಾಡಿದ್ದಾರೆ ಆ ಬಗ್ಗೆ ವಿವರವನ್ನು ಕೊಡುತ್ತೇನೆ. ಅದನ್ನು ನೀವು ನೋಡಿ. ಅದಕ್ಕೆಲ್ಲಾ ದುಡ್ಡು ಎಲ್ಲಿದೆ ನಮ್ಮ ಹತ್ತಿರ ಎಂದು ಕೇಳಬಹುದು. ನಾನು ಹೇಳುತ್ತೇನೆ ಇವತ್ತು ದೇಶಕ್ಕಿಂತ ದೊಡ್ಡದು ಜನತೆ. ಜನರಿಗಿಂತ ದೊಡ್ಡದು ದೇಶವಲ್ಲ. ಜನರ ಕಲ್ಯಾಣ ಕಾರ್ಯ ಮಾಡಬೇಕು ಎಂದು ಮನಸ್ಸು ಮಾಡಿದರೆ ಅದಕ್ಕೆ ದುಡ್ಡು ಹುಡುಕಬೇಕೆ? ನಾವು ನಿಮ್ಮ ಜಾಗದಲ್ಲಿದ್ದಿದ್ದರೆ ಹಣ ಹುಡುಕಿ ಆ ಕೆಲಸವನ್ನು ಮೊದಲು ಮಾಡುತ್ತಿದ್ದೆವು ಇಲ್ಲಿ ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಕರ್ನಾಟಕ ಬ್ಯಾಂಕ್ ಅದೇರೀತಿ ವಿಜಯಾ ಬ್ಯಾಂಕ್ ಎಲ್ಲಾ ಇವೆ. ಬ್ಯಾಂಕುಗಳ ಮೂಲಸ್ಥಾನವೆಂದರೆ ಕರ್ನಾಟಕ ರಾಜ್ಯ ಕೋಟ್ಯಾಂತರ ರೂಪಾಯಿಗಳನ್ನು ಇಲ್ಲಿ ಇಟ್ಟುಕೊಂಡು ಸ್ಕೀಮಿಗೆ ಹಣ ಇಲ್ಲ ಎಂದು ಹೇಳಿದರೆ ಅದಕ್ಕೆ ನಾವೇನು ಹೇಳಬೇಕೋ ತಾವೇ

ಆಲೋಚನೆ ಮಾಡಿ. ಬ್ಯಾಂಕುಗಳನ್ನು ರಾಷ್ಟ್ರೀಕರಣಮಾಡಿದಂಥ ಉದ್ದೇಶ ಸಫಲವಾಗಬೇಕಾದರೆ ಬೇರೆ ಯಾವ ಮಾರ್ಗ ಇದೆ? ಆದ್ದರಿಂದ ದಯವಿಟ್ಟು ಅವರನ್ನೆಲ್ಲಾ ಕರೆಸಿ ಒಂದು ತೀರ್ಮಾನ ತೆಗೆದುಕೊಳ್ಳಿ. ಇಲ್ಲದೇಹೋದರೆ. ನಾನು ಬಡಜನತೆಯ ಪರವಾಗಿ ದೊಡ್ಡ ಆಂದೋಳನವನ್ನು ನಡಸಬೇಕಾದೀತು.

ಅಧ್ಯಕ್ಷರು.—ಬೇರೆಯವರು ಮಾತನಾಡುವುದಕ್ಕೆ ಸ್ವಲ್ಪ ಅವಕಾಶ ಕೊಡಿ.

ಶ್ರೀ ವೈ. ರಾಮಕೃಷ್ಣ.—ನಾನಿನ್ನೂ ಪೀಠಿಕೆಯಲ್ಲಿದ್ದೇನೆ. ನನಗೆ ಇನ್ನೂ ಸ್ವಲ್ಪ ಕಾಲಾವಕಾಶ ಬೇಕು. ಮಾನ್ಯ ಬಸವಲಿಂಗಪ್ಪನವರು ನಿನ್ನೆ ಮಾತನಾಡುವಾಗ ಈಗಲೂ ಹಾಗೆಯೇ ಇದೆಯೇ ರೆವಿನ್ಯೂ ಡಿಪಾರ್ಟ್‌ಮೆಂ ಎಂದುಟು ಹೇಳಿದರು. ಇನ್ನೇನಾಗಿದೆ ಈಗ ಎಂದು ನಾನು ಕೇಳು ತ್ತೇನೆ. ೧೦೦ ವರ್ಷಗಳ ಹಿಂದೆ ಈ ಇಲಾಖೆ ಹೇಗಿತ್ತೋ ಹಾಗೆಯೇ ಇದೆ ಈಗಲೂ. ಏನೂ ಬದಲಾವಣೆ ಯಿಲ್ಲ. ವಿಲೇಜ್ ಅಕೌಂಟೆಂಟ್‌ಗಳು ಇದ್ದಾರೆ. ನಮ್ಮ ರಾಜ್ಯದಲ್ಲಿ ಸಮಾಜ ಸೇವೆಯನ್ನು ಸರಿಯಾಗಿ ಮಾಡುತ್ತಿರುವಂಥ ಒಬ್ಬ ವಿಲೇಜ್ ಅಕೌಂಟೆಂಟರ ಹೆಸರನ್ನೇಳಿ ನೋಡೋಣ. ಎಲ್ಲಾ ಆಸೆ ಅಕಾಂಕ್ಷೆ ಗಳನ್ನು ಬಿಟ್ಟು ಕೆಲಸ ಮಾಡಿರುವಂಥ ಒಬ್ಬ ವಿಲೇಜ್ ಅಕೌಂಟೆಂಟರ ಹೆಸರು ಇದ್ದರೆ ಹೇಳಿ. ರೈತರು ಪಹಣಿ ಕೊಡು ಎಂದರೆ ಖಾತೆ ನಂಬರ್ ಬಿಟ್ಟಿರುತ್ತಾನೆ, ಅದನ್ನು ಹಾಕಿದರೆ ಸರ್ವೆ ನಂಬರ್ ಬಿಟ್ಟಿರು ತಾನೆ, ಈ ಎರಡನ್ನು ಹಾಕಿದರೆ ವಿಸ್ತೀರ್ಣ ಬಿಟ್ಟಿರುತ್ತಾನೆ, ಈ ಮೂರನ್ನು ಹಾಕಿದ್ದರೆ ಖಾತೆದಾರನ ಹೆಸರೇ ಇರುವುದಿಲ್ಲ. ಅವನಿಗೆ ಕೊಟ್ಟಿರತಕ್ಕ ಜವಾಬ್ದಾರಿಯನ್ನು ನಿರ್ವಹಿಸಲು ಹಿಂಜರಿಯುತ್ತಾನೆ. ಆದರೆ ಆ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಹಣದಬಲಬೇಕು. ಕೇವಲ ಹಣದಾಸೆಯಿಂದ ಬೇಕಾದರೆ ಸುಳ್ಳು ಪಹಣಿ ಸೃಷ್ಟಿಮಾಡಬಲ್ಲ, ಸರಿಯಾಗಿದ್ದ ಪಹಣಿಯನ್ನು ಸುಳ್ಳು ಮಾಡಬಲ್ಲ. ಇದೇ ರೀತಿ ಎಲ್ಲ ಕಡೆಗಳಲ್ಲು ನಡೆಯುತ್ತಿದೆ ಇವತ್ತಿನ ದಿವಸ ಯಾವ ಸಬ್ ರಿಜಿಸ್ಟ್ರಾರ್‌ರವರ ಕಛೇರಿ ಲಂಚದಿಂದ ಮುಕ್ತವಾಗಿದೆ ಎಂದು ಕೇಳುತ್ತೇನೆ. ನಿನ್ನೆದಿವಸ ಒಂದು ಕಾನೂನು ತೆಗೆದುಕೊಂಡು ಬಂದಿದ್ದೀರಿ, ವಿಲೇಜ್ ಅಫೀಸರ್ಸ್ ಲಾಂಡನ್ನು ಸರಕಾರದ ಅನುಮತಿ ಇಲ್ಲದೆ ಪರಭಾರೆ ಮಾಡಿದ್ದರೆ ಅಂಥವು ಊರ್ಜಿತ ವಾಗುವುದಿಲ್ಲ ಎಂದು. ನಾನು ಕೇಳುವುದೇನೆಂದರೆ, ಸಬ್ ರಿಜಿಸ್ಟ್ರಾರ್‌ರವರು, ಈ ಲ್ಯಾಂಡು ಕಾನೂನು ಪ್ರಕಾರ ಜಿಲ್ಲಾಧಿಕಾರಿಗಳಿಂದ ಅನುಮತಿ ತರದ ಹೊರತು ರಿಜಿಸ್ಟರ್ ಮಾಡುವುದಿಲ್ಲ ಎಂದಿದ್ದರೆ ಇಂಥಹ ಕಾನೂನು ಮಾಡುವ ಸಂದರ್ಭ ಬರುತ್ತಿತ್ತೆ?

ಶ್ರೀ ಬಿ. ಬಸವಲಿಂಗಪ್ಪ.—ಅದು ಬಹಳ ಒಳ್ಳೆಯ ಸಲಹೆ, ಅದನ್ನು ಪರಿಶೀಲಿಸೋಣ.

ಶ್ರೀ ವೈ. ರಾಮಕೃಷ್ಣ.—ನಮ್ಮ ಅಧಿಕಾರಿಗಳು ಮಾಡತಕ್ಕ ಸಣ್ಣ ಕಸಬಿಗೆ ಕೋಟ್ಯಾಂತರ ಮಂದಿ ಬಡ ರೈತರು ಬಲಿಯಾಗಿದ್ದಾರೆಂಬುದಕ್ಕೆ ಹೇಳಿದೆ. ಕೆಲವು ಕಡೆ ಕೆಲವು ಅಧಿಕಾರಿಗಳಿದ್ದಾರೆ, ಅದನ್ನು ಮಾನ್ಯ ಬಸವಲಿಂಗಪ್ಪನವರು ತಿಳಿದುಕೊಳ್ಳಬೇಕು. ಎಲ್ಲರೂ ಎಂದು ಹೇಳುವುದಿಲ್ಲ. ಒಟ್ಟಿನಲ್ಲಿ ನಾನು ಸತ್ಯವಾಗಿ ಹೇಳುತ್ತೇನೆ.

ಅಧ್ಯಕ್ಷರು.—ನಾವು ಇವತ್ತು ೬ ಗಂಟೆಗೆ ಈ ಸಭೆಯ ಕಾರ್ಯಕಲಾಪಗಳನ್ನು ಮುಗಿಸಬೇಕಾಗಿರುವುದ ರಿಂದ ಮಾನ್ಯ ಸದಸ್ಯರು ಆದಷ್ಟು ಬೇಗನೆ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಮ್ಮ ಕಡೆಯೂ ಸಹ ಬಹಳ ಮಂದಿ ಮಾತನಾಡುವವರಿದ್ದಾರೆ.

ಶ್ರೀ ಜಿ. ಬಿ. ಶಂಕರ ರಾವ್.—ನಾನು ಪಕ್ಷೇತರ ಸದಸ್ಯನಾದ್ದರಿಂದ ನಾನು ಈ ಬೇಡಿಕೆಯ ಮೇಲೂ ಕೂಡ ಮಾತನಾಡಬಯಸುತ್ತೇನೆ. ಆ ಬಗ್ಗೆ ಈಗಾಗಲೇ ನಾನು ಅನೇಕ ಸಲ ತಮ್ಮ ಗಮನಕ್ಕೆ ತಂದಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ತಾವು ಜಿಲ್ಲಾಧಿಕಾರಿಗಳ ಸಬ್‌ರಿಜಿಸ್ಟ್ರಾರರ, ಹಾಗೂ ತಹಶೀಲ್ದಾರರ ಕಛೇರಿಗಳನ್ನು ಸರ್‌ಪ್ಲಸ್ ಇನ್‌ಸ್ಪೆಕ್ಷನ್ ಮಾಡಬೇಕು ಹಿಂದೆ ಮಾನ್ಯ ಮಂಜಪ್ಪನವರು ಆ ರೀತಿ ಮಾಡುತ್ತಿದ್ದರು. ಕೊನೇ ಪಕ್ಷ ತಿಂಗಳಿಗೊಮ್ಮೆಯಾದರು ನೋಡುತ್ತಿದ್ದರು. ತಾಲ್ಲೂಕ್‌ವೈಸ್, ಸಬ್ ಡಿವಿಜನ್‌ವೈಸ್ ಇನ್‌ಸ್ಪೆಕ್ಷನ್ ಮಾಡಿ ಹಳೆಯ ರಿಕಾರ್ಡುಗಳನ್ನೆಲ್ಲ ಹೊರತೆಗೆದರು ಈಗಲೂ ಕೂಡ ಆ ಒಂದು ಪದ್ಧತಿ ಜಾರಿಗೆ ಬರಬೇಕು. ತಾವು, ನನ್ನನ್ನು ಕಂಡರೆ ಭಯಪಡುತ್ತಾರೆಂದು ತಿಳಿದುಕೊಂಡಿ ದ್ದೀರಿ. ಖಂಡಿತಾ ಅವರು ಭಯ ಪಡುವುದಿಲ್ಲ. ಎಲ್ಲರಂತೆ ಎಷ್ಟೋಜನ ಬಂದು ಹೋದಹಾಗೆ ಇವರು ಒಬ್ಬರು ಎಂದು ತಿಳಿದುಕೊಂಡಿದ್ದಾರೆ. ಹಿಂದೆ ಮಾನ್ಯ ಭರಣಯ್ಯನವರು ಹೆಗ್ಗಡದೇವನ ಕೋಟೆಯಲ್ಲಿ ಅಮಲ್ದಾರರಾಗಿದ್ದಾಗ ಹರಿಜನರಿಗೆ ಜಮೀನು ಕೊಟ್ಟಿದ್ದರು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ವಿರೋದ ಪಕ್ಷದವರಿಗೆ ಎಷ್ಟು ಕಾಲವನ್ನು ಗೊತ್ತುಪಡಿಸಲಾಗಿದೆಯೋ ಅಷ್ಟರಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ಬೇಕೆಂಬುದನ್ನು ಅವರೇ ತೀರ್ಮಾನಿಸಿ ಉಪಯೋಗಿಸಿಕೊಳ್ಳಲಿ.

ಶ್ರೀ ವೈ. ರಾಮಕೃಷ್ಣ.—ಹಾಗಾದರೆ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು—ದಯವಿಟ್ಟು ಮುಕ್ತಾಯ ಮಾಡುವುದಕ್ಕೆ ಪ್ರಯತ್ನ ಮಾಡಿ,

ಶ್ರೀ ಹೆಚ್. ಡಿ. ದೇವೇಗೌಡ.—ಸಭೆಯ ಕಾರ್ಯಕಲಾಪಗಳ ಪ್ರಕಾರ ನಿಗದಿಯಾದ ಕಾಲದಲ್ಲಿ ಕೆಲಸ ಮಾಡಬೇಕಾಗುತ್ತದೆ. ಮಾನ್ಯ ಕಂದಾಯ ಮಂತ್ರಿಗಳು ಹೇಳಿದ ಹಾಗೆ ನಮ್ಮ ಪಕ್ಷಕ್ಕೆ ಬರತಕ್ಕ ಕಾಲದಲ್ಲಿ ಮಾನ್ಯ ರಾಮಕೃಷ್ಣರವರಿಗೆ ಸ್ವಲ್ಪ ಹೆಚ್ಚು ಕಾಲವನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅವರು ಮಾತನಾಡತಕ್ಕ ವಿಚಾರವನ್ನು ಮುಕ್ತಾಯಗೊಳಿಸಬೇಕಾಗಿದೆ. ಮಾನ್ಯ ಶಂಕರ್‌ರಾವ್‌ರವರು ಹೇಳಿದ್ದಾರೆ, ನಾನು ಪಕ್ಷೇತರ ಸದಸ್ಯನಾದ್ದರಿಂದ ಪ್ರತಿನಿತ್ಯ ಪ್ರತಿಯೊಂದು ಬೇಡಿಕೆಗಳ ಮೇಲೂ ಮಾತನಾಡಬೇಕೆಂದು ಹೇಳಿದ್ದಾರೆ. ಹಾಗಾದರೆ ಸಭೆಯು ನಡೆಯುವ ಕಾಲವನ್ನು ಹಾಗೂ ಸಭೆಯಲ್ಲಿರುವ ಸದಸ್ಯರ ಸಂಖ್ಯೆಯನ್ನು ಲೆಕ್ಕಾಚಾರ ಹಾಕಿದರೆ ಅವರಿಗೆ ಒಂದೂವರೆ ನಿಮಿಷ ಕಾಲ ಬರುತ್ತದೆ, ಅದನ್ನು ಅವರಿಗೆ ಕೊಡಬೇಕು.

ಶ್ರೀ ಜಿ. ಬಿ. ಶಂಕರ ರಾವ್.—ಈಗ ಮಾನ್ಯ ದೇವೇಗೌಡರು ಹೇಳಿದ ಉಪದೇಶ ನನಗೆ ಬೇಕಾಗಿಲ್ಲ ತಾವು ಈ ಸಭೆಯಲ್ಲಿರತಕ್ಕ ೨೨೪ ಸದಸ್ಯರಿಗೂ ಪ್ರತಿ ದಿವಸ ಮಾತನಾಡುವುದಕ್ಕೆ ಅವಕಾಶ ಕೊಡುವುದಾದರೆ ನನಗೆ ಒಂದೂವರೆ ನಿಮಿಷವೇ ಬರಲಿ. ಆದರೆ ಪಕ್ಷದವರಿಗೆ ಇಂತಿಷ್ಟು ಕಾಲಾವಕಾಶವೆಂದು ಕೊಟ್ಟಮೇಲೆ ಅದರಲ್ಲಿ ಯಾರ್ಯಾರು ಎಷ್ಟೆಷ್ಟು ಕಾಲ ಮಾತನಾಡಬೇಕೆಂದು ತಿಳಿದುಕೊಂಡು ಮಾತನಾಡಬೇಕು. ಅದನ್ನು ಬಿಟ್ಟು ಒಬ್ಬರೇ ಮಾತನಾಡುತ್ತಾ ಉಳಿದವರಿಗೆ ಅವಕಾಶ ಕೊಡದಿದ್ದರೆ ಅದರ ಪರಿಣಾಮ ಏನಾಗುತ್ತದೆಂಬುದನ್ನು ಯೋಚಿಸಬೇಕು. ನಾನು ಸಭೆಗೆ ಬಂದಮೇಲೆ ನನಗೆ ತಿಳಿದ ಸಲಹೆಗಳನ್ನು ಸರ್ಕಾರಕ್ಕೆ ಕೊಡಬೇಕಾದುದಿದೆ. ಅಂಥದ್ದರಲ್ಲಿ ನನಗೆ ಮಾತನಾಡಲು ಸಮಯ ಕೊಡಿ ಎಂದು ಪ್ರತಿ ದಿವಸ ಕೇಳಿಕೊಳ್ಳಬೇಕಾಗಿದೆ. ನಾನು ಎಲ್ಲ ಬೇಡಿಕೆಗಳ ಮೇಲೂ ಮಾತನಾಡಬೇಕೆಂದು ಇಲ್ಲ. ಇವತ್ತಿನ ದಿವಸ ನಾನು ಅನೇಕ ಸಲಹೆಗಳನ್ನು ಸರ್ಕಾರಕ್ಕೆ ಕೊಡಬೇಕೆಂದಿರುವುದರಿಂದ ಮಾತನಾಡಬಯಸುತ್ತೇನೆ.

ಅಧ್ಯಕ್ಷರು—ತಮ್ಮ ಸಲಹೆ ಏನೆಂಬುದನ್ನು ಕೇಳಿದ್ದೇನೆ. ಆದ್ದರಿಂದ ದಯವಿಟ್ಟು ತಾವು ತಮ್ಮ ಸಾ ನದಲ್ಲಿ ಕುಳಿತುಕೊಳ್ಳಿ. ಈಗ ಮಾನ್ಯ ರಾಮಕೃಷ್ಣರವರು ಸ್ವಲ್ಪ ಮಾತನಾಡಿ ತಮ್ಮ ಭಾಷಣವನ್ನು ಮುಕ್ತಾಯ ಮಾಡಿ.

ಶ್ರೀ ವೈ. ರಾಮಕೃಷ್ಣ.—ನಾನು ನನ್ನ ಮಾತನ್ನು ಮುಗಿಸಿದ್ದೇನೆ.

ಒಬ್ಬರು ಮಾನ್ಯ ಸದಸ್ಯರು—ಅವರಿಗೇ ಇಷ್ಟವಿಲ್ಲದಿರುವಾಗ ನಾವೇಕೆ ಒತ್ತಾಯಸಬೇಕು?

ಶ್ರೀ ಎ. ರಾಮಚಂದ್ರ—ಮಾನ್ಯ ರಾಮಕೃಷ್ಣರವರು ನಮ್ಮ ವಿರೋಧ ಪಕ್ಷದ ನಾಯಕರಿದ್ದ ಹಾಗೆ ಇದ್ದಾರೆ, ಅವರಿಗೆ ತಾವು ಇನ್ನು ಎಷ್ಟು ಕಾಲಾವಕಾಶ ಬೇಕು, ಬೇಗ ಮುಗಿಸಿ ಎಂದರೆ ಹೇಗೆ?

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಈಗ ಅದರ ಬಗ್ಗೆ ಚರ್ಚೆ ಬೇಡ.

† ಶ್ರೀ ಡಿ. ಟಿ. ರಾಮು (ಚನ್ನಪಟ್ಟಣ).—ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ಮಾನ್ಯ ಕಂದಾಯ ಸಚಿವರು ಏನು ಇವತ್ತು ಬೇಡಿಕೆಗಳನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ ಅದನ್ನು ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತಾ, ಕೆಲವು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟ ಮೊದಲನೆಯದಾಗಿ ನಮಗೆ ಸ್ವಾತಂತ್ರ್ಯ ಬಂದು ೩೦ ವರ್ಷಗಳಾದವು. ೩೦ ವರ್ಷಗಳಿಂದಲೂ ಈ ರಾಜ್ಯದ ರೆವಿನ್ಯೂ ಇಲಾಖೆಯವರು ಯಾವುದೋ ಒಂದು ಕ್ರಾಂತಿಕಾರಕ ಹೆಜ್ಜೆಯನ್ನು ಇಡಲಿಲ್ಲ, ೧೯೭೨ರ ಕಾಲದಲ್ಲಿ ಇದ್ದ ಮಂತ್ರಿಮಂಡಲದವರೂ ಮಾಡಲಿಲ್ಲ, ಆದರೆ ಈ ಭೂಸುಧಾರಣೆಯ ಮಸೂದೆಯನ್ನು ಇಡೀ ರಾಷ್ಟ್ರದಲ್ಲಿಯೇ ಅದೂ ಕರ್ನಾಟಕ ರಾಜ್ಯದಲ್ಲಿ ಪ್ರಪ್ರಥಮವಾಗಿ ಮಾಡಿ ಭೂ ಸುಧಾರಣೆಯ ಶಾಸನವನ್ನು ಪಡೆಯುವಂತಾಯಿತು. ರಾಷ್ಟ್ರದ ಎಲ್ಲಾ ರಾಜ್ಯಗಳನ್ನು ನಾವು ವಿಶ್ಲೇಷಣೆಗೊಳಿಸಿದಾಗ ಕೇವಲ ನನ್ನ ದೃಷ್ಟಿಯಲ್ಲಿ ಕೇವಲ ೪ ರಾಜ್ಯಗಳು ಮಾತ್ರ ಈ ಭೂ ಸುಧಾರಣಾ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ಮಾಡಿದವು. ಅವುಗಳು ಯಾವುವು ಎಂದರೆ ಮೊದಲನೆಯದಾಗಿ ಕೇರಳ ರಾಜ್ಯ, ಕಮ್ಯುನಿಸ್ಟ್ ಆಡಳಿತ ಎಲ್ಲಿತ್ತೋ, ಎಡ ಪಂಥೀಯರ ಒಂದು ರಾಜ್ಯ ಅಲ್ಲಿ, ಎರಡನೆಯದಾಗಿ ಆಂಧ್ರ ರಾಜ್ಯದಲ್ಲಿ

ಮತ್ತು ಮೂರನೆಯದಾಗಿ ಮಹಾರಾಷ್ಟ್ರದಲ್ಲಿ ನಾಲ್ಕನೆಯದಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ, ಆದರೆ ನಾವು ಎಲ್ಲಾ ರಾಜ್ಯಗಳಲ್ಲೂ ಸಹ ಹೋಲಿಸಿ ನೋಡಿದಾಗ ನಮ್ಮ ರಾಜ್ಯವೇ ಪ್ರಥಮ ಸ್ಥಾನವನ್ನು ಪಡೆಯುತ್ತದೆ ಎನ್ನತಕ್ಕಂಥ ವಿಷಯವನ್ನು ನಾನು ಈ ಸಭೆಯಲ್ಲಿ ಹೇಳುವುದಕ್ಕೆ ಹೆಮ್ಮೆ ಪಡುತ್ತೇನೆ. ಏತಕ್ಕೆಂದರೆ ಇಡೀ ಭೂ ಸುಧಾರಣೆಯ ನೀತಿಯನ್ನು ಹೊಂದಿರತಕ್ಕ ಕೇರಳ ರಾಜ್ಯಕ್ಕೆ ಹೋಲಿಸಿ ನೋಡಿದರೆ ನಮ್ಮ ರಾಜ್ಯ ಬಹಳ ಪ್ರಗತಿದಾಯಕವಾದ ಭೂ ಸುಧಾರಣೆಯನ್ನು ತಂದಿದೆ ಎಂದು ಎಲ್ಲರೂ ಒಪ್ಪತಕ್ಕ ವಿಚಾರವಾಗಿದೆಯೆಂಬುದನ್ನು ಗಮನಿಸಬೇಕಾಗುತ್ತದೆ. ಇಂಥಾ ರಾಜ್ಯಗಳಲ್ಲಿ ಕೇರಳವೂ ಒಂದು ಎಂದು ಸನ್ಮಾನ್ಯ ಸದಸ್ಯರಾದ ಶ್ರೀ ರಾಮದೇವ್‌ರವರು ಹೇಳುತ್ತಿದ್ದರು. ಅವರಿಗೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ ಕೇರಳದಲ್ಲಿ ಭೂ ಮಾಲೀಕನನ್ನು ಮಾಡಿ ಅಲ್ಲಿ ಉಳುವವನಿಗೆ ಒಂದಾದರೂ ರಿಯಾಯಿತಿ ಉಂಟು ಅಂದರೆ ನಮ್ಮ ರಾಜ್ಯದಲ್ಲಿ ಉಳುವವನೇ ಭೂಮಿಯ ಒಡೆಯ ಎನ್ನತಕ್ಕ ಶಾಸನವನ್ನು ಜಾರಿಯಲ್ಲಿ ತಂದಿದ್ದಾರೆ. ಮಾನ್ಯ ವಿರೋಧಿ ಮಿತ್ರರು ಮಾತನಾಡುತ್ತಾ ಈ ಭೂ ಸುಧಾರಣೆಯಿಂದ ಒಂದು ಹೊಸ ವರ್ಗವನ್ನು ನಿರ್ಮಿಸಿದ್ದಾರೆ, ಅಂದರೆ ಭೂಮಿಯನ್ನು ಕಳೆದುಕೊಳ್ಳತಕ್ಕ ಒಂದು ಹೊಸ ವರ್ಗವನ್ನು ನಿರ್ಮಿಸಿದ್ದಾರೆ ಎನ್ನತಕ್ಕ ಒಂದು ವಾದವನ್ನು ಅವರು ಮಂಡಿಸಿದ್ದಾರೆ. ಅದು ಹೇಗೆ ಆಗುತ್ತದೆ ಸ್ವಾಮಿ ? ಬೆಂಗಳೂರಿನಲ್ಲಿ ಕೂತುಕೊಂಡು ಗುಂಡು ಪೇಟೆಯಲ್ಲಿ ವ್ಯವಸಾಯ ಮಾಡುತ್ತೇನೆಂದು ಹೇಳುವುದಾದರೆ ಅದಕ್ಕೂ ಒಂದು ನೀತಿ ಬೇಡವೇ ? ಬೆಳೆದ ಸಂಪತ್ತಿನ ಬಹುಭಾಗವನ್ನೆಲ್ಲಾ ಜಮೀನ್ದಾರರೇ ಪಡೆಯುತ್ತಿದ್ದರು. ಆದರೆ ಇಂದು ಭೂ ಸುಧಾರಣಾ ಮಸೂದೆಯಿಂದ, ಭೂ ನ್ಯಾಯಮಂಡಲಿಗಳನ್ನು ರಚಿಸಿ ನಾವು ಈಗಾಗಲೇ ಎಷ್ಟೋ ಮೊಕದ್ದಮೆಗಳನ್ನು ಮುಗಿಸಿದ್ದೇವೆ. ಅದಕ್ಕೆ ನಮಗೆ ಅಂಕಿಸಂಖ್ಯೆಗಳನ್ನು ಕೊಡುವುದಾದರೆ, ನಮಗೆ ೭ ಲಕ್ಷದ ೪೫೪ ಅರ್ಜಿಗಳಲ್ಲಿ ಈಗಾಗಲೇ ನಾವು ೩ ಲಕ್ಷದ ೬೫ ಸಾವಿರದ ೯೮೧ ಅರ್ಜಿಗಳನ್ನು ನಾವು ಈಗಾಗಲೇ ವಿಲೇ ಮಾಡಿದ್ದೇವೆ. ಇದರಲ್ಲಿ ಅರ್ಧಕ್ಕಿಂತಲೂ ಎರಡು ಪಟ್ಟು ಅಂದರೆ ೨ ಲಕ್ಷದ ೩೭,೯೯೭ ಅರ್ಜಿಗಳು ಉಳುವವನಿಗೇ ಅಂದರೆ ಭೂಮಿಯನ್ನು ಯಾರು ಉಳುತ್ತಿದ್ದರೋ ಅವರ ಪರವಾಗಿಯೇ ಆಗಿದೆ ಎನ್ನತಕ್ಕದ್ದನ್ನು ನೋಡಿದಾಗ ನಮ್ಮ ರಾಜ್ಯ ಪ್ರಗತಿ ಪಥದಲ್ಲಿದೆ ಎನ್ನತಕ್ಕದ್ದನ್ನು ನಾವು ಮರೆಯಬಾರದೆಂದು ಮಾನ್ಯ ಮಿತ್ರರಲ್ಲಿ ಹೇಳಬಯಸುತ್ತೇನೆ. ನನ್ನ ಹಿರಿಯ ಮಿತ್ರರು ೧೦೦ ವರ್ಷ ಹಿಂದೆ ಯಾವ ರೀತಿ ಇತ್ತೋ ಅದೇ ರೀತಿ ನಮ್ಮ ರಾಜ್ಯದಲ್ಲಿ ರೆವಿನ್ಯೂ ಇಲಾಖೆ ಇದೆ ಆದರೆ ಒಂದೇ ಒಂದು ವ್ಯತ್ಯಾಸವಾಗಿದೆ ಅದು ಏನೆಂದರೆ ಒಬ್ಬ ವಿಲೇಜ್ ಅಕೌಂಟೆಂಟ್‌ನ್ನು ಮಾತ್ರ ಹಾಕಿದ್ದಾರೆ ಎನ್ನುವ ಮಾತನ್ನು ಹೇಳಿದರು. ಸ್ವಾಮಿ, ನಾನು ಅವರಲ್ಲಿ ಕೇಳುತ್ತೇನೆ, ಉಳುವವನೇ ಭೂಮಿಯ ಒಡೆಯ ಎನ್ನತಕ್ಕ ಕ್ರಾಂತಿಕಾರಕ ನೀತಿಯನ್ನು ನಾವು ಏನು ತಂದಿದ್ದೇವೆ ಅದನ್ನು ನೀವು ಒಪ್ಪದೇ ಹೋದರು ಇನ್ನು ನಾವು ಪ್ರಗತಿದಾಯಕವೆಂದು ಹೇಳುತ್ತೀರಿ ಎಂದು ನಾನು ಪ್ರಶ್ನೆ ಹಾಕುವುದಕ್ಕೆ ಇಷ್ಟಪಡುತ್ತೇನೆ. ಆ ಮೇಲೆ ಭೂ ನ್ಯಾಯಮಂಡಲಿಗಳಲ್ಲಿ ಅವಿದ್ಯಾವಂತರನ್ನೇ ಹಾಕಿದ್ದೀರಿ ಎಂದು ಹೇಳಿದರು. ನಾನು ನನ್ನ ಮೊದಲನೆ ಭಾಷಣವನ್ನು ಬಜೆಟ್‌ನ ಮೇಲೆ ಮಾತನಾಡುವಾಗಲೇ ಹೇಳಿದ್ದೇನೆ. ಹಿಂದೆ ಈ ಕಾನೂನುಗಳು ಬರುವುದಕ್ಕಿಂತ ಮುಂಚೆ ನಮ್ಮ ತಾತ ಮುತ್ತಾತಂದಿರುಗಳು ಅರಳಿ ಕಟ್ಟೆ ಕೆಳಗಡೆ ಕುಳಿತುಕೊಂಡು ಯಾವ ಒಂದು ನ್ಯಾಯವನ್ನು ವಿತರಣೆ ಮಾಡುತ್ತಿದ್ದರು ಆ ನ್ಯಾಯವನ್ನು ಇವತ್ತು ಶ್ರೇಷ್ಟ ನ್ಯಾಯಾಲಯಗಳ ತೀರ್ಪುಗಳಿಗಿಂತ ಉತ್ತಮವಾದ ತೀರ್ಪುಗಳನ್ನು ನೀಡುತ್ತಿದ್ದರು ಎಂದು ಹೇಳಿದ್ದೇನೆ. ಈಗ ಹಳ್ಳಿಯಲ್ಲಿ ಒಬ್ಬನ ಜಮೀನನ್ನು ಯಾರು ಉಳುತ್ತಿದ್ದಾರೆಂಬುದನ್ನು ಹೇಳುವುದಕ್ಕೆ ಸಹೋದರಿ ಪ್ರಮೀಳಾರವರು ಹೇಳಬೇಕಾಗಿತ್ತೇ ? ಆ ರೀತಿ ಏನೂ ಹೇಳಬೇಕಾಗಿಲ್ಲ ಅಂಥಾ ಒಂದು ನೀತಿಯನ್ನೇ ನಾವು ಅನುಸರಿಸಿದ್ದೇವೆ.

ಇನ್ನು ಎರಡನೆಯದಾಗಿ, ಈ ರೆವಿನ್ಯೂ ಇಲಾಖೆಯಲ್ಲಿ ಇನ್ನೊಂದು ಪ್ರಗತಿಯನ್ನು ನಾವು ಸಾಧಿಸಿದ್ದೇವೆ. ಅದು ಏನೆಂದರೆ ೫ ಎಕರೆ ಹೊಂದಿರತಕ್ಕ ಸಣ್ಣ ಹಿಡುವಳಿದಾರರಿಗೆ ಕೊಟ್ಟಿರತಕ್ಕ ಒಂದು ಕಂದಾಯ ವಿನಾಯಿತಿ ಕೊಟ್ಟಿದ್ದೇವೆ ಅದು ಪ್ರಗತಿದಾಯಕವಲ್ಲವೇ ಎಂದು ಮಾನ್ಯ ಸದಸ್ಯರಲ್ಲಿ ನಾನು ಪ್ರಶ್ನೆ ಹಾಕುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮೂರನೆಯದಾಗಿ, ಮಾನ್ಯ ಕಂದಾಯ ಸಚಿವರು ವಿಧವೆಯರಿಗೆ ಮಾಶಾಸನ ತರಬೇಕು ಎಂದು ಮುಂದಿಟ್ಟಿದ್ದಾರೆ. ಇದು ಒಳ್ಳೆಯ ಕಾರ್ಯಕ್ರಮ. ಆದರೆ ಇದರಲ್ಲಿ ಒಂದು ಸಲಹೆಯನ್ನು ಮಾನ್ಯ ಸಚಿವರಲ್ಲಿ ಕೊಡಬಯಸುತ್ತೇನೆ. ಇವತ್ತು ಅನೇಕ ವಿಧವೆಯರು ೧೦ ಗುಂಟೆ, ಅರ್ಧ ಎಕರೆ

ಇರತಕ್ಕಂಥವರು ಭೂಮಿಯನ್ನು ಕಳೆದುಕೊಂಡಿದ್ದಾರೆ, ಇದನ್ನು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಆ ರೀತಿ ಭೂಮಿಯನ್ನು ಕಳೆದುಕೊಳ್ಳತಕ್ಕ ಸಣ್ಣ ಹಿಡುವಳಿದಾರರೇನಿದ್ದಾರೆ ಅವರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವಂತೆ ತಾವು ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅದು ಏನು ಕಾರ್ಯಕ್ರಮವೆಂದರೆ ಯಾವುದಾದರೂ ಒಂದು ಬ್ಯಾಂಕ್‌ನಲ್ಲಿ ಅವರಿಗೆ ೧೫೦೦, ನೋ ಇಲ್ಲ, ಎರಡು ಸಾವಿರ ರೂಪಾಯಿಗಳ ಸಾಲವನ್ನೋ ಕೊಟ್ಟು ಅವರೂ ಸಹ ಗೌರವಯುತರಾಗಿ ಜೀವನ ನಡೆಸುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಸಲಹೆ ಕೊಡಬಯಸುತ್ತೇನೆ. ಇದಾದ ಮೇಲೆ ಹಿಂದಿನ ಕಾಲದಲ್ಲಿ ಜಮಾ ಬಂದಿ ಏನು ನಡೆಸುತ್ತಿದ್ದರು ಅದು ಬಹಳ ಉತ್ತಮವಾದ ಪದ್ಧತಿಯಾಗಿತ್ತು. ಜಮಾ ಬಂದಿ ಏನಾದರೂ ಆಯಿತು ಎಂದರೆ ಅಲ್ಲಿಗೆ ಡೆಪ್ಯುಟಿ ಕಮಿಷನರ್‌ರವರು ಆಗಲೀ ಅಥವಾ ಅಮಲ್ದಾರ್‌ರಾಗಲೀ ಆಯಾಯಾ ಊರುಗಳಿಗೆ ಹೋಗಿ ಕಂದಾಯ ವಸೂಲಿ ಮಾಡುವುದರ ಜೊತೆಗೆ ಆಯಾ ಹಳ್ಳಿಗಳ ಸಮಸ್ಯೆ ಏನು ಎನ್ನುವುದನ್ನು ವಿಚಾರಣೆ ಮಾಡಿ ಅಲ್ಲಿಯ ಸ್ಥಳದಲ್ಲಿಯೇ ತೀರ್ಪನ್ನು ಕೊಟ್ಟು ಎಲ್ಲಾ ಸಮಸ್ಯೆಗಳನ್ನೂ ಪರಿಹರಿಸತಕ್ಕಂಥ ಕಾರ್ಯವನ್ನು ಅವರು ಮಾಡುತ್ತಿದ್ದರು. ಆ ಒಂದು ಪದ್ಧತಿ ಕೆಲವು ಒಂದಷ್ಟು ಕಾಲ ಸತ್ತು ಹೋಗಿತ್ತು ಅದಕ್ಕೆ ಮಾನ್ಯ ಮಂತ್ರಿಗಳವರು ಪುನಃ ಜೀವ ಕೊಡುತ್ತಿದ್ದಾರೆ, ಅದನ್ನು ಪುನಃ ಜಾರಿಗೆ ತರತಕ್ಕಂಥ ಕೆಲಸ ಮಾಡುತ್ತಿರುವುದು ನಿಜವಾಗಿಯೂ ಸ್ವಾಗತಾರ್ಹವಾದ ಸಂಗತಿ ಎಂದು ನಾನು ಸ್ವಾಗತಿಸುತ್ತೇನೆ.

ಇನ್ನು ಕೆಲವು ಸಲಹೆಗಳನ್ನು ನಾನು ಕೊಡುವುದಾದರೆ ಈ ಫ್ರಾಗ್‌ಮೆಂಟೇಷನ್ ಆ್ಯಕ್ಟ್ ಇದೆ, ಅದರಡಿಯಲ್ಲಿ ಕೆಲವೊಂದು ನಿರ್ದಿಷ್ಟ ಸೂಚನೆಗಳು ಇವೆ. ಈಗ ಒಂದು ಮನೆಯಲ್ಲಿ ೫-೬ ಮಕ್ಕಳು ಇದ್ದು ಅವರಿಗೆ ೧೦-೧೦ ಗುಂಟೆ ಎಕರೆನೋ ಇಲ್ಲ ೧೫-೧೫ ಗುಂಟೆನೋ ಎಕರೆ ಭಾಗವನ್ನಾಗಿ ಕೊಡಬೇಕಾಗಿ ಬಂದಾಗ ಆ ರೀತಿ ವಿಭಾಗ ಮಾಡಿಕೊಡಬಾರದೆನ್ನುವ ನೀತಿಯನ್ನು ತಂದಿದ್ದಾರೆ. ನನಗಾದರೂ ಅನ್ನಿಸುತ್ತದೆ ಅದು ತಪ್ಪು ಭಾವನೆ. ಏತಕ್ಕೆಂದರೆ ಒಂದು ಮನೆಯಲ್ಲಿ ೪-೫ ಜನ ಇರುತ್ತಾರೆ ಆಗ ಅವರಿಗೆ ೧೫ ಗುಂಟೆನೋ ೧೦-೧೦ ಗುಂಟೆನೋ ಕೊಡಬೇಕಾದಾಗ ಅವರಿಗೆ ಕೊಡತಕ್ಕ ಅವಕಾಶವಿಲ್ಲ ಏತಕ್ಕೆಂದರೆ ಫ್ರಾಗ್‌ಮೆಂಟೇಷನ್ ತಡೆದು ನಿಲ್ಲಿಸುತ್ತದೆ. ಅದು ತಡೆ ಒಡ್ಡುತ್ತವೆ. ಆದುದರಿಂದ ಈ ಫ್ರಾಗ್‌ಮೆಂಟೇಷನ್ ಆ್ಯಕ್ಟ್‌ಗೆ ಒಂದು ತಿದ್ದುಪಡಿ ತಂದು ಯಾವ ರೀತಿಯಲ್ಲಿ ೧೫-೧೫ ಗುಂಟೆ ಅನುಭವದಲ್ಲಿರುತ್ತದೆಯೋ ಆ ರೀತಿಯಾಗಿಯೇ ಖಾತೆ ಮಾಡಬೇಕೆಂದು ಸಲಹೆ ಮಾಡಬಯಸುತ್ತೇನೆ.

ಅಧ್ಯಕ್ಷರು.—ವೇಳೆ ಆಯಿತು ನಿಮ್ಮ ಭಾಷಣವನ್ನು ಮುಗಿಸಿ.

ಶ್ರೀ ಡಿ. ಟಿ. ರಾಮು.—ನಮ್ಮ ಕಡೆಯ ಸ್ನೇಹಿತರ ವೇಳೆಯಲ್ಲಿ ೫ ನಿಮಿಷ ಸಾಲವಾಗಿ ತೆಗೆದುಕೊಳ್ಳುತ್ತೇನೆ. They have agreed to spare five minutes.

ಅಧ್ಯಕ್ಷರು.—ನೀವು ಆ ರೀತಿ ಹೇಳುವುದೆಲ್ಲಾ ರಿಕಾರ್ಡ್ ಆಗುತ್ತದೆ.

ಶ್ರೀ ಡಿ. ಟಿ. ರಾಮು.—ಸ್ವಾಮಿ, ಆ ಮೇಲೆ ನಾನು ಆಗಲೇ ಹೇಳಿದ ಹಾಗೆ ೫-೬ ಜನ ಅಣ್ಣ ತಮ್ಮಂದಿರು ಇರುತ್ತಾರೆ ತಂದೆಯ ಆಸ್ತಿಯನ್ನು ಅವರು ಪಾರಿಕತ್ ಮಾಡಿಕೊಳ್ಳಬೇಕು ಎಂದರೆ ಸಬ್ ರಿಜಿಸ್ಟ್ರಾರ್‌ರವರ ಆಫೀಸಿಗೆ ಹೋಗಬೇಕು. ರಿಜಿಸ್ಟರ್ ಮಾಡಿಸಬೇಕು ಆದರೆ ಐವರಲ್ಲಿ ಇಬ್ಬರು ಮೂವ್ವರು ಒಪ್ಪುವುದಿಲ್ಲವೆಂದರೆ ಆಗ ಪರಿಸ್ಥಿತಿ ಏನಾಗುತ್ತದೆ ? ಆಗ ಅದು ಪಾರಿಕತ್ ಆಗುವುದಿಲ್ಲ, ಖಾತೆಯಾಗುವುದಿಲ್ಲ ತೊಂದರೆಯಾಗುತ್ತದೆ. ಆದುದರಿಂದ ಯಾರು ಯಾರು ೧೦, ೧೫ ಗುಂಟೆ ಏನು ಅನುಭವಿಸುತ್ತಿದ್ದಾರೆ, ಆ ರೀತಿ ಅನುಭವಿಸತಕ್ಕಂಥವರ ಹೆಸರಿನಲ್ಲಿಯೇ ಖಾತೆಯನ್ನು ಬರೆಯಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ. ಇನ್ನೊಂದು ಏನೆಂದರೆ ಸಾಕಷ್ಟು ಬಗರ್‌ಹುಕುಂ ಸಾಗುವಳಿ ಆಗಿರುತ್ತದೆ. ಸರ್ಕಾರಿ ಜಮೀನನ್ನೇ ಉತ್ತಿಕೊಂಡು ಹೋಗುತ್ತಿರುತ್ತಾರೆ ಅದರಿಂದ ಕೆಲವರಿಗೆ ಏನೋ ಬಡವರಿಗೆ ತೊಂದರೆಯಾಗುತ್ತದೆ. ಆದರೆ ಯಾರು ಪ್ರಭಾವಶಾಲಿಗಳಿರುತ್ತಾರೆ ಅವರು... ಪ್ರಭಾವಿತರಾದಂಥಾ ಶಕ್ತಿಗಳು ೧೦ ವರ್ಷದ ಟಿ. ಟಿ.ಯನ್ನು ಕೊಟ್ಟು ಅವರ ಹೆಸರಿನಲ್ಲಿ ಬರೆಸಿಕೊಂಡು ಬಿಡುತ್ತಾರೆ. ಯಾವಾಗ ಅವರು ೧೦ ವರ್ಷದ ಟಿ. ಟಿ. ಕೊಟ್ಟು ಅವರ ಹೆಸರಿನಲ್ಲಿ ಬರೆಸಿಕೊಂಡು ಬಿಡುತ್ತಾರೋ ಆವಾಗ ಆ ಜಮೀನು ಅವರ ಹೆಸರಿನಲ್ಲಿ ಕನ್‌ಫರ್ಮ್ ಆಗಿಬಿಡುತ್ತದೆ. ಈ ಬಗರ್‌ಹುಕುಂನಲ್ಲಿ ನಿಜವಾಗಿ ಯಾರ್ಯಾರು ಸಾಗುವಳಿ ಮಾಡುತ್ತಾ ಇದ್ದಾರೆ ಅಂಥಾವರಿಗೆ ಮಾತ್ರ

ಈ ಜಮೀನು ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಪ್ರಭಾವಿತರಾದಂಥಾ ಜನಗಳಿಂದ ಈ ಒಂದು ಆಕ್ಟ್ ದುರುಪಯೋಗವಾಗದಂತೆ ನೋಡಿಕೊಳ್ಳಬೇಕು ಎಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

೫-೦೦ ಪಿ. ಎಂ.

ಇನ್ನು ಗೋಮಾಳದ ಪ್ರಶ್ನೆ. ಎಷ್ಟು ದನಗಳು ಇರಬೇಕೋ ಅಷ್ಟು ಗೋಮಾಳ ಇರಬೇಕು ಅಂತ ಇದೆ. ಕೆಲವರಿಗೆ ಬಡವರಿಗೆ ಈ ಗೋಮಾಳ ಸಿಕ್ಕಿದ್ದರೆ ಅವರಿಗೆ ಸಿಗಲಿ ಬೇಡ ಅನ್ನುವುದಿಲ್ಲ. ಆದರೆ ಇದರಲ್ಲಿ ಏನಾಗಿದೆ ಎಂದರೆ ಕೆಲವು ಪ್ರಭಾವಿತರಾದ ಜನಗಳು ಇದನ್ನು ಉಪಯೋಗಿಸಿಕೊಂಡು ಹೆಚ್ಚು ಜಮೀನುಗಳನ್ನು ಲಪಟಾಯಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ, ಅದು ಹೋಗಬೇಕು ಎನ್ನುವ ಸಲಹೆಯನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಜಿಲ್ಲಾ ಮಟ್ಟದಲ್ಲಿ ಹೊಂದಾಣಿಕೆಯಾದಂಥಾ ಅಧಿಕಾರಿಗಳು ಏನು ಇದ್ದಾರೆ ಅಂದರೆ ಜಿಲ್ಲಾಧಿಕಾರಿಗಳು ಏನು ಇದ್ದಾರೆ ಅವರಿಗೆ ಇನ್ನೂ ಒಂದು ಹೆಚ್ಚಿನ ಅಧಿಕಾರವನ್ನು ಕೊಡಬೇಕು ಎಂದು ಹೇಳುತ್ತೇನೆ. ಅವರಿಗೆ ಹೆಚ್ಚಿನ ಒಂದು ಅಧಿಕಾರ ಕೊಟ್ಟಾಗ ಮಾತ್ರ ಒಳ್ಳೆಯ ರೀತಿಯಲ್ಲಿ ಚಾಕುಚಕ್ಯತೆಯಿಂದ ರೆವಿನ್ಯೂ ಕೆಲಸ ಕಾರ್ಯಗಳು ನಿರ್ವಹಿಸಿ ಈ ಒಂದು ಇಲಾಖೆ ಚೆನ್ನಾಗಿ ನಡೆಯಬಲ್ಲದು ಎಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೊನೆಯದಾಗಿ ವಿಲೇಜ್ ಮ್ಯಾಪ್ಸ್ ಬಗ್ಗೆ ಒಂದು ವಿಷಯ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ವಿಲೇಜ್ ಅಕೌಂಟೆಂಟ್‌ರ ಹತ್ತಿರ ತಾಲ್ಲೂಕು ಮ್ಯಾಪ್ಸ್ ಕೇಳಿದರೆ ಸಿಕ್ಕುತ್ತಾ ಇಲ್ಲ. ಮತ್ತು ಈ ಮ್ಯಾಪ್ ವಿಲೇಜ್ ಅಕೌಂಟೆಂಟ್‌ರ ಹತ್ತಿರ ಇರುವುದೂ ಇಲ್ಲ. ಆದುದರಿಂದ ನಾನು ಈ ಸಂದರ್ಭದಲ್ಲಿ ತಮಗೆ ಹೇಳುವುದೇನೆಂದರೆ ವಿಲೇಜ್ ಅಕೌಂಟೆಂಟ್‌ರ ಹತ್ತಿರ ಆಯಾಯ ತಾಲ್ಲೂಕು ಮ್ಯಾಪ್ ಮತ್ತು ಸಂಬಂಧಪಟ್ಟ ಊರಿನ ಮ್ಯಾಪ್ ಒದಗಿಸಬೇಕು ಜೊತೆಗೆ ಆಯಾಯ ತಾಲ್ಲೂಕಿನಲ್ಲಿ ಹಿಂದೆ ತಯಾರಿಸಲ್ಪಟ್ಟಂಥಾ ಒರಿಜಿನಲ್ ಡಾಕ್ಯುಮೆಂಟ್ ಒದಗಿಸಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ಕೆಲವು ದಾಖಲೆಗಳನ್ನು ಒರಿಜಿನಲ್ ಮ್ಯಾಪ್‌ನಲ್ಲೇ ಪತ್ತೆ ಹಚ್ಚಬಹುದು. ಈ ಬಗ್ಗೆ ನನ್ನ ತಾಲ್ಲೂಕಿನಲ್ಲೇ ಒಂದು ಸಮಸ್ಯೆ ಹುಟ್ಟಿಕೊಂಡಿದ್ದನ್ನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ತಾಲ್ಲೂಕಿನಲ್ಲಿ ನಡೆದಂಥಾದ್ದದು. ಒರಿಜಿನಲ್ ಮ್ಯಾಪ್‌ನಲ್ಲಿ ಸರ್ಕಾರೀ ಜಮೀನು ಅಂತ ಇದೆ. ಆ ಸರ್ಕಾರಿ ಜಮೀನನ್ನು ಒಬ್ಬ ಪ್ರಭಾವಿತವಾದ ವ್ಯಕ್ತಿ ಆ ಸರ್ಕಾರೀ ಭೂಮಿಯೊಳಗೆ ಒಂದು ಬಾವಿ ತೆಗೆಸಿದರು. ಅದನ್ನು ನೋಡಿದರೆ ಮತ್ತು ದೇವಸ್ಥಾನದ ಪಕ್ಕದಲ್ಲಿರತಕ್ಕಂಥಾ ಒಂದು ಜಮೀನನ್ನೂ ಸಹ ನೋಡಿದರೆ ಅದು ಸರ್ಕಾರೀ ಭೂಮಿ ಅನ್ನುವುದು ನನಗಂತೂ ಖಚಿತವಾಗಿ ಗೊತ್ತು. ಆದರೆ ಏನಾಯಿತು ಎಂದರೆ ಒಂದು ಸಲ ಆ ಊರಿನ ೫೦-೬೦ ಜನ ಹರಿಜನರ ಬಗ್ಗೆ ಯಾವುದೋ ಒಂದು ಪರಿಸ್ಥಿತಿ ಬಗ್ಗೆ ಘರ್ಷಣೆ ಶುರುವಾಯಿತು. ಆ ಘರ್ಷಣೆ ಶುರುವಾದಾಗ ಈ ೫೦-೬೦ ಜನ ಹರಿಜನರೂ ಕೂಡ ಆ ಬಾವಿಯನ್ನು ಮುಚ್ಚಿಬಿಟ್ಟರು. ಆ ೫೦ ಜನ ಹರಿಜನರೂ ಕೂಡ ಆ ಭಾವಿಯನ್ನು ಮುಚ್ಚಿದ ಮೇಲೆ ನನ್ನ ತಾಲ್ಲೂಕಿನಲ್ಲೇ ಈ ಬಗ್ಗೆ ಕೇಸು ಹಾಕುತ್ತಿದ್ದಾರೆ. ಇದಕ್ಕೆ ಕಾರಣ ಏನು ಒರಿಜಿನಲ್ ಮ್ಯಾಪ್ ಇಲ್ಲದೇ ಇದ್ದುದರಿಂದ ಒರಿಜಿನಲ್ ವಿಲೇಜ್ ಮ್ಯಾಪ್ ಅವನು ಇಟ್ಟುಕೊಂಡಿದ್ದರೆ ಈ ಪ್ರಶ್ನೆಯೇ ಇರುತ್ತಿರಲಿಲ್ಲಾ. ಈ ಬಗ್ಗೆ ಯಾವುದೇ ಒಂದು ಪೋಲೀಸ್ ಪ್ರಸಂಗದ ವಿರುದ್ಧವಾಗಿ ಅವನು ವ್ಯಾಖ್ಯೆ ಮಾಡುತ್ತಾ ಇರಲಿಲ್ಲಾ. ಇದು ನನ್ನ ಒಂದು ಅಭಿಪ್ರಾಯ. ಆದುದರಿಂದ ಈ ಒಂದು ಪ್ರಸಂಗ ನೋಡಿದರೆ ಈ ರೆವಿನ್ಯೂ ಇಲಾಖೆಯಲ್ಲಿ ಇರತಕ್ಕಂಥಾದ್ದೆಲ್ಲಾ ಸರಿ ಎನ್ನತಕ್ಕಂಥಾ ನೀತಿಯಲ್ಲಿ ಮಾತನಾಡುವವನು ನಾನಲ್ಲ. ಇದರಲ್ಲಿ ಕೆಲವು ಲೋಪದೋಷಗಳು ಇದ್ದಾವೆ. ಆ ಲೋಪದೋಷಗಳನ್ನು ಯಾವ ರೀತಿ ಸರಿಪಡಿಸಬೇಕು ಅನ್ನುವುದಕ್ಕೆ ನಾನು ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ. ಈ ಸಲಹೆಯನ್ನು ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಂಡು ಈ ರಾಜ್ಯದ ರಥವನ್ನು ಒಂದು ಒಳ್ಳೆಯ ಪ್ರಗತಿ ಪಥದಲ್ಲಿ ನಡೆಯುವಂತೆ ಒಳ್ಳೆಯ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಅಂತ ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

B.B. SAYANAK (Belgaum).—Mr. Speaker, Sir, I oppose the Demand tabled by the Hon'ble Minister for Revenue and I want to give some suggestions. relating to this Department. Firstly, the Karnataka Government is always saying that we are the first State in bringing the Land Reforms Act and that they are the champions of the agriculturists. I would bring to the notice of this House, that Maharashtra is the first State in India to declare that tiller is the owner of the land. They have declared this as long back as in 1948 and Act came into force on 1-8-1956. Therefore, I say Maharashtra is the first State in India in implementing this land reforms. Sir, when this Act came into existence, you have constituted Land Tribunals in Belgaum. In that Tribunal you have appointed only the Congress people as the members of that Tribunal and you have not appointed M.E.S. members who were two in number. And this Congress people have done great injustice to the people concerned. They have minted money like anything. Now, Hon'ble Minister for Revenue has assured on the Floor of the House that they are going to reconstitute the Land Tribunals within 6 weeks. In this connection, I would like to bring to your kind notice that you have not reconstituted the Land Tribunals in Belgaum, Chikkodi and Khanapur Taluk. Therefore, I request the Hon'ble Minister for Revenue to reconstitute the Tribunals as early as possible. While reconstituting these Land Tribunals you must appoint members belonging to Maharashtra Ekikarana Samithi in my area.

Regarding Talatis, I would like to say something. These Talatis are entrusted with the work of Secretary of Village Panchayats. They are over burdened with the work. These Talatis are not staying in Villages. They are staying in Belgaum City and whenever villagers go to these Talatis for changing Pahani extracts, record of rights etc., they are not available in the office. Thus, the villagers are put to great hardship. Therefore, I request you to issue instructions to these Talatis that they should stay in villages and not in Belgaum City or elsewhere. The Government have appointed kannada Talatis in Marathi villages. These Talatis are changing the record of the villagers. It happened in villages like Mannur, Vadgaon· Mutage Mukha. So, I request through you Sir, that records of those villages must be rectified.

Regarding Diary extract or the phani, I would say it should be immediately supplied to the agriculturists whenever it is asked for. These Talatis are demanding money for giving this diary extract from agriculturists. This should be stopped.

Regarding acquistion of lands, I would like to say, whenever Government acquires lands for public purpose, they are not paying the compensation amount to the owners immediately. There is also rule

that acquisition price must be market value. But Government is not paying the amount at the market price. The owners are getting this money after six or seven years.

The Government have given some lands to some educational inststution. For the last ten years they have not constructed buildings on those lands. In such cases, the lands must be taken back.

There is what is known as Bellary Nala in Belgaum. We have been complaining that this nala construction should be taken up immediately. When there was a heavy rain in Belgaum there was damage to the paddy crop to the tune of Rs. 50-60 lakhs. We have been requesting the Government that they must construct this nala to save the paddy crop but they are not taking the initiative. The then Deputy Commissioner about ten years back had taken the initiative but thereafter noth ing has been done. So, I request the Government to take uy this nala construction immediately.

Regarding legal aid cell, I have not come across this cell in Belgaum. May be, it is there in Bangalore City but I do not find it anywhere in my area. So, I request that the legal aid committees working in various districts should be published in the local papers.

Regarding agricultural labourers, we are taking too much about 'Land to the Tiller', but we are not taking much care of these labourers. We must fix remunerative wages for them. They are exploited by the landlords who are taking ten-hour work from them and paying comparatively low wages to them. So, I request the Government to take up the Amagan Hami Yojane of the Maharashtre Government.

Regarding collection of land revenue and other dues, an order has been issued to the officials that they must collect these dues. It is stated in the Government booklet that 'instructions have been issued to enforce coercive measures if necessary only against the well-to-do persons who can afford to pay the arrears of Government dues'. This State Government has constructed certain tanks in my area and land revenue has been fixed. They were getting free water for paying and revenue. Now water rate is also levied on those lands. Some of the agriculturists are not using the water and why is the Government tollecting water rate from such agriculturists. Similarly better levy chould not be collected by using coersive methods from the agriculturssts. With these words I thank the Chair for giving me an opportuniity to make these observations.

† ಶ್ರೀ ಪಿ. ಬಸವನಗೌಡ (ಹರಿಹರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ತಂದಿರುವ ಬೇಡಿಕೆಯನ್ನು ಸ್ವಾಗತಿಸುತ್ತಾ, ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಮೊದಲನೆಯದಾಗಿ, "ಕಂದಾಯ ಮಂತ್ರಿ" ಎನ್ನುವ ಪದ ನನಗೆ ಸರಿ ತೋರುವುದಿಲ್ಲ; ಅದನ್ನು "ಆದಾಯ ಮಂತ್ರಿ" ಗಳೆಂದು ಬದಲಾಯಿಸಬೇಕೆಂದು ನನ್ನ ಸಲಹೆ.

ಇನ್ನು ಹಳ್ಳಿಗಳಲ್ಲಿ ವಾಸ ಮಾಡುವ ಜನರ ಕೆಲವು ತೊಂದರೆಗಳನ್ನು ಒಂದೆರಡು ಮಾತುಗಳಲ್ಲಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಮೊದಲನೆಯದಾಗಿ, ಸ್ಟಾಂಪ್ ಮತ್ತು ಸ್ಟಾಂಪ್ ಪೇಪರ್. ಚಿಕ್ಕ ಪುಟ್ಟ ವ್ಯವಸಾಯಗಾರರು ತಮ್ಮ ಒಂದೆರಡು ಎಕರೆ ಜಮೀನನ್ನು ಮಾರಾಟ ಮಾಡಬೇಕಾದ ಸಂದರ್ಭ ಬಂದಾಗ, ರಿಜಿಸ್ಟ್ರಾರ್ ಆಫೀಸಿಗೆ ಹೋದರೆ ಅಲ್ಲಿ ಸ್ಟ್ಯಾಂಪ್ ಪೇಪರುಗಳೇ ಇರುವುದಿಲ್ಲ. ನಾಲ್ಕಾಣೆ ಸ್ಟ್ಯಾಂಪಿಗೆ ಎಂಟಾಣೆ ಕೊಟ್ಟರೆ ಸಿಗುವ ಪರಿಸ್ಥಿತಿ ಇಂದು ನಮ್ಮ ರಾಜ್ಯದಲ್ಲಿ ಉಂಟು. ಇದಕ್ಕೆ ಕಾರಣವೇನು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಇನ್ನು ನಗರ ಆಸ್ತಿ ತೆರಿಗೆ. ಇದು ಬಹಳ ವಿಚಿತ್ರವಾದುದು. ನಗರ ಆಸ್ತಿ ತೆರಿಗೆಯನ್ನು ಮಾರು ಕಟ್ಟೆ ವ್ಯಾಲ್ಯೂವೇಷನ್ ಮೇಲೆ ನಿಗದಿ ಮಾಡಲಾಗುತ್ತಿದೆ. ನೀವು ಮಾರುಕಟ್ಟೆ ವ್ಯಾಲ್ಯೂವೇಷನ್ ಮೇಲೆ ನಿಗದಿ ಮಾಡುವ ಬೆಲೆಗೇ ಒಂದು ವೇಳೆ ನಿವೇಶನವನ್ನು ಕೊಟ್ಟರೆ ತೆಗೆದುಕೊಳ್ಳುವುದಕ್ಕೆ ತಯಾರಿದ್ದೀರಾ ಎಂದು ನಾನು ಒಬ್ಬ ಅಧಿಕಾರಿಯನ್ನು ಕೇಳಿದಾಗ, ಆತ ನಾವು ಸುಮ್ಮನೆ ಬೆಲೆ ನಿಗದಿ ಮಾಡುತ್ತೇವೆ ; ನೀವು ಹೇಳಿದ ಹಾಗೆ ಕೇಳುವುದಕ್ಕಲ್ಲ ನಾವಿರುವುದು ಎಂದು ಹೇಳಿದ. ಸುಮಾರು ಐವತ್ತು ಸಾವಿರ ರೂಪಾಯಿ ಬೆಲೆ ಬಾಳುವ ನಿವೇಶನಕ್ಕೆ ಇಂದು ೭೦–೮೦ ಸಾವಿರ ರೂಪಾಯಿಗಳ ಬೆಲೆ ನಿಗದಿ ಮಾಡುತ್ತಿದ್ದಾರೆ. ಆದರೆ, ನಿಜವಾದ ಮಾರ್ಕೆಟ್ ವ್ಯಾಲ್ಯೂ ಏನಿದೆ ಅದಕ್ಕಿಂತಲೂ ಹೆಚ್ಚಿಗೆ ಮಾರ್ಕೆಟ್ ವ್ಯಾಲ್ಯೂವನ್ನು ಅವರು ನಿಗದಿ ಮಾಡುತ್ತಿದ್ದಾರೆ. ಹೀಗಾದರೆ, ನಗರಗಳಲ್ಲಿ ವಾಸ ಮಾಡು ವವರು ಒಂದೊಂದು ನಿವೇಶನ ಇಟ್ಟುಕೊಳ್ಳುವುದೂ ಕಷ್ಟವಾಗುತ್ತದೆ ; ಇಟ್ಟುಕೊಳ್ಳುವುದೇ ಬೇಡ, ಮಾರಿಬಿಡುವುದೇ ಒಳ್ಳೆಯದೆನ್ನುವ ಪರಿಸ್ಥಿತಿಗೆ ಬಂದಿದ್ದಾರೆ.

ಆ ಮೇಲೆ ಸಿಟಿ ಸುತ್ತಲೂ ೮ ಮೈಲಿ ದೂರ ಭೂಮಿಯನ್ನು ರಿಜಿಸ್ಟ್ರೇಷನ್ ಮಾಡುವುದನ್ನು ಬಂದು ಮಾಡಿದ್ದಾರೆ. ಎರಡು ಎಕರೆ, ಮೂರು ಎಕರೆ ಭೂಮಿಯನ್ನು ಮಾರಿಕೊಳ್ಳುವುದಕ್ಕೆ ರೈತರಿಗೆ ತೊಂದರೆಯಾಗಿದೆ. ಇದಕ್ಕೆ ಸಂಬಂಧಪಟ್ಟ ಕಾನೂನನ್ನು ಜಾಗ್ರತೆಯಾಗಿ ಸಡಿಲಗೊಳಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೆಲವರು ಭೂದಾನ ಮಾಡಿಕೊಟ್ಟರು. ಇವೊತ್ತು ಭೂದಾನ ಮಾಡಿದಂತಹ ಜಮೀನನ್ನು ಸರ್ಕಾರದವರು ವಶಪಡಿಸಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಕೆಲವು ಕಡೆ ಭೂದಾನ ಮಾಡಿದಂತಹ ಜಮೀನು ಎಲ್ಲಿದೆ ಎಂಬುದೇ ಗೊತ್ತಾಗುವುದಿಲ್ಲ. ಏತಕ್ಕೆಂದರೆ ಭೂದಾನ ಮಾಡಿದವರು ಇವೊತ್ತು ಜಮೀನನ್ನು ಬೇರೆಯವರಿಗೆ ಮಾರಿದ್ದಾರೆ. ಇಂಥಾ ಪ್ರಸಂಗಗಳು ನಮ್ಮ ರಾಜ್ಯದಲ್ಲಿ ಬಹಳ ಇವೆ. ಅವುಗಳನ್ನು ಗೊತ್ತು ಮಾಡಿ ಸರ್ಕಾರದವರು ಅವುಗಳನ್ನು ಜಾಗ್ರತೆಯಾಗಿ ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಪಂಚಾಯಿತಿ ಸೆಕ್ರೆಟರಿಗಳ ಬಗ್ಗೆ ಕೆಲವಾರು ಮಾತುಗಳನ್ನು ಹೇಳಬೇಕಾಗಿದೆ. ಇವೊತ್ತು ಹಳ್ಳಿ ಗಳಲ್ಲಿ ಬಹಳ ತೊಂದರೆಯಾಗಿದೆ ಎಂದರೆ ವಿಲೇಜ್ ಅಕೌಂಟೆಂಟರುಗಳಿಂದ. ಇವರು ಪಹಣಿಯನ್ನು ಬರೆಯುವುದರಲ್ಲಿ ಬಹಳ ವ್ಯತ್ಯಾಸ ಮಾಡುತ್ತಿದ್ದಾರೆ. ಯಾವ ವಿಲೇಜ್ ಪಂಚಾಯಿತಿ ಸೆಕ್ರೆಟರಿಗಳನ್ನು ಕೇಳಿದರೂ ಅವರು ಯಾರೂ ಹಳ್ಳಿಗಳಲ್ಲಿ ಇರುವುದಿಲ್ಲ. ತಾಲ್ಲೂಕು ಹೆಡ್‌ಕ್ವಾರ್ಟ್ರುಗಳಲ್ಲಿ ದಾವಣಗೆರೆ ಮತ್ತು ಹರಿಹರ ಇಂಥಾ ಪಟ್ಟಣಗಳಲ್ಲಿ ವಾಸಮಾಡುತ್ತಿದ್ದಾರೆ. ಇವರನ್ನು ಕೇಳುವವರೇ ಇಲ್ಲ. ಈ ಪಂಚಾಯಿತಿಯ ಸೆಕ್ರೆಟರಿಗಳನ್ನು ಹುಡುಕಬೇಕಾದ ಪ್ರಸಂಗಗಳು ಬಂದಾಗ ನಾವು ಅವರನ್ನು ದೊಡ್ಡ ದೊಡ್ಡ ಹೊಟೇಲುಗಳಲ್ಲಿ ನಾವು ನೋಡುತ್ತಿದ್ದೇವೆ. ಅವರು ಪಹಣಿಯನ್ನು ಅಲ್ಲಿಯೇ ಕುಳಿತುಕೊಂಡು ಬರೆಯುತ್ತಾರೆ. ಒಂದು ಪಹಣಿಯನ್ನು, ಒಂದು ಖಾತೆಯನ್ನು ಬದಲಾವಣೆ ಮಾಡಬೇಕಾದರೆ ೫೦೦–೧೦೦೦ ರೂಪಾಯಿಗಳನ್ನು ಅವರಿಗೆ ಕೊಡಬೇಕಾಗುತ್ತದೆ. ಶ್ರೀಮಾನ್ ವೈ. ರಾಮಕೃಷ್ಣಾ ಅವರು ಹೇಳಿದ್ದು ನಿಜ. ಅವರಿಗೆ ದುಡ್ಡು ಕೊಡದಿದ್ದರೆ ರೆಕಾರ್ಡಿನಲ್ಲಿ ಯಾವುದಾದರೂ ಒಂದು ತಪ್ಪನ್ನು ಮಾಡಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಓಡಾಡುವಂತೆ ಮಾಡುತ್ತಾರೆ. ದುಡ್ಡು ಕೊಟ್ಟರೆ ಎಲ್ಲವೂ ಸರಿಯಾಗಿರುತ್ತದೆ. ಆದ್ದರಿಂದ ಇವರಿಗೆ ತಕ್ಕ ಬಂದೋಬಸ್ತು ಮಾಡಬೇಕು. ಇಲ್ಲದಿದ್ದರೆ ರೆಕಾರ್ಡನ್ನು ಸರಿಯಾಗಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಇನ್ನು ಸರ್ವೆ ಸೆಟ್ಲ್‌ಮೆಂಟಿಗೆ ಸಂಬಂಧಪಟ್ಟಹಾಗೆ ಸರ್ವೇಯರ್ಸ್ ಇದ್ದಾರೆ. ಇವರು ಪೋಡು ಮಾಡಿಕೊಡುವುದರಲ್ಲಿ ಅನೇಕ ತಕರಾರುಗಳು ಬರುತ್ತವೆ. ಒಂದು ಸಾರಿ ಒಬ್ಬರು ಜಮೀನನ್ನು ಅಳತೆ ಮಾಡಿಕೊಡಿ ಎಂದು ಅರ್ಜಿ ಕೊಟ್ಟರೆ ಪಕ್ಕದ ಜಮೀನನ್ನು ಸ್ವಲ್ಪ ಒತ್ತುವರಿ ಮಾಡಿ ಅಳತೆ ಮಾಡಿ

ಕೊಟ್ಟಿರುತ್ತಾರೆ. ಅವರಿಗೆ ಸರಿಯಾಗಿ ಟ್ರೈನಿಂಗ್ ಇಲ್ಲದೇ ಇರುವುದರಿಂದ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತಿದೆ. ಗ್ರಾಮಾಂತರಗಳಲ್ಲಿ ಜಮೀನಿನ ಬೌಂಡರಿ ಬಗ್ಗೆ ರೈತರಿಗೆ ಒಬ್ಬರಿಗೊಬ್ಬರಿಗೆ ಜಗಳ ಬರಬೇಕಾದರೆ ಈ ಸರ್ವೇಯರ್‌ಗಳೇ ಕಾರಣಕರ್ತರು. ಆದ್ದರಿಂದ ಇದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಇವರಿಗೆ ಸರಿಯಾದ ಟ್ರೈನಿಂಗ್ ಕೊಡಬೇಕು. ಪೋಡು ಮಾಡಿಕೊಡುವುದಕ್ಕೆ ರೈತರಿಂದ ೨೫ ರೂಪಾಯಿ ಪೋಡು ಫೀಜ್ ತೆಗೆದುಕೊಳ್ಳುತ್ತಾರೆ. ಅಲ್ಲಿ ಸರಿಯಾಗಿ ಅಳತೆ ಮಾಡಿ ಬೌಂಡರಿಯನ್ನು ಫಿಕ್ಸ್ ಮಾಡುವುದಿಲ್ಲ. ಎಂದು ಸಣ್ಣ ಕಲ್ಲಿನಲ್ಲಿ ಲೈನ್ ಹಾಕಿ ಬರುತ್ತಾರೆ. ಇದು ಸರಿಯಾದ ಅಳತೆಯನ್ನು ತೋರಿಸುವುದಿಲ್ಲ. ಇದರಿಂದ ರೈತರು ಒಬ್ಬರಿಗೊಬ್ಬರು ಜಗಳವಾಡುತ್ತಾರೆ ಹಿಂದೆ ಪ್ರತಿಯೊಂದು ಸರ್ವೆ ನಂಬರನ್ನೂ ಅಳತೆ ಮಾಡಿ ಇಬ್ಬರ ಜಮೀನನ್ನು ಬೈಫರ್‌ಕೇಟ್ ಮಾಡುವುದಕ್ಕೆ ಒಂದು ಸಿಂಬಲ್ ಎಂದರೆ ಬಂಡ್ ಎಂದು ಹಾಕುತ್ತಿದ್ದರು. ಈಗ ಅದು ಅಳಿಸಿ ಹೋಗುವ ಹಾಗೆ ಪೋಡ್ ಮಾಡುತ್ತಿದ್ದಾರೆ. ಒಬ್ಬರ ಜಮೀನಿಗೂ ಮಧ್ಯೆ ಒಂದು ಸಣ್ಣ ಕಲ್ಲನ್ನು ಹಾಕುತ್ತಾನೆ. ಆ ಕಲ್ಲನ್ನು ಸ್ವಲ್ಪ ಆ ಕಡೆ ಅಥವಾ ಸ್ವಲ್ಪ ಈ ಕಡೆ ಹಾಕಿ ಇಬ್ಬರಿಗೂ ಜಗಳ ನಡೆಯುತ್ತದೆ. ಇದರಿಂದ ಎಷ್ಟೋ ಕೊಲೆಗಳು ಆಗಿವೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಬಹಳ ಹಳ್ಳಿಗಳಲ್ಲಿ ಇಂಥಾ ಕೇಸುಗಳು ಆಗಿವೆ. ಇದರ ಬಗ್ಗೆ ಕೂಡ ಸರ್ಕಾರದವರು ತಮ್ಮ ಗಮನವನ್ನು ಹರಿಸಿ ಇದನ್ನು ಸರಿಪಡಿಸಬೇಕು. ಪಂಚಾಯಿತಿ ಸೆಕ್ರೆಟರಿಗಳು ಆಯಾ ಪಂಚಾಯಿತಿ ಇರುವ ಕಡೆಯೇ ವಾಸ ಮಾಡಬೇಕು. ಸರ್ವೆಯರುಗಳಿಗೆ ಸರಿಯಾದ ಟ್ರೈನಿಂಗ್ ಕೊಡಬೇಕು. ಆ ರೀತಿ ಮಾಡಿದರೆ ಆಯಾ ತಾಲ್ಲೂಕುಗಳಲ್ಲಿ ಬಡಜನಗಳಿಗೆ ಅನುಕೂಲವಾಗುತ್ತದೆ. ಇಷ್ಟು ಹೇಳಿ ನಾನು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕಾಗಿ ಮಾನ್ಯ ಸಭಾಪತಿಯವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† SRI C. M. ARMUGHAM (K.G.F.).—Mr. Speaker, This is a very important Demand pertaiging to the entire State, This is one of the oldest departments of the Government and I am glad to speak on this Demand. After the Hon'ble Minister Sri B. Basavalingappa took over this Department, the villagers, tenants and general public have picked up some moral courage that they will get justice at the hands of the Revenue Department.

To start with, I will take up the Employment Guarantee Scheme mentioned in the Budget Speech of our Finance Minister. But bo details were spelt out; Nonetheless I know this scheme has tone piloted by our Revenue Minister. Probably his visit to Maharash ta and other parts of the country must have induced to think of the 27 lakhs of landless people who account for to 46% to 48% of the total population of our population and who come below the poverty line, earning probably a rupee a day. From the inception of independence several irrigation projects have been constructed at a cost of Rs. 474 crores which have benefitted only persons owning lands. The planners of the centre have always constructed these projects never giving any consideration as to how to improve the landless people in the rural parts. So, all the irrigation projects have improved the financial position of landed class and not the landless. Therefore, the Hon'ble Minister for Revenue is bringing this employment guarantee scheme. According to Art. 41 of the Constitution "the State shall endeavour to create employment opportunity for the people of the State'. In Karnataka or any other State or even at the Centre they have not thought about it. It is kept in the cold storage. If I may mention,

we got independenee at the top and not at the bottom. Those living in pcsoh localities got independence, th y become Prime Minister and person in authority. They have not thought to improve the lot of landless people. Under Art. 41 of our Constitutlon, the State should have done but they have not done so for. There is a parallel Article to this in the Constitution of U.S.S.R. The Hon'ble Minister will please no.e that there is nothing radical. Such a thing has been adumbrated in the Russian Constitution. For the benefit of the Hon'ble Members I will read it ;

> "Article 40. citizens of the USSR have the right to work (that is, to guaranteed employment and pay in accordance with the quantity and quality of tl eir work, and not below the state-established minimum) including the right to choose their trade or profession, type of job, and work in accordance with their inclinations, abilities, training and education, with due account of the needs of society.
>
> This right is ensured by the socialist economic system, steady growth of the productive forces, free vocational and professional training, improvement of skills, training in new trades or professions; and development of the systems of vocational guidance and job placement."

The Constitution was written about 30 years back. It is there in the Constitution, but nobody has given thought to it. Therefore, I fully support the proposed scheme of Employment Guarantee, which the Hou'ble Revenue Minister is thinking of bringing into force. According to his statement there are 27 lakhs of landless people, people who are below poverty line. Of course, it is highly impossible to provide employment to all these people. According to the Congress mainfeste, if every person is to be given Rs. 150 p.m., it works out to about Rs. 55 crores for 3 lakhs of people. They say that they are there to protect the poor people; But the official machinery should put up the proposal, but not go on talking and talking and for ever, so that starvation is not all wed to continue. Therefore this scheme of Employment Guarantee as has been mentioned in the speech of the Hon'ble Finance Minister and is being by the Hon'ble Minister for Revenue should be given proper plan and thought. Such a scheme is working in Maharashtra successfully,

5-30 P.M.

Coming to Land Reforms, with due respects for law, I should say that the Scheduled Caste people are not very much benefitted by this. Anyway the Land Reforms are there. Persons occupying one to two acres of land are being evicted by the Tahsildar or the Assistant

Commissioner or the Deputy Commissioner. But, landlords who are very rich and who have got influence have encroached 1,20,000 acres of land and they are growing coffee. I know the Government has got information with them about this, and they should take action against such persons, Suppesing a person who has got less than 5 acres and if he encroaches to make it 5 acres, it is all right. But, these big landlords who have encroached must be evicted.

So far as payment of compensation is concerned, they say that they have disposed of about 3 lakhs and odd applications, As per the rules made, this compensation is being paid in 20 instalments subject to a minimum of Rs. 2,000/-. When lands are taken from the landlords, it is better to give the compensation in a lump instead of in 20 instalments. The Government may think as to how far it is possible. There is a provision of about Rs. 15 crores for this purpose. I am told that they require about Rs, 100 crores, I do not know how the Government is going to meet this demand. I think the State Government can approach the Central Government to come to their rescue so that the entire amount could be paid.

In our State the Revenue portfolio was being held successively by very big landlords, and according to their convenience and desire they have made changes in the Revenue Department as they liked. I request the present Hon'ble Minister for Revenue Sri Basavalingappa to streamline the administration of the Department and reorganise the Department. I suggest the abolition of the posts of Divisional Commissioners, because this office is doing only the job of a post-office as a result of which there is lot of delay in the disposal of papers. Further, the Divisional Commissioner is not an expert in all matters, he it only an I.A.S. man. All papers pertaining to Municipalities and the resolutions of the Municipal Councils must be approved by him. What type of administration is this? When a Divisional Commissioner goes on tour, half-a-dozen Deputy Commissioners, one dozen Asst. Commissioners, two dozen Tahsildars and about 100 Revenue Inspectors should follow him. In the olden days there was one Chief Commissioner who ruled the State. Therefore, I suggest that the posts of Divisional Commissioner need not be there and they should be abolished immediately. Sir, as you are aware Bangalore City has a fine climate. It is highly improper on the part of the Divisional Commissioner to have an air-condition room for him. Do you call this a democracy? They call themselves as socialists. Have they any sense of responsibility? I do not think, even you, Sir, who is controlling the House, could have an air-condition room. Therefore, I once again repeat that the posts of Divisional Commissioners should be abolished forthwith.

I understand that there is a proposal to give promotion to these I.A.S. officers every three years onces. They will be appointed as Probationers and they come up to the supertime scale in a short time, I think this is being done in order to provide them the place of work. All revenue papers and municipal administration papers should pass through the Divisional Commissioners, and therefore there is lot of delay in disposal in addition to their having big establishments. The Deputy Commissioners and Assittant Commissioner whenever they go on tour should pay for their food instead of making The Tahsildar to pay. The present-day Deputy Commissioners instead of being servants of the Districts have beeome bosses of the District. This kind of egoism should not be there, I suggest to the Hon'ble Revenue Minister that he would do well to invite all the Deputy Commissioners to be in the official gallery when we discuss the Revenue Demands. Usually, the Minister gets the information from them and reply. I feel that they must know the difficulties of the people in the area.

Now I would like to say a few words about representation to SC/STs in the Revenue Department Succeisive Revenue Ministers have deprived the SC/STs their due share in the Revenue Department. When Sri Koujalgi was the Revenue Minister, he helped the Belgaum Division people. All the I-Division Clerks of Belgaum Division were promoted as Tahsiidars and Deputy Tahsildars during his time. The previous Revenue Minister Sri Hutchmasthy Gowda helped the Mysore Division officials in giving them promotions. Sir, Bangalore Division is left untouched.

In the Survey and Settlement Department our Revenue Minister has not appointed any person belonging to the SCs to the class I posts. There are 21 posts in that department which are classified as Class I posts. All these posts are filled up by a single community. I hope government will take action to give chance to other communities as well.

There are 68 posts of Class II out of which there are only two SCs. This Department has prevented the entry of SCs. and STs. Out of 10 watchmen there is only one watchman belonging to the SCs. Even in the drivers posts, the SCs have no representation. I request the Minister to give adequate representation to the SCs and STs in this Department. The Minister should not obtain the advise of the IAS Officer who will not give correct picture of the posts available in the Department. These IAS Officers will be sitting in the ivory towers; they will be inaccessible to common people.

To fill the backlog, the government should think of having a special recruitment in this department so that the SCs and the STsc would secure adequate representation..,

With regard to Muzrai Department, I want to say one thing. The present Endowment Commissioner, I am told, is going to retire shortly.

MR. SPEAKER.—The Muzrai demand is not before the House. He can offer his remarks on that department when it comes for discussion.

SRI C·M. ARMUGAM.—I shall refrain from making comments on this department. With regard to the amount provided to the drought prone areas, I feel that the amount provided is too inadequate. In this connection I would suggest that a Committee should be constituted (State level Committee) to look after the drought prone areas. I had the rare privilege of visiting some of these drought areas in the year 1972. The drought areas have gone on increasing from 1960 to 1970 and again from 1970 to 1978. About 190 lakhs of people are affected by the drought. I request the government to approach the Central Government for sufficient funds to provide relief measure in these drought prone areas.

I thank the Speaker for having given me an opportunity to speak on these demands and conclude my speech.

† ಶ್ರೀ ರಾಜುಗೌಡ (ಹಾವನೂರು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ತಂದಿರತಕ್ಕಂಥ ೪೭,೪೮,೪೯, ೫೦,೨೧ ಮತ್ತು ೫೮ನೇ ಬೇಡಿಕೆಗಳನ್ನು ಸಮರ್ಥಿಸುತ್ತಾ ನಾಲ್ಕಾರು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ಎಲ್ಲಾ ಇಲಾಖೆಗಳಿಗಿಂತ ಕಂದಾಯ ಇಲಾಖೆ ಬಹಳ ದೊಡ್ಡದು. ಇದು ಬಹಳ ಮಹತ್ವಪೂರಿತವಾದುದು. ರಾಜ್ಯದ ಬೊಕ್ಕಸಕ್ಕೆ ಸಿಂಹಪಾಲು ವರಮಾನ ಕೊಡತಕ್ಕ ಇಲಾಖೆ. ಗ್ರಾಮ ಮಟ್ಟದಿಂದ ಹಿಡಿದು ರಾಜ್ಯದ ಮಟ್ಟದವರೆಗೂ ಆಡಳಿತವನ್ನು ಚುರುಕುಮಾಡತಕ್ಕ ಒಂದು ಇಲಾಖೆ ಎಂದು ನನ್ನ ಅಭಿಪ್ರಾಯ. ಈ ದಿಸೆಯಲ್ಲಿ ಮಾನ್ಯ ಸಚಿವರು ಪ್ರಾಮಾಣಿಕತನದಿಂದ ಇಷ್ಟೆಯಿಂದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಎಂಬುದು ನನ್ನ ಗಮನಕ್ಕೆ ಬಂದಿದ್ದರೂ ಕೆಲವು ಸಲಹೆಗಳನ್ನು ನಾನು ಕೊಡಲು ಇಷ್ಟಪಡುತ್ತೇನೆ.

ಸರ್ಕಾರದವರು ಗ್ರಾಮಗಳ ಮಟ್ಟದಲ್ಲಿ ಗ್ರಾಮ ಲೆಕ್ಕಿಗೆ ಎಂದು ನೇಮಕ ಮಾಡಿದ್ದಾರೆ. ಬಹುಶಃ ಇವನು ಇಲಾಖೆಯ ಆಧಾರಸ್ಥಂಭ ಎಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಇವನು ಬಹಳ ವರ್ಷಗಳಿಂದ ಕೆಲಸ ಮಾಡುತ್ತಿದ್ದರೂ ಸಾಕಷ್ಟು ರೈತರಿಗೆ ಇವನ ಪರಿಚಯ ಇರುವುದಿಲ್ಲ, ಎಂದು ನಾನು ಹೇಳಬೇಕಾಗಿದೆ. ಇವರುಗಳು ಹೋಬಳಿ ಮಟ್ಟದಲ್ಲಿ ಅಲ್ಲ, ತಾಲ್ಲೂಕು ಮಟ್ಟದಲ್ಲಿ ಇರುತ್ತಾರೆ, ಇವರನ್ನು ಹಿಡಿಯ ಬೇಕಾದರೆ ರೈತರು ಬಹಳ ಕಷ್ಟ ಪಡಬೇಕಾಗುತ್ತದೆ. ನಾವು ಯಾರನ್ನು ಆಧಾರಸ್ಥಂಭ ಎಂದು ಕರೆಯುತ್ತೇವೆಯೋ ಅವರು ಗ್ರಾಮದಲ್ಲಿ ವಾಸಮಾಡತಕ್ಕ ಸ್ಥಿತಿ ನಮ್ಮ ರಾಜ್ಯದಲ್ಲಿ ಬರಬೇಕು ಎನ್ನುವುದು ನನ್ನ ಅಭಿಪ್ರಾಯ. ಈ ರೀತಿಯಾದಾಗ ಗ್ರಾಮದ ಜನಗಳಿಗೆ ಅವರ ಕಷ್ಟಸುಖಗಳನ್ನು ತಿಳಿದು ಅವರ ಕೆಲಸ ಕಾರ್ಯಕ್ರಮಗಳನ್ನು ಪೂರೈಸುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಹೇಳುತ್ತೇನೆ. ಹಿಂದೆ ಪಟೇಲರು ಎಂದು ಇರುತ್ತಿದ್ದರು, ಅವರು ತಪ್ಪು ಮಾಡಿದಾಗ ಜನಗಳು, ಜನಗಳು ತಪ್ಪು ಮಾಡಿದಾಗ ಅವರು ತರಾಟೆಗೆ ತೆಗೆದುಕೊಂಡು ಹಳ್ಳಿಯ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೋಗುತ್ತಿದ್ದರು. ಇಂಥ ಒಂದು ಬಾಂಧವ್ಯವನ್ನು ನಮ್ಮ ಗ್ರಾಮ ಲೆಕ್ಕಿಗರು ಈಗಲೂ ಬೆಳೆಸಿಕೊಂಡು ಹೋಗಬೇಕು ಎಂದು ನಾನು ಸಲಹೆ ಮಾಡುತ್ತೇನೆ ನಾನು ಇನ್ನೊಂದು ಸಲಹೆಯನ್ನು ಮುಖ್ಯವಾಗಿ ಕೊಡುವುದು ಏನೆಂದರೆ ಕಂದಾಯ ಇಲಾಖೆಯವರು ಪ್ರತಿಯೊಂದು ಕಂದಾಯ ಪಟ್ಟ ಪುಸ್ತಕದಲ್ಲಿ ಕೆಲವು ವಿಷಯಗಳನ್ನು ಮಾತ್ರ ಒದಗಿಸಿರುತ್ತಾರೆ. ಇದರಲ್ಲಿ ಅನೇಕ ಮಾಹಿತಿಗಳು ಇರುವುದಿಲ್ಲ. ಕೇವಲ ಸರ್ವೇ ನಂಬರ್, ಜಮೀನಿನ ವಿಸ್ತೀರ್ಣ, ಅದಕ್ಕೆ ಆಗತಕ್ಕ ಕಂದಾಯ ಎಷ್ಟು ಎಂದು ಮಾತ್ರ ಹೇಳಿರುತ್ತಾರೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಸರ್ಕಾರದವರು ರೈತ ಹೊಂದಿರತಕ್ಕ ಜಮೀನಿನ ನಕ್ಷೆ

ಪ್ರತಿವರ್ಷ ರೈತ ಯಾವ ಬೆಳೆಯನ್ನು ಬೆಳೆಯುತ್ತಾನೆ, ಪಹಣಿ ನಕಲನ್ನೂ ಕೂಡ ಇದಕ್ಕೆ ಲಗತ್ತಿಸಬೇಕು. ಮತ್ತು ರೈತನ ಸಹಿಯನ್ನೂ ಪಡೆದುಕೊಳ್ಳಬೇಕು. ಇದಲ್ಲದೆ ರೈತ ಯಾವ ವರ್ಗಕ್ಕೆ ಸೇರಿದವನು ಅವನು ಹಿಂದುಳಿದವನೇ, ಅವನ ವರಮಾನ ಏನು ಅವನ ಜಮೀನಿನ ಅಂದಾಜು ಬೆಲೆ ಏನು ಜಮೀನು ಯಾವ ಮಣ್ಣಿಗೆ ಸೇರಿದ್ದುದು ಎನ್ನುವ ಎಲ್ಲಾ ವಿವರಗಳನ್ನು ಆ ಒಂದು ಪುಸ್ತಕದಲ್ಲಿ ಬರೆಯಬೇಕು. ಈ ಎಲ್ಲಾ ವಿವರಗಳಿಗೆ ಅವನು ತಾಲ್ಲೂಕು ಕಚೇರಿಗೆ ಹೋಗಬೇಕಾದ ಅಗತ್ಯ ಇರುವುದಿಲ್ಲ. ಇದರಿಂದ ರೈತನು ಆರ್‌ಆರ್ ಮತ್ತು ಆರ್‌ಟಿಓ ರಿಕಾರ್ಡ್ಸ್‌ಗಳಿಗಾಗಿ ಪಡಬೇಕಾದ ಕಷ್ಟ ತಪ್ಪುತ್ತದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ಪುಸ್ತಕಕ್ಕೆ ತಾವು ೧೦ ರೂಪಾಯಿ ೨೫ ರೂಪಾಯಿಗಳನ್ನು ಮಾಡಿದರೆ ಪರವಾಗಿಲ್ಲ ಈ ಪುಸ್ತಕದಿಂದ ರೈತನ ತಾನು ಯಾವ ಬ್ಯಾಂಕ್‌ಗೆ ಹೋಗಿ ಸಾಲ ಪಡೆಯಬೇಕಾದರೂ ಸರಿ ಇದರ ಸಹಾಯದಿಂದ ಸಾಲವನ್ನು ಪಡೆಯುವಂತೆ ಅನುಕೂಲಮಾಡಿಕೊಡಬೇಕು. ಈ ದಿಸೆಯಲ್ಲಿ ರೈತ ತಾಲ್ಲೂಕು ಕಚೇರಿಗಳಿಗೆ ಹೋಗಲೇ ಕೂಡದುಎಂದು ಒಂದು ದಿಟ್ಟ ಕ್ರಮವನ್ನು ತಾವು ತೆಗೆದುಕೊಳ್ಳಬೇಕು. ಈ ರೀತಿಯಾಗಿ ಮಾಡಲಿಕೆ ಸಾಧ್ಯವಿದೆ ಎಂದು ನನ್ನ ಅಭಿಪ್ರಾಯ.

ತಾಲ್ಲೂಕು ಕಚೇರಿಗಳಲ್ಲಿ ಆರ್‌ಆರ್ ಬ್ರಾಂಚುಗಳಲ್ಲಿ ಇರುವ ಅವ್ಯವಸ್ಥೆಯನ್ನು ಹೇಳಲಿಕ್ಕೆ ಸಾಧ್ಯವೇ ಇಲ್ಲ. ಬಹುಶಃ ಅಲ್ಲಿಗೆ ಹೋದ ಗತಿ ಏನಾಗುತ್ತದೆ ಎಂದು ಹೇಳುವುದೇ ಕಷ್ಟ. ನಾವೇ ಪುನಃ ರಿಜಿಸ್ಟ್ರೇಷನ್ ಆಫೀಸಿನಿಂದ ತೆಗೆದುಕೊಂಡು ಹೋದ ಪತ್ರವನ್ನು ಕೊಟ್ಟರೆ ಮಾತ್ರ ಆ ಬ್ರಾಂಚಿನವರು ನೋಡಿ ನಮ್ಮ ಹೆಸರಿಗೆ ಖಾತೆಯನ್ನು ಬದಲಾವಣೆ ಮಾಡಿಕೊಡುತ್ತಾರೆ.

ಈ ವಿಚಾರವನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಗ್ರಾಮಂದಲ್ಲಿರತಕ್ಕ ಸಾಮಾನ್ಯ ರೈತನು ತಾಲ್ಲೂಕು ಕಛೇರಿಗಳಿಗೆ ಓಡಾಡದೇ ಇರತಕ್ಕ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಡೀ ನಮ್ಮ ರಾಜ್ಯದಲ್ಲಿಯೇ ನಮ್ಮ ತಾಲ್ಲೂಕಿನಲ್ಲಿ ಹಂಗಾಮಿ ಸಾಗುವಳಿ ಪ್ರದೇಶ ಜಾಸ್ತಿ ಇದೆ. ಸುಮಾರು ೨೪ ಸಾವಿರ ಎಕರೆ ಇದೆ. ಮಾನ್ಯ ಮಂತ್ರಿಗಳು ಕಂದಾಯ ಖಾತೆಯನ್ನು ವಹಿಸಿಕೊಂಡ ಮೇಲೆ, ೧೦ ಸಾವಿರ ಎಕರೆಗೆ ಪಟ್ಟಮಾಡಿಕೊಟ್ಟಿದ್ದಾರೆ; ಇನ್ನು ೧೪ ಸಾವಿರ ಎಕರೆ ಭೂಮಿ ಹಾಗೆ ಇದೆ. ಅಲ್ಲಿ ಸುಮಾರು ೩೦ ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ; ನೀರಾವರಿ ಬಾವಿಗಳನ್ನು ತೆಗೆಸಿದ್ದಾರೆ; ಬೇಕಾದಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ; ಆದರೂ ಕೂಡ ಇನ್ನೂ ಖಾತೆಯಾಗಿಲ್ಲ ಎಂದರೆ ವಿಚಿತ್ರವಾದ ಸಂಗತಿಯಾಗಿದೆ. ಇದಕೋಸ್ಕರವಾಗಿಯೇ ಬಹುಶಃ ವಿಶೇಷವಾದ ಸಹಾಯಕ ಅಧಿಕಾರಿಗಳ ಕಛೇರಿಯೊಂದನ್ನು ತೆಗೆದಿದ್ದರು; ಅದನ್ನು ೩೦-೩-೭೮ಕ್ಕೆ ಮುಕ್ತಾಯಗೊಳಿಸಿದ್ದಾರೆ. ಇನ್ನೊಂದು ೨, ೩ ತಿಂಗಳವರೆಗೆ ಈ ಕಛೇರಿಯನ್ನು ಮುಂದುವರಿಸಿಕೊಂಡು ಹೋಗಿ; ಅಲ್ಲಿ ಸಾಗುವಳಿ ಮಾಡುತ್ತಿರುವ ಜನಗಳಿಗೆ ಸಾಗುವಳಿ ಚೀಟಿ ಕೊಡುವ ಬಗ್ಗೆ ವ್ಯವಸ್ಥೆ ಮಾಡಬಹುದಿತ್ತು; ಹತ್ತು ವರ್ಷದ ಹಿಂದೆ ಅರಣ್ಯ ಪ್ರದೇಶಕ್ಕೆ ಸಂಬಂಧಿಸಿದ ಮೂರು ಸಾವಿರ ಎಕರೆ ಜಮೀನನ್ನು ಕಂದಾಯ ಇಲಾಖೆಗೆ ವರ್ಗಾಯಿಸಿದ್ದಾರೆ. ಇದರಲ್ಲಿ ಇನ್ನೂ ೬೦೦ ಎಕರೆಗೆ ಪ್ರದೇಶದಲ್ಲಿರತಕ್ಕ ಜನಗಳಿಗೆ ಸಾಗುವಳಿ ಚೀಟಿ ಕೊಟ್ಟಿಲ್ಲ; ಇದರ ಬಗ್ಗೆ ಅನೇಕ ಸಾರಿ ವಿಶೇಷ ಜಿಲ್ಲಾಧಿಕಾರಿಗಳನ್ನು ಕಂಡು ಪ್ರಸ್ತಾಪ ಮಾಡಿದರೂ ಕೂಡ ಮಾಡುತ್ತೇವೆ ಮಾಡುತ್ತೇವೆಂದು ಹೇಳುತ್ತಾರೆಯೇ ಹೊರತು ಮಾಡಿಲ್ಲ. ದಯಮಾಡಿ ಈ ಕಡೆ ಮಾನ್ಯ ಮಂತ್ರಿಗಳು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇದು ಬಹಳ ಮುಖ್ಯವಾದ ವಿಚಾರ; ಜಾಗೀರದಾರರಿಗೆ ಸಂಬಂಧಪಟ್ಟ ವಿಷಯ; ಸ್ವಾತಂತ್ರ್ಯ ಬಂದು ಮೂವತ್ತು ವರ್ಷಗಳಾದರೂ ಕೂಡ ಈ ಕಾರ್ಯವನ್ನು ಇನ್ನು ಮಾಡಿಲ್ಲ. ಸುಮಾರು ೧೨ ಸಾವಿರ ಎಕರೆ ಈ ಜಾಗೀರಿಗೆ ಸಂಬಂಧಪಟ್ಟದ್ದು ಇದೆ. ಸಂಬಂಧಪಟ್ಟ ಜಾಗೀರದಾರರು ಇದನ್ನು ನಿಭಾಯಿಸುವುದಕ್ಕೆ ಆಗುವುದಿಲ್ಲವೆಂದು ಸರ್ಕಾರಕ್ಕೆ ಒಪ್ಪಿಗೆ ಪತ್ರ ಕೊಟ್ಟು ಸುಮಾರು ೬ ವರ್ಷವಾಗಿದೆ; ಇದರಿಂದ ಬರತಕ್ಕ ಉತ್ಪತಿಯಲ್ಲಾ ಹಾಳಾಗಿ ಹೋಗುತ್ತಿದ. ಆ ಜಮೀನಿಗೆ ಸಂಬಂಧಪಟ್ಟಂತೆ ಕಂದಾಯ ವಸೂಲು ಮಾಡುತ್ತಿಲ್ಲ; ಲೆಕ್ಕಪತ್ರಗಳು ಇಲ್ಲ. ಸುಮಾರು ೭೦೦ ಎಕರೆ ಭೂಮಿ ಕಾಲುವೆ ಮೂಲಕ ನೀರಾವರಿಗೆ ಒಳಪಡುತ್ತೆ. ಕಾಲುವೆ ಮುಚ್ಚಿ ಹೋಗಿದ್ದು; ಆ ಕೆಲಸವನ್ನು ಆ ಕಡೆ ಜಾಗೀರದಾರರು ಮಾಡಿಸುತ್ತಿಲ್ಲ, ಈ ಕಡೆ ಸರ್ಕಾರದವರು ಮಾಡಿಸುತ್ತಿಲ್ಲ. ಮಾನ್ಯ ಸಚಿವರು ಸುಮಾರು ೨೩ಕ್ಕೂ ಮೇಲ್ಪಟ್ಟು ತಿದ್ದುಪಡಿ ತಂದಿದ್ದಾರೆಂದು ಕೇಳಿದ್ದೇನೆ; ಅದರ ಜೊತೆಗೆ ಜಾಗೀರದಾರಿ ರದ್ದಿಯಾಯಿತಿಗೆ ಸಂಬಂಧಪಟ್ಟಂತೆ ತಿದ್ದುಪಡಿ ದೊಡ್ಡ ಉಪಕಾರ ಮಾಡಿದಂತಾಗುತ್ತದೆಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಹಿಂದೆ ಇದ್ದಂತ ಸದಸ್ಯರು ಪ್ರಾಮಾಣಿಕವಾಗಿ ಎಷ್ಟು ಪ್ರಯತ್ನ ಪಟ್ಟರೂ ಇದನ್ನು

ಮಾಡುವುದಕ್ಕೆ ಆಗಿಲ್ಲ. ಮಾನ್ಯ ಮಂತ್ರಿಗಳು ಕೂಡಲೇ ರದ್ದಿಯಾಯಿತಿಗೆ ಸಂಬಂಧಪಟ್ಟ ತಿದ್ದುಪಡಿ ತರಬೇಕು; ಇದರಿಂದ ಒಂದು ವರ್ಷಕ್ಕೆ ಒಂದು ಕೋಟಿ ರೂಪಾಯಿ ಉತ್ಪತ್ತಿ ಬರುವುದಕ್ಕೆ ಸಾಧ್ಯವಿದೆ. ಇವತ್ತು ಇದೆಲ್ಲಾ ಅನ್ಯರ ಪಾಲು ಆಗುತ್ತಿದೆಯೆಂದು ಬಹಳ ವಿಷಾದದಿಂದ ತಿಳಿಸಬೇಕಾಗಿದೆ. ಈ ಅಧಿವೇಶನದಲ್ಲಿಯೇ ಈ ತಿದ್ದುಪಡಿ ತರಬೇಕೆಂದು ಮತ್ತೊಮ್ಮೆ ಮಾನ್ಯ ಸಚಿವರಲ್ಲಿ ಭಿನ್ನವಿಸಿ ಕೊಳ್ಳುತ್ತೇನೆ.

ಅಧ್ಯಕ್ಷರೇ, ಮತ್ತೊಂದು ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ; ಸ್ವಾಮಿ, ತಮ್ಮ ಒಂದು ಅಜ್ಞಾನದಿಂದಲೋ ಅಥವಾ ಅಧಿಕಾರಿಗಳ ಅಜ್ಞಾನದಿಂದಲೋ ನಮ್ಮ ಭಾಗವನ್ನು ಮಲೆನಾಡು ಪ್ರದೇಶವೆಂದು ಘೋಷಿಸಿಲ್ಲ; ಇವತ್ತು ಕೂಡ ನಮ್ಮ ಭಾಗದ ಒಂದೆರಡು ತಾಲ್ಲೂಕುಗಳಲ್ಲಿ ಮಳೆ ಬಂದಿಲ್ಲ; ರೈತರಿಗೆ ಬಹಳ ಕಷ್ಟವಾಗಿದೆ ಆದುದರಿಂದ ನಮ್ಮ ಭಾಗವನ್ನು ಹಿಂದುಳಿದ ಪ್ರದೇಶ ವೆಂದು ಘೋಷಿಸಬೇಕೆಂದು ಹೇಳಿ; ಅಧ್ಯಕ್ಷರು ಇಷ್ಟು ಸಮಯ ಕೊಟ್ಟಿದ್ದಕ್ಕಾಗಿ ವಂದಿಸಿ; ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ.ಎಂ. ಇಬ್ರಾಹಿಂ (ಶಿವಾಜಿನಗರ)—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಈ ಬೇಡಿಕೆ ಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ ಕೆಲವೊಂದು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈ ಇಲಾಖೆ ಬಹಳ ಪ್ರಾಮುಖ್ಯವಾದಂತ ಇಲಾಖೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತರ ಏಳಿಗೆ ಮಾಡುವ ದಿಶೆಯಲ್ಲಿ ಈ ಇಲಾಖೆ ಹೇಗೆ ತನ್ನ ಕಾರ್ಯ ನಿರ್ವಹಣೆ ಮಾಡುತ್ತಿದೆ ಎನ್ನುವ ಬಗ್ಗೆ ವಿಚಾರ ಮಾಡಬೇಕಾಗಿದೆ. ಬಸವಣ್ಣನವರು ತಮ್ಮ ವಚನದಲ್ಲಿ ಒಂದು ಮಾತು ಹೇಳಿದ್ದಾರೆ.

ಒಲವಿಲ್ಲದ ಪೂಜೆ, ನೇಹವಿಲ್ಲದ ಮಾಟ ।
ಆ ಪೂಜೆಯೂ, ಆ ಮಾಟವೂ ಚಿತ್ರದ ॥
ರೂಹು ಕಾಣಿರಣ್ಣ, ಚಿತ್ರದ ಕಬ್ಬು ।
ಕಾಣಿರಣ್ಣ. ಅಪ್ಪಿದರೆ ಸುಖವಿಲ್ಲ, ಮೆಲಿದರೆ ॥
ರುಚಿಯಿಲ್ಲ, ನಿಜವಿಲ್ಲದವನ ಭಕ್ತಿ ಇಂತುಂಟು ।
ನಮ್ಮ ಕೂಡಲ ಸಂಗಮ ದೇವ. ॥

ಬ್ರೇಕ್ ಫೆಲ್ಯೂರ್ ಆಗಿರತಕ್ಕ ಬಸ್ಸಿನ್ನು ಡ್ರೈವಿಂಗ್ ಮಾಡಿದರೆ ಎಷ್ಟು ಸಮಂಜಸವಾಗಿರುತ್ತೋ ಮಾನ್ಯ ಬಸವಲಿಂಗಪ್ಪನವರು ಕಾರ್ಯನಿರ್ವಹಣೆ ಮಾಡತಕ್ಕದ್ದು ಅಷ್ಟೇ ಸಮಂಜಸವಾಗಿದೆ. ಈ ಇಲಾಖೆ ರೈತರ ಕಷ್ಟ ಸುಖಗಳನ್ನು ವಿಚಾರಿಸುತ್ತಿದೆಯೆ ? ಅಧ್ಯಕ್ಷರೇ ನಮಗೆ ಸ್ವಾತಂತ್ರ್ಯ ಬಂದಾಗ ಕಂದಾಯ ಏನಿತ್ತು ? ಇವತ್ತು ಏನು ಇದೆ. ಮಾನ್ಯ ಮುಖ್ಯ ಮಂತ್ರಿಗಳು ಬೆಳಿಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಕಬ್ಬಿನ ಬೆಳೆಗಾರರಿಗೆ ವಾಟರ್ ರೇಟ್ ಹೆಚ್ಚು ಮಾಡಿರುವುದರ ಬಗ್ಗೆ ಹೇಳಿದರು. ಕಂದಾಯ ಮಂತ್ರಿಗಳು ರೈತರ ವಿಚಾರದಲ್ಲಿ ದಯಾಳುತನವನ್ನು ತೋರಿಸಬೇಕು. ಇವತ್ತು ನಮ್ಮ ರೈತ ಏರ್‌ಕಂಡೀಷನ್ಡ್ ಮನೆ ಕೇಳುವುದಿಲ್ಲ. ಇವತ್ತು ಸಮಾಜದಲ್ಲಿ ಅತ್ಯಂತ ಹೀನಾಯ ಸ್ಥಿತಿಯಲ್ಲಿರ ತಕ್ಕ ವ್ಯಕ್ತಿ ಅಂದರೆ, ಬಹುಶಃ ರೈತ ಇವತ್ತು ರೈತನ ಸ್ಥಿತಿ ಯಾವ ಮಟ್ಟದಲ್ಲಿದೆ ಎನ್ನುವ ಬಗ್ಗೆ ಸರ್ಕಾರ ವಿಚಾರ ಮಾಡುತ್ತಿಲ್ಲ. ಸರ್ಕಾರಿ ಕೆಲಸಗಾರರು ೫ ರೂಪಾಯಿ ಸಂಬಳ ಕಡಿಮೆ ಮಾಡಿದರೆ, ಸತ್ಯಾಗ್ರಹ ಮಾಡುತ್ತಾರೆ. ರೈಲ್ವೆ ಕೆಲಸಗಾರರು ಸತ್ಯಾಗ್ರಹ ಮಾಡುತ್ತಾರೆ, ಮುಷ್ಕರ ಮಾಡುತ್ತಾರೆ. ಇವತ್ತು ದೇಶಕ್ಕೆ ಅನ್ನ ಕೊಡತಕ್ಕ ರೈತ ಸತ್ಯಾಗ್ರಹ ಎನ್ನುವ ಪದವನ್ನು ಎಂದಾದರೂ ಉಪಯೋಗಿದ್ದಾನೆಯೇ? ಇವತ್ತು ೧೬ ತಾಸುಗಳ ಕಾಲ ದುಡಿಯತಕ್ಕ ರೈತನ ಮೇಲೆ ದಬ್ಬಾಳಿಕೆ ಏನು ನಡೆಯುತ್ತಿದೆ ಎನ್ನುವು ದನ್ನು ತಹಶೀಲ್ದಾರ್ ಆಫೀಸಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ನಾಡಿಗೆ ಅನ್ನ ಕೊಡತಕ್ಕ ರೈತ ಎಂದು ಹೇಳುವುದು ಪುಸ್ತಕದಲ್ಲಿದೆ, ಈ ದೇಶದ ಬೆನ್ನೆಲುಬು ರೈತ ಎಂದು ಹೇಳುವುದು ಪುಸ್ತಕದಲ್ಲಿದೆ. ಅರ್ಜಿ ಹಿಡಿದು ತಾಲ್ಲೂಕು ಆಫೀಸಿಗೆ ರೈತ ಹೋದರೆ, ಏತಕ್ಕೆ ಬಂದಲೆ ಎಂದು ಪ್ರಶ್ನೆ ಮಾಡುತ್ತಾರೆ. ತಾವು ಏತಕ್ಕೆ ಬಂದಿದ್ದೀರಿ ಕೂತುಕೊಳ್ಳಿ ಎಂದು ಹೇಳುವಂತ ಸೌಜನ್ಯವೂ ತಹಶೀಲ್ದಾರ ಆಫೀಸಿನಲ್ಲಿ ಕಾಣುತ್ತಿಲ್ಲ. ತಾವು ಕಂದಾಯವನ್ನು ಜಾಸ್ತಿ ಮಾಡಬೇಕಾದರೆ, ಏನಾದರೂ ಒಂದು ಆಧಾರವಾಗಿಟ್ಟು ಕೊಳ್ಳಬೇಕು. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ವಾಟರ್ ರೇಟ್ ಜಾಸ್ತಿ ಮಾಡುವ ಬಗ್ಗೆ ನೀರಿನ ಸ್ಟೋರೇಜ್ ಖರ್ಚು ಜಾಸ್ತಿ ಬರುತ್ತದೆ ಆದಕ್ಕಾಗಿ ವಾಟರ್ ರೇಟ್ ಜಾಸ್ತಿ ಮಾಡಬೇಕಾಗು ತ್ತದೆಂದು. ನಾನು ಇವತ್ತು ಕೇಳುತ್ತೇನೆ. ಒಬ್ಬ ಚೀಫ್ ಇಂಜನಿಯರ್ ಜಾಗಕ್ಕೆ ೫-೫ ಜನ ಚೀಫ್

ಇಂಜಿನಿಯರ್ ಹಾಕೋದು, ೫ ಜನ ಸೂಪರ್‌ವೈಸರ್ ಮಾಡತಕ್ಕ ಕೆಲಸಕ್ಕೆ ೨೫-೫೦ ಜನ ಸೂಪರ್‌ವೈಸರ್ ಹಾಕೋದು ನೀವು ಮಾಡತಕ್ಕ ತಪ್ಪಿಗೆ ರೈತರು ಇವತ್ತು ಕಂದಾಯ ತೆರಬೇಕಾಗಿದೆ. ಕಂದಾಯವನ್ನು ಹಾಕಬೇಕಾದರೆ ಸರ್ಕಾರ ಒಂದು ಮೈಲಿಗಲ್ಲು ಇಟ್ಟುಕೊಳ್ಳಬೇಕಾಗುತ್ತದೆ. ಇವತ್ತು ರೈತರ ಸ್ಥಿತಿ ಅವರಿಗೆ ಬರತಕ್ಕ ಉತ್ಪತ್ತಿ, ಮತ್ತು ಅವರ ಖರ್ಚು ವೆಚ್ಚಗಳನ್ನು ನೋಡಿಕೊಂಡು ಕಂದಾಯ ಹಾಕುತ್ತಿದ್ದೀರಾ ? ಇವತ್ತು ಸರ್ಕಾರ ಈ ಕೆಲಸವನ್ನು ಮಾಡುತ್ತಿಲ್ಲ.

೬-೦೦ ಪಿ.ಎಂ.

ಇವತ್ತು ಡೆಟ್ ರಿಲೀಫ್ ಆಕ್ಟ್ ನೀವು ಮಾಡಿದ್ದೀರಿ. ಕೊಟ್ಟಿದ್ದ ಸಾಲವನ್ನು ಕೊಡಬಾರದು ಎಂದು ಮಾಡಿದ್ದೀರಿ, ಸಂತೋಷ. ಆದರೆ ರೈತನ ಮೇಲೆ ಇತರ ಸಾಲಗಳೇನಿವೆ ಸರ್ಕಾರಿ ಸಾಲಗಳು, ಸಹಕಾರ ಸಂಘಗಳ ಸಾಲಗಳು, ಬ್ಯಾಂಕ್ ಸಾಲಗಳು ಅದಕ್ಕೆ ಏನು ಮಾಡಿದ್ದೀರಿ ? ಯಾರದೋ, ಆಸ್ತಿಯನ್ನು ಯಾರೋ ದಾನ ಮಾಡುವುದು ಸುಲಭ. ನಿಮ್ಮ ಆಸ್ತಿಯನ್ನು ದಾನ ಮಾಡುವುದು ಮುಖ್ಯ. ರೈತನ ಮೇಲಿರುವ ಇತರೆ ಸಾಲದ ಹೊರೆಯನ್ನು ನಿವಾರಣೆ ಮಾಡುವಂಥ ಕಾರ್ಯವನ್ನು ಮಾಡುತ್ತೀರಿ ಎಂಬ ವಿಶ್ವಾಸವನ್ನಿಟ್ಟುಕೊಂಡಿದ್ದೇನೆ. ಇನ್ನು ತಹಸೀಲ್ದಾರ್ ಆಫೀಸಿನ ಬಗ್ಗೆ ಕೆಲವು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಅಲ್ಲಿರುವಷ್ಟು ಭ್ರಷ್ಟಾಚಾರ ಎಲ್ಲೂ ಇಲ್ಲ ಎಂದು ಕಾಣುತ್ತೆ. ಇವತ್ತು ಒಂದು ಪಹಣಿಗೆ ಕನಿಷ್ಟಪಕ್ಷ ೧೦ ರೂಪಾಯಿಗಳನ್ನು ರೈತ ಕೊಡಬೇಕಾಗಿದೆ. ಬರೀ ಒಂದು ವರ್ಷದ ಪಹಣಿಯನ್ನು ಬರೆಯುವುದಕ್ಕೆ ಅಷ್ಟು ಕೊಡಬೇಕಾದರೆ ಇನ್ನೇನಾದರೂ ಹಿಂದಿನ ರೆಕಾರ್ಡ್ ತೆಗೆಸಬೇಕಾದರೆ ಅಥವಾ ಬೇರೆ ಯಾವುದಾದರೂ ಕೆಲಸ ಮಾಡಬೇಕಾದರೆ ರೈತ ಸತ್ತಹಾಗೆಯೇ ಅಲ್ಲಿ ಇವತ್ತು ಒಬ್ಬ ಅರ್ಜಿ ಕೊಟ್ಟರೆ ಅರ್ಜಿ ಕೊಟ್ಟವನು ಸತ್ತು ಅವನ ಮೊಮ್ಮಗ ಹುಟ್ಟಿದಮೇಲೆ ಅವನಿಗೆ ಜವಾಬು ಬರುತ್ತದೆ ನಿಮ್ಮ ತಾತ ಅರ್ಜಿ ಕೊಟ್ಟದ್ದು ಅದಕ್ಕೆ ಈಗ ಜವಾಬು ಕಳುಸುತ್ತಿದ್ದೇವೆ ಎಂದು ನಿಮ್ಮ ಕೈಯ್ಯಲ್ಲಿ ಅಲ್ಲಿ ಭ್ರಷ್ಟಾಚಾರವನ್ನು ಲಂಚವನ್ನು ತಪ್ಪಿಸುವುದಕ್ಕಾಗುವುದಿಲ್ಲ. ಹೋಗಲಿ ಅದನ್ನು ರೆಗ್ಯುಲರೈಸ್ ಮಾಡಿಬಿಡಿ, ಸಂಬಳ ಕೊಡುವುದನ್ನು ನಿಲ್ಲಿಸಿಬಿಟ್ಟು ಇಷ್ಟು ಕೆಲಸಕ್ಕೆ ಇಷ್ಟು ಲಂಚ ತೆಗೆದುಕೊಳ್ಳಬೇಕು ಅಂತ ರೆಗ್ಯುಲರೈಸ್ ಮಾಡಿ. ನಿಮ್ಮ ಕೈಯಲ್ಲಿ ಬ್ರಷ್ಟಚಾರವನ್ನು ತಡೆಗಟ್ಟುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ತಹಸಿಲ್ದಾರನಾಗಿ ಕೆಲಸಕ್ಕೆ ಸೇರಬೇಕಾದರೆ ಅವನು ರೊಕ್ಕ ಕೊಟ್ಟಿರುತ್ತಾನೆ. ದುಡ್ಡು ಕೊಟ್ಟು ತಹಸೀಲ್ದಾರನಾಗಿ ಕೆಲಸಕ್ಕೆ ಸೇರಿರುತ್ತಾನೆ. ಅಸಿಸ್ಟೆಂಟ್ ಕಮೀಷನರ್ ಆಗಬೇಕಾದರೆ ತಹಸೀಲ್ದಾರ್ ಆಗಬೇಕಾದರೆ ಅವನು ದುಡ್ಡು ಕೊಟ್ಟು ಬಂದಿರುತ್ತಾನೆ. ಆದ್ದರಿಂದ ಅವನು ರೈತನ ಹತ್ತಿರ ಸುಲಿಗೆ ಮಾಡುವುದಿಲ್ಲ ಎಂದು ಹೇಗೆ ನಿರೀಕ್ಷೆ ಮಾಡುವುದಕ್ಕಾಗುತ್ತದೆ ? ಅಪಾಯಿಂಟ್‌ಮೆಂಟ್ ಆಗತಕ್ಕ ಸಂದರ್ಭದಲ್ಲಿ ಕರಪ್ಷನ್ ಪ್ರಾರಂಭವಾಗಿರುತ್ತದೆ. ಆಮೇಲೆ ಪೋಸ್ಟಿಂಗ್ಸ್ ಮಾಡುವಾಗಲೂ ಅಷ್ಟೆ ಅಲ್ಲೂ ಕರಪ್ಷನ್ ನೀವು ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿ ಒಂದು ಕೆಲಸಕ್ಕೆ ಇಷ್ಟು ಟೈಂ ಅಂತ ಫಿಕ್ಸ್ ಮಾಡಿ. ಬಂದು ಅರ್ಜಿ ಕೊಟ್ಟರೆ ಅವನಿಗೆ ೭ ದಿವಸದಲ್ಲೋ ೮ ದಿವಸದಲ್ಲೋ ಉತ್ತರ ಸಿಗಬೇಕು ಆ ತರಹ ಒಂದು ಟೈಂ ನಿಗದಿ ಮಾಡಿ. ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಒಂದು ಎನ್‌ಕಂಬರೆನ್ಸ್ ಸರ್ಟಿಫಿಕೇಟಿಗೆ ಅರ್ಜಿ ಹಾಕಿದರೆ ಒಂದು ವರ್ಷದ ತನಕ ಟೈಮ್ ತೆಗೆದುಕೊಂಡಿದ್ದಾರೆ. ಇವತ್ತು ರಿಜಿಸ್ಟ್ರೇಷನ್‌ಗೆ ಅರ್ಜಿ ಕೊಟ್ಟರೆ ಇಷ್ಟು ದಿವಸದೊಳಗಾಗಿ ಪತ್ರವನ್ನು ಅವನಿಗೆ ತಲುಪಿಸಬೇಕು ಎಂದು ಒಂದು ನಿಯಮವನ್ನು ಮಾಡಿ. ಅದಕ್ಕೆ ಒಂದು ರಿಜಿಸ್ಟರ್ ಮೈಂಟೈನ್ ಮಾಡಿ. ಅರ್ಜಿಕೊಟ್ಟ ದಿನ ಯಾವುದು, ಹಣ ಪಾವತಿ ಮಾಡಿದ ದಿನ ಯಾವುದು ಎಂಬುದಕ್ಕೆ ರಿಜಿಸ್ಟರ್ ಮೈಂಟೈನ್ ಮಾಡಿ. ಇವತ್ತು ರೆವಿನ್ಯೂ ಇಲಾಖೆಯಲ್ಲಿ ಅಧಿಕಾರಿಗಳು ರೈತನನ್ನು ಶೋಷಣೆ ಮಾಡುವುದಕ್ಕೆ ಹೊರಟಿದ್ದಾರೆ. ಆದರೆ ರೈತ ಏನಾದರೂ ಎಚ್ಚೆತ್ತರೆ ಬಹಳ ಕಷ್ಟ ಆಗುತ್ತದೆ. ಧರ್ಮ ಅಧರ್ಮವಾದಾಗ ದಂಗೆ ಏಳತಕ್ಕ ಪರಿಸ್ಥಿತಿ ಬರುತ್ತದೆ. ಇವತ್ತು ತಮಗೆ ಮೈಂಟೆನೆನ್ಸ್‌ಗೆ ನಿಮ್ಮ ಹತ್ತಿರ ಹಣ ಇಲ್ಲ, ಸಂಬಳಕ್ಕೆ ಹಣ ಇಲ್ಲ ಎಂದು ರೈತರ ಮೇಲೆ ಹೊರೆ ಹಾಕುತ್ತಿದ್ದೀರಿ. ನಾನು ರೈತರ ಪ್ರತಿನಿಧಿಯಾಗಿ ಸರ್ಕಾರಕ್ಕೆ ಎಚ್ಚರಿಕೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇದೇ ರೀತಿ ನೀವು ಕಂದಾಯವನ್ನು ಹೆಚ್ಚಿಸುತ್ತಾ ರೈತನ ಶೋಷಣೆ ಮಾಡುತ್ತಾ ಬಂದರೆ ರೈತ ಹೂಳತಕ್ಕ ನೇಗಿಲನ್ನು ತಂದು ವಿಧಾನಸೌಧದ ಬಾಗಿಲಿಗೆ ಹೊಡೆಯತಕ್ಕ ಕಾಲ ಬಂದೀತು. ಕರ್ನಾಟಕ ರಾಜ್ಯದಲ್ಲಿ ರೈತರು ಮಾಡುತ್ತಾರೆ ಎಂದು ಹೇಳುತ್ತಾ.

ಶ್ರೀ ಬಿ. ಬಸವಲಿಂಗಪ್ಪ—ನಿಮ್ಮ ನೇಗಿಲು ಮೇಲೆ ಇದೆ. ಇನ್ನೂ ಕೆಳಕ್ಕೆ ಬಂದಿಲ್ಲ.

ಶ್ರೀ ಸಿ.ಎಂ. ಇಬ್ರಾಹಿಂ—ಡೆಲ್ಲಿಯಲ್ಲಿರುವ ಬೇರನ್ನು ಕಡಿದಮೇಲೆ ನಿಮ್ಮ ಬೇರು ಕೀಳುವುದೇನೂ ದೊಡ್ಡದಲ್ಲ. ದೊಡ್ಡ ಬೇರನ್ನು ಕಡಿದಿದ್ದೇವೆ, ಇನ್ನು ಇಲ್ಲೀ ಬೇರು ಕಡಿಯುವುದು, ದೊಡ್ಡದಲ್ಲ. ನಾನು ಇನ್ನೂ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂಬ ಇಚ್ಛೆ ನನಗಿತ್ತು. ಆದರೆ ನನಗೆ ಕಾಲಾವಕಾಶವಿಲ್ಲದ್ದರಿಂದ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ.ಎ. ಚಂದ್ರೇಗೌಡ (ಚಿಕ್ಕಮಗಳೂರು)—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ಕಂದಾಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಅನೇಕ ಸಲಹೆಗಳನ್ನು ಕೊಡಬೇಕೆಂದು ನನಗೆ ಇಚ್ಛೆ ಇದ್ದರೂ ಕೂಡ ಕಾಲಾವಕಾಶ ಹೆಚ್ಚಿಗೆ ಇಲ್ಲದ ಪ್ರಯುಕ್ತ ಕೆಲವು ಸಲಹೆಗಳನ್ನು ಮಾತ್ರ ತಮ್ಮ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಸಚಿವರಿಗೆ ನಾನೇನು ಹೆಚ್ಚು ಸಲಹೆಗಳನ್ನು ಕೊಡಬೇಕಾದಿಲ್ಲ. ಏಕೆಂದರೆ ಅವರು ಹೆಚ್ಚಿನ ಮಾಹಿತಿಯನ್ನು ಪಡೆದಿರತಕ್ಕವರು ಹಾಗೂ ರೈತರ ಕಷ್ಟ ಸುಖಗಳನ್ನು ಅರಿತಿರಕ್ಕವರು. ಆದರೂ ಕೆಲವು ವಿಷಯಗಳನ್ನು ಹೇಳಬೇಕಾದ ಅವಶ್ಯಕತೆ ಕಂಡುಬಂದಿದೆ. ಆದ್ದರಿಂದ ಹೇಳುತ್ತಿದ್ದೇನೆ. ಮಾನ್ಯ ರೆವಿನ್ಯೂ ಮಂತ್ರಿಗಳು ಮಾಡಿರತಕ್ಕ ಆನೇಕ ಪ್ರಜಾಪ್ರತಿನಿಧಿಗಳಿರತಕ್ಕ ಕಮಿಟಿಗಳನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ನಿಜವಾದ ಪ್ರಜಾ ಪ್ರಭುತ್ವವನ್ನು ನೋಡುತ್ತಿದ್ದೇವೆ ಎಂದು ಹೇಳಬಹುದು. ಹೆಚ್ಚಿನ ರೀತಿಯಲ್ಲಿ ಪ್ರಗತಿದಾಯಕವಾದ ಕಾರ್ಯಗಳನ್ನು ಮಾಡಲು ಪ್ರಜೆಗಳೇ ಅಧಿಕಾರಿಗಳಾಗಿ ಕೆಲಸ ಮಾಡತಕ್ಕ ಅವಕಾಶವನ್ನು ಮಾನ್ಯ ಮಂತ್ರಿಗಳು ಕಲ್ಪಿಸಿಕೊಟ್ಟಿದ್ದಾರೆ. ಲ್ಯಾಂಡ್ ಟ್ರಿಬ್ಯುನಲ್ ಮತ್ತು ಲ್ಯಾಂಡ್ ಗ್ರಾಂಟ್ ಕಮಿಟಿಗಳಿದ್ದು ಇವುಗಳ ನಡುವೆ ಸ್ವಲ್ಪ ವ್ಯತ್ಯಾಸಗಳು ಕಂಡುಬರುತ್ತದೆ. ದರಖಾಸ್ತು ವಗೈರೆ ರಿಕಾರ್ಡುಗಳ ಬಗ್ಗೆ ಮಾಡಿದಂಥ ರೆಕಮಂಡೇಷನ್ನುಗಳನ್ನು ಸಂಬಂಧಪಟ್ಟ ಇಲಾಖೆಯಅಧಿಕಾರಿಗಳು ರಿಜೆಕ್ಟ್ ಮಾಡತಕ್ಕ ಸಂದರ್ಭವನ್ನು ನೋಡಿ ವಿಷಾದವಾಗುತ್ತದೆ. ದಯವಿಟ್ಟು ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಈ ಕಮಿಟಿಯಲ್ಲಿ ಶಿಫಾರಸಿಗೆ ಬಂದಿರತಕ್ಕ ರೆಕಾರ್ಡುಗಳು ಪುನಃ ಸ್ಯಾಂಕ್ಷನ್ ಸ್ಟೇಜಿಗೆ ಹೋಗಬೇಕೇ ವಿನಹ ಯಾವ ಕಾರಣದಿಂದಲೂ ರಿಜೆಕ್ಟ್ ಆಗಬಾರದು ಎಂದು ಕಾನೂನನ್ನು ತರಬೇಕು. ಯಾವ ಲ್ಯಾಂಡ್ ಟ್ರಿಬ್ಯುನಲ್‌ಗಳಲ್ಲಿ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರನ್ನು ಅಪಾಯಿಂಟ್ ಮಾಡಿದ್ದಾರೆ ಅಂತಹ ಕಡೆಗಳನ್ನು ಟ್ರಿಬ್ಯುನಲ್‌ಗಳು ಹೆಚ್ಚಿನ ಪ್ರಗತಿಯನ್ನು ಸಾಧಿಸುತ್ತಿದೆ. ಎಲ್ಲಿ ರೆಗ್ಯುಲರ್ ಅಸಿಸ್ಟೆಂಟ್ ಕಮಿಷನರುಗಳಿದ್ದಾರೆ ಅಲ್ಲಿ ಕೆಲಸ ಸ್ಥಗಿತವಾಗಿದೆ. ಅನೇಕ ಕೇಸ್‌ಗಳು ಇತ್ಯರ್ಥವಾಗದೇ ಉಳಿದಿವೆ. ಕೆಲವು ಕಡೆಗಳಲ್ಲಿ ಇವರಿಗೆ ಹೆಚ್ಚು ಕೆಲಸಗಳಿದ್ದು ಸಭೆಗಳಿಗೆ ಸರಿಯಾಗಿ ಬರದೇ ಸಭೆಯ ಕೆಲಸ ನಿಂತಿವೆ. ಕೆಲವು ವೇಳೆ ಸದಸ್ಯರುಗಳು ಬರದೇ ಮತ್ತು ಕೆಲವು ವೇಳೆ ನೋಟೀಸ್ ಬಂದಿರತಕ್ಕ ಜಮೀನುದಾರರನ್ನು ಕಾಯ್ದುಕೊಂಡು ಸಭೆಯಲ್ಲಿ ಕೆಲಸ ಆಗದೇ ಸುಮ್ಮನೇ ಮನೆಗೆ ಹೋಗಿರತಕ್ಕ ಸಂದರ್ಭಗಳು ಅನೇಕ ಇವೆ. ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ ಲ್ಯಾಂಡ್ ಟ್ರಿಬ್ಯುನಲ್‌ಗಳಿಗೆ ಎಲ್ಲ ಕಡೆಗಳಲ್ಲಿ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರುಗಳನ್ನು ನೇಮಕ ಮಾಡಬೇಕು. ರೆಗ್ಯುಲರ್ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಆ ಕೆಲಸವನ್ನು ಕೊಡಬೇಡಿ ಎಂದು ಸಲಹೆ ಮಾಡುತ್ತಿದ್ದೇನೆ. ಆನೇಕ ಸದಸ್ಯರು ಹೇಳಿರುವುದನ್ನು ನಾನು ಪ್ರತಿಪಾದಿಸುತ್ತಿದ್ದೇನೆ. ಕಮಿಟಿಗಳಲ್ಲಿ ಅಫಿಷಿಯಲ್ ಛೇರ್ಮನ್ ಆಗಿರುವುದು ಸೂಕ್ತವಲ್ಲ. ನಾನ್ ಅಫಿಷಿಯಲ್ಸನ್ನು ಕಮಿಟಿಗೆ ಅಧ್ಯಕ್ಷರನ್ನಾಗಿ ಮಾಡಿ ಸಂಬಂಧಪಟ್ಟ ಅಸಿಸ್ಟೆಂಟ್ ಕಮಿಷನರುಗಳನ್ನು ಮತ್ತು ತಹಸೀಲ್ದಾರರನ್ನು ಕಮಿಟಿ ಅಡ್ವೈಸರುಗಳನ್ನಾಗಿ ಮಾಡಿದರೆ ಆನೇಕ ಕೆಲಸಕಾರ್ಯಗಳು ತ್ವರಿತಗತಿಯಲ್ಲಿ ಆಗುವುದಕ್ಕೆ ಅವಕಾಶವಾಗುತ್ತದೆ. ಆದರಿಂದ ನಾನ್ ಅಫಿಷಿಯಲ್ಸ್ ಛೇರ್ಮನ್ನಾಗಿರತಕ್ಕ ಸಮಿತಿಗಳಿರಬೇಕು. ಮಾನ್ಯ ಅಪ್ಪುಗಂ ಅವರು ಕಾಫಿ ತೋಟದ ಮಾಲೀಕರ ಬಗ್ಗೆ ಒಂದು ಮಾತನ್ನಾಡಿದ್ದಾರೆ. Coffee Planters have replaced Maharajas ಎಂದು ಹೇಳಿದ್ದಾರೆ. ಇವತ್ತು ಇಂಡಸ್ಟ್ರಿಯಲಿಸ್ಟ್ಸ್, ವ್ಯಾಪಾರಗಾರರನ್ನು ನೋಡಿದಾಗ ಅವರನ್ನು ಹೋಲಿಸಿಕೊಂಡಾಗ ಕಾಫಿ ಪ್ಲಾಂಟರುಗಳ ಸ್ಥಿತಿ ಏನು ಎಂಬುದು ಗೊತ್ತಾಗುತ್ತದೆ. ಕಾಫಿ ಪ್ಲಾಂಟರುಗಳಿಗೆ ಎಷ್ಟೋ ಕಷ್ಟಗಳಿವೆ. ಇವತ್ತು ಕಾಫಿ ಪ್ಲಾಂಟರುಗಳು ೧೪೦ ಕೋಟಿ ರೂಪಾಯಿ ವರಮಾನ ಇರತಕ್ಕ ದೊಡ್ಡ ಇಂಡಸ್ಟ್ರೀಸನ್ನು ಸ್ಥಾಪನೆ ಮಾಡಿದ್ದಾರೆ. ಕರ್ನಾಟಕದಲ್ಲಿ ಹೆಚ್ಚಿನ ರೀತಿಯಲ್ಲಿ ಅತ್ಯುತ್ತಮವಾಗಿ ಕಾಫಿ ಬೆಳೆಯತಕ್ಕ ಕಾಡು ಇದೆ. ಆದ್ದರಿಂದ ಹೆಚ್ಚಿನ ರೀತಿಯಲಿ ನಿಗಾ ಇಟ್ಟು ಕೆಲಸ ಮಾಡಿ ಉತ್ತಮ ರೀತಿಯಲ್ಲಿ ಸಮಾಜಕ್ಕೆ ನಷ್ಟವಾಗದ ರೀತಿಯಲ್ಲಿ ಕಾಡನ್ನು ಉಪಯೋಗಿಸಿ ಹೆಚ್ಚು ಕಾಫಿ ಬೆಳೆಸುವಂತೆ ಮಾಡಬೇಕು. ಕಾಫಿ ಪ್ಲಾಂಟರುಗಳು ಕಾಡನ್ನು ಉತ್ತಮವಾಗಿ ಸದುಪಯೋಗ ಮಾಡಿಕೊಳ್ಳುತ್ತಾರೆ.

ಈ ರೂಪದಲ್ಲಿರತಕ್ಕ ಪ್ಲಾಂಟೇಷನ್ ಬಗ್ಗೆ ಹೆಚ್ಚಿನ ಕಣ್ಣು ಇಡಬೇಡಿ. ಗೋಮಾಳ ಪ್ರದೇಶವಾಗಲಿ, ಕೆರೆ ಅಂಗಳವಾಗಲೀ, ಅಥವಾ ಇನ್ನಾವುದೇ ತರಿ ಮತ್ತು ಖುಷ್ಕಿ ಜಮೀನನ್ನು ಬಗರ್ ಹುಕುಂ ಸಾಗುವಳಿ ಮಾಡಿರುವುದಕ್ಕೂ ಕಾಫಿ ಪ್ಲಾಂಟೇಷನ್ನಿಗೂ ಬಹಳ ವ್ಯತ್ಯಾಸ ಇದೆ. ಅದಕ್ಕೆ ಸುಮಾರು ೭-೮ ವರ್ಷಗಳ ಕಾಲ ಬಹಳಷ್ಟು ಹಣವನ್ನು ಇನ್‌ವೆಸ್ಟ್ ಮಾಡಬೇಕು ಹೆಚ್ಚಿನ ರೀತಿಯಲ್ಲಿ ಖಾಸಗೀ ಸಾಲ, ಸೊಸೈಟಿ ಸಾಲ, ಬ್ಯಾಂಕ್ ಸಾಲ, ಕಾಫಿ ಬೋರ್ಡಿನಲ್ಲಿ ಸಾಲ, ಹೀಗೆ ಎಲ್ಲ ಕಡೆಯಲ್ಲು ಸಾಲ ಮಾಡಿ ತೋಟ ಮಾಡಿರುವ ಮಾಲೀಕನನ್ನು ನೋಡಿದರೆ ಅವನ ಆಸ್ತಿಯ ಬೆಲೆಯೂ ಒಂದೇ ಮತ್ತು ಅವನಿಗೆ ಇರತಕ್ಕ ಸಾಲವೂ ಒಂದೇ ಆಗಿರುತ್ತದೆ. ಅವರುಗಳು ಇಷ್ಟೊಂದು ಕಷ್ಟಪಡುತ್ತಿರುತ್ತಾರೆ. ಏನೋ ಒಂದು ರೀತಿಯಲ್ಲಿ ಪ್ಲಾಂಟೇಷನ್ ಕಮ್ಯೂನಿಟಿ ಎಂದು ಒಂದು ಟ್ರೆಡಿಷನ್ ಬೆಳೆಸಿಕೊಂಡು ಬಂದಿದೆ. ಹಿಂದೆ ಯೂರೋಪಿಯನ್ಸ್ ಯಾವ ರೀತಿ ಇರುತ್ತಿದ್ದರೋ ಅದೇ ರೀತಿ ಇವತ್ತಿನ ದಿವಸ ಇವರು ದೊಡ್ಡ ದೊಡ್ಡ ಬಂಗಲೆಗಳನ್ನು, ಕಾರುಗಳನ್ನು ಇಟ್ಟುಕೊಂಡಿದ್ದಾರೆಂದು ಅಲ್ಲ. ಅವರ ಬಗ್ಗೆ ಸ್ವಲ್ಪ ಕನಿಕರ ತೋರಿ ಈಗಾಗಲೇ ಬಗರ್ ಹುಕುಂ ಸಾಗು ಮಾಡಿರತಕ್ಕ ಜಮೀನನ್ನು ಕನ್‌ಫರ್ಮ್ ಮಾಡಿ. ಅದರಿಂದ ನಿಮಗೆ ೩೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ವರಮಾನ ಬರುತ್ತದೆ. ಈಗ ಸಾಗು ಮಾಡಿರುವುದಕ್ಕೆ ಡಬಲ್ ವ್ಯಾಲ್ಯು ಹಾಕಿ, ಟಿ.ಟಿ. ಹಾಕಿ ಕನ್‌ಫರ್ಮ್ ಮಾಡಿಕೊಡಿ ಹಾಗೂ ಇನ್ನು ಮುಂದೆ ಒಂದು ಇಂಚೂ ಕೂಡ ಒತ್ತುವರಿ ಮಾಡಬಾರದೆಂದು ನಿರ್ಬಂಧನೆ ಹಾಕಿ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಮಲೆನಾಡು ಪ್ರದೇಶಗಳಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಕೇವಲ ೩ ಗುಂಟೆ ಜಾಗವನ್ನು ಕೊಡತಕ್ಕದ್ದು ಸರಿಯಲ್ಲ. ಕೊನೆ ಪಕ್ಷ ೧೦ ಗುಂಟೆ ಜಾಗವನ್ನಾದರೂ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ವಿಲೇಜ್ ಅಕೌಂಟೆಂಟ್‌ಗಳು ಹಾಗೂ ರೆವಿನ್ಯೂ ಇನ್‌ಸ್ಪೆಕ್ಟರುಗಳು ಸ್ಥಳದಲ್ಲಿ ಇರುವುದಿಲ್ಲವೆಂದು ಹೇಳುತ್ತಾರೆ. ಅವರುಗಳು ಒಂದು ಗೊತ್ತಾದ ಜಾಗದಲ್ಲಿ ನೆಲೆ ನಿಲ್ಲುವುದಕ್ಕೆ ಅನುಕೂಲವಾಗುವಂತೆ ಎನ್.ಇ.ಎಸ್. ನವರು ಕ್ವಾರ್ಟರ್ಸ್ ಕಟ್ಟಿಸಿಕೊಟ್ಟಿರುವಂತೆ ಅವರುಗಳಿಗೂ ಕೂಡ ನಿಮ್ಮ ಇಲಾಖೆಯ ವತಿಯಿಂದ ಕ್ವಾರ್ಟರ್ಸ್‌ಗಳನ್ನು ಕಟ್ಟಿಸಿಕೊಡಿ. ಸಮಯಕ್ಕೆ ಸರಿಯಾಗಿ ಈ ಅಧಿಕಾರಿಗಳು ದೊರೆಯದಿದ್ದರೆ ರೈತರು ತಮ್ಮ ಕಾರ್ಯಕಲಾಪಗಳನ್ನು ನಿರ್ವಹಿಸಲು ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ಆ ಅಧಿಕಾರಿಗಳಿಗೆ ಅಲ್ಲಲ್ಲೇ ಕ್ವಾರ್ಟರ್ಸ್‌ಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಮುಜರಾಯಿ ಫಂಡನ್ನು ಸ್ಟೇಟ್ ಬ್ಯಾಂಕ್ ಹಾಗೂ ನ್ಯಾಷನಲೈಸ್ಡ್ ಬ್ಯಾಂಕುಗಳಲ್ಲಿ ಇಡುವುದನ್ನು ಬಿಟ್ಟು ಸಹಕಾರ ಬ್ಯಾಂಕುಗಳಲ್ಲಿ ಇಡುವುದರ ಮುಖೇನ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಕಾಫಿ ರಿಜಿಸ್ಟ್ರೇಷನ್ ಬ್ರಾಂಚನ್ನು ಪ್ರತ್ಯೇಕವಾಗಿ ವಿಂಗಡಿಸಿದ್ದರಿಂದ ವರ್ಷಾನುಗಟ್ಟಲೆ ರಿಜಿಸ್ಟ್ರೇಷನ್ ಆಗದೆ ಜನಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಅಲ್ಲಿಗೆ ಯಾವನೇ ಒಬ್ಬ ಬಡವ ಹೋಗಲಿ, ಶ್ರೀಮಂತ ಹೋಗಲಿ ರಿಜಿಸ್ಟ್ರೇಷನ್ ಮಾಡಬೇಕಾದರೆ ಇಂತಿಷ್ಟು ಹಣವನ್ನು ಎನ್.ಎಸ್.ಸಿ. ಗೆ ಕೊಡಬೇಕೆಂದು ಗೊತ್ತುಪಡಿಸಿದ್ದಾರೆ; ಅದನ್ನು ದಯವಿಟ್ಟು ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಯಾರ್ಯಾರಿಗೆ ಎಷ್ಟೆಷ್ಟು ಹಾಕಬೇಕೆಂಬುದನ್ನು ನೋಡಿ ಹಾಕಬೇಕು. ಇದರಿಂದ ಬಡರೈತರಿಗೆ ಆಗತಕ್ಕ ಹಿಂಸೆಯನ್ನು ತಪ್ಪಿಸಬೇಕು. ಒಟ್ಟಿನಲ್ಲಿ ದರಖಾಸ್ತು ವಿಲೇವಾರಿ ಜರೂರಾಗಿ ಆಗಬೇಕು. ಫಾರೆಸ್ಟ್ ಇಲಾಖೆಯವರು, ರೆವಿನ್ಯೂ ಇಲಾಖೆಯವರು, ಸರ್ವೆಯವರು ಎಲ್ಲರೂ ಕೂಡಿ ಒಂದೇ ಜೀಪಿನಲ್ಲಿ ಹೋಗಿ ಆದಷ್ಟು ಬೇಗನೆ ವಿಲೇವಾರಿ ಮಾಡಲಿ ಎಂದು ಸಲಹೆ ಮಾಡುತ್ತೇನೆ. ದರಖಾಸ್ತು ಮಾಡಿ ೧೫-೨೦ ವರ್ಷಗಳಿಂದ ಮಂಜೂರಾಗದೆ ಇರತಕ್ಕ ಪ್ರಕರಣಗಳನ್ನು ನೋಡಿದ್ದೇನೆ. ಅವರ ಜೀವಮಾನ ಪರ್ಯಂತವೆಲ್ಲ ದರಖಾಸ್ತಿನಲ್ಲೇ ಮುಗಿದು ಹೋಗಲಿಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ. ಹೀಗೆ ಅವರು ೧೫-೨೦ ವರ್ಷಗಳಿಂದ ಮಂಜೂರಾತಿಗಾಗಿ ಎಷ್ಟೆಷ್ಟು ಕಷ್ಟಗಳನ್ನು, ತೊಂದರೆಗಳನ್ನು ಅನುಭವಿಸಿರಬಹುದೆಂಬುದನ್ನು ಯೋಚಿಸಬೇಕು. ಆದ್ದರಿಂದ ಈಗಲಾದರೂ ಕೂಡ ರೆವಿನ್ಯೂ ಇಲಾಖೆಯವರು ರೈತರಿಗೆ ಅಗತ್ಯವಾಗಿ ಆಗಬೇಕಾಗಿರುವ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು ಒಳ್ಳೆಯ ಹೆಸರನ್ನು ಗಳಿಸಿ ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ (ವಿಠ್ಠಲ).—ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಭೂಸುಧಾರಣೆಯ ಬಗ್ಗೆ ಇದರಲ್ಲಿ ಏನು ಹೇಳಿದ್ದಾರೆಂದರೆ, ೧೯೭೭-೭೮ರಲ್ಲಿ ನಮ್ಮ ಕಾರ್ಯ ಬಹಳ ತೀವ್ರವಾಗಿ ಮೊದಲಿಗಿಂತ ಉತ್ತಮವಾಗಿ ನಡೆಯುತ್ತಿದೆ ಎಂದು ಹೇಳಿದ್ದಾರೆ. ಆದರೆ ೧೯೭೬-೭೭ರ ಹಾಗೂ ೧೯೭೭-೭೮ರ ಭೂಸುಧಾರಣೆಯ ವರದಿಯನ್ನು ವೀಕ್ಷಿಸಿದಾಗ ನಿಜವಾಗಿಯೂ ೧೯೭೭-೭೮ರಲ್ಲಿ ಆ ಕಾರ್ಯ ಎಷ್ಟು ಬಿರುಸಿನಿಂದ ನಡೆಯಬೇಕಾಗಿತ್ತೋ ಆ ರೀತಿ ನಡೆದಿಲ್ಲವೆಂಬುದನ್ನು ನಾನು ಈ ಸದನದಲ್ಲಿ ಹೇಳ

ಬೇಕಾಗಿದೆ. ಈ ಕಾರ್ಯ ಮೊದಲಿನಿಂದ ಒಂದೇ ರೀತಿಯಲ್ಲಿ ನಡೆಯುತ್ತಾ ಬರುತ್ತಿದೆ. ಅದಕ್ಕೆ ಮಧ್ಯದಲ್ಲಿ ಸ್ವಲ್ಪ ವಿಘ್ನ ಬಂತು. ಅದು ತಮಗೆಲ್ಲರಿಗೂ ಗೊತ್ತಿರುವ ವಿಷಯ. ಆ ಅವಧಿಯಲ್ಲಿ ಈ ಭೂ ಸುಧಾರಣಾ ಕಾರ್ಯಕ್ರಮವನ್ನು ತೀವ್ರಗತಿಯಿಂದ ಜಾರಿಗೆ ತರಬೇಕೆಂಬ ಒತ್ತಡ ಸಾಕಷ್ಟು ಇಲ್ಲವೆಂಬುದು ನಮ್ಮೆಲ್ಲರ ಅನುಭವಕ್ಕೆ ಬಂದಂತಹ ವಿಚಾರ. ಅಧಿಕಾರಿಗಳೂ ಕೂಡ ಇದನ್ನು ಕಾರ್ಯರೂಪಕ್ಕೆ ತರಬೇಕೆನ್ನುವ ಒಂದು ಉತ್ಸಾಹವನ್ನು ಎಲ್ಲ ಕಡೆ ತೋರಿಸಲಿಲ್ಲ. ಅದಕ್ಕೆ ಒಂದೆರಡು ಉದಾಹರಣೆ ಗಳನ್ನು ಹೇಳುವುದಾದರೆ, ಈಗ ತಾನೇ ಮಾನ್ಯ ಚಂದ್ರೇಗೌಡರು ಹೇಳಿದರು, ಸ್ಪೆಷಲ್ ಅಸಿಸ್ಟೆಂಟ್ ಕಮೀಷನರ್‌ಗಳು ಯಾವ ಯಾವ ಭೂನ್ಯಾಯ ಮಂಡಲಿಗಳಲ್ಲಿ ಅಧ್ಯಕ್ಷರಾಗಿದ್ದಾರೋ ಅಂಥ ಕಡೆಗಳಲ್ಲಿ ಸದಸ್ಯರೂ ಕೂಡ ಒತ್ತಾಯ ಮಾಡಿ ಕೆಲಸಗಳು ಸ್ವಲ್ಪಮಟ್ಟಿಗೆ ಸರಿಯಾಗಿ ನಡೆಯುತ್ತಿವೆ ಎಂದು ಇನ್ನೂ ಅನೇಕ ಕಡೆಗಳಲ್ಲಿ ಅನೇಕ ಮಂದಿ ಅಸಿಸ್ಟೆಂಟ್ ಕಮೀಷನರ್‌ಗಳನ್ನು ನೇಮಿಸಬೇಕಾಗಿದೆ. ಇವತ್ತಿನ ದಿವಸ ೧೭೫ ತಾಲ್ಲೂಕುಗಳಲ್ಲಿ ೧೮೨ ಭೂನ್ಯಾಯ ಮಂಡಲಿಗಳಿದ್ದರೆ ಕೇವಲ ೪೫ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರ್‌ಗಳಿದ್ದಾರೆ. ಬಾಕಿ ಕಡೆ ರೆಗ್ಯುಲರ್ ಅಸಿಸ್ಟೆಂಟ್ ಕಮೀಷನರ್‌ಗಳಾಗಲೀ ಅಥವಾ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರತಕ್ಕ ಅಧಿಕಾರಿಗಳಾಗಲೀ ಕೆಲಸ ಮಾಡುತ್ತಿರುತ್ತಾರೆ. ಅವರುಗಳು ತಮ್ಮ ಕೆಲಸದ ಜೊತೆಗೆ ಈ ಕೆಲಸವನ್ನು ಮಾಡಬೇಕೆಂದರೆ, ಈ ಕಾರ್ಯವನ್ನು ಸರಿಯಾಗಿ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಅದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಬೇಕು. ಸ್ಪೆಷಲ್ ಅಸಿಸ್ಟೆಂಟ್ ಕಮೀಷನರ್‌ಗಳು ಎಲ್ಲ ಕಡೆಯೂ ಇರುವಂತೆ ಮಾಡಬೇಕು. ಭೂಸುಧಾರಣಾ ಶಾಸನದಲ್ಲಿ ಹಲವಾರು ತಿದ್ದುಪಡಿಗಳಾಗಬೇಕೆಂದು ಈಗಾಗಲೇ ತಾವು ಹೇಳಿದ್ದೀರಿ. ಈಗ ತಾನೇ ತಾವು ಆ ಬಗ್ಗೆ ಹೇಳಿರುವುದರಿಂದ ಹೆಚ್ಚು ವಿವರಿಸುವುದಕ್ಕೆ ಹೋಗುವುದಿಲ್ಲ. ಒಂದು ಮಾತನ್ನು ಹೇಳುವುದಾದರೆ, ತಿದ್ದುಪಡಿಗಳನ್ನು ಈ ಅಧಿವೇಶನ ಮುಗಿಯುವುದರೊಳಗೆ ತರಬೇಕೆಂದು ಹೇಳುತ್ತೇನೆ. ಇದರಿಂದ ಹೆಚ್ಚಿನ ಉಪಯೋಗವಾಗತಕ್ಕ ಜನರು ಹೊರಗೇ ಇದ್ದಾರೆ. ಅವರಿಗೆ ಇದರ ಅನುಕೂಲತೆ ಸಿಕ್ಕುವಹಾಗೆ ಆಗಬೇಕು. ಆದ್ದರಿಂದ ಆ ಒಂದು ತಿದ್ದುಪಡಿಗಳನ್ನು ಈ ಸದನದಲ್ಲಿ ಈ ಒಂದು ಅಧಿವೇಶನದಲ್ಲೇ ತರಬೇಕೆಂದು ಹೇಳುತ್ತೇನೆ.

ಇನ್ನೊಂದು ಈ ವ್ಯಾಲ್ಯುಯೇಷನ್ ಬಗ್ಗೆ ಹೇಳುವುದಾದರೆ, ಟ್ರಿಬ್ಯುನಲ್‌ನವರು ಜಮೀನನ್ನು ವ್ಯಾಲ್ಯುಯೇಷನ್ ಮಾಡುವಾಗ ಅದನ್ನು ರೆವಿನ್ಯೂ ಇನ್‌ಸ್ಪೆಕ್ಟರ ರವರು ಮಾಡುತ್ತಾರೆ ಇಲ್ಲ ಒಬ್ಬ ಸ್ಪೆಷಲ್ ತಹಶೀಲ್ದಾರ್‌ರವರು ಮಾಡುತ್ತಾರೆ ಅದು ಅಂತಿಮವಾಗಿ ಅದೇ ರೀತಿ ರಿಕಾರ್ಡ್‌ನಲ್ಲಿ ಹೊರಟು ಹೋಗುತ್ತದೆ. ಟೆನೆನ್ಸಿಯೇ ಹೆಚ್ಚಾಗಿ ಇರತಕ್ಕಂಥ ಪ್ರದೇಶದಿಂದ ನಾನು ಬಂದಿರುವುದರಿಂದ ನನ್ನ ಸ್ವಂತ ಅನುಭವದಿಂದ ಏನು ಕಂಡು ಬರುತ್ತಿದೆಂದರೆ ಈ ವ್ಯಾಲ್ಯುಯೇಷನ್ ಮಾಡುವಾಗ ನಿಜವಾಗಿಯೂ ಆ ಜಮೀನನ್ನು ಮಾರ್ಕೆಟ್ ವ್ಯಾಲು ಎಷ್ಟಿದೆ ಅದು ಅಷ್ಟನ್ನೂ ಕೂಡ ವ್ಯಾಲ್ಯು ಮಾಡುವಂಥಾ ರೀತಿ ಇರುವುದರಿಂದ, ಆ ನೀತಿಯನ್ನು ರೆವಿನ್ಯೂ ಇನ್‌ಸ್ಪೆಕ್ಟರ್‌ರವರು ಅನುಸರಿಸುತ್ತಿರುವುದರಿಂದ ಅವನ್ನು ಸ್ವಲ್ಪ ಸರಿಪಡಿಸಬೇಕೆಂದು ಹೇಳಬಯಸುತ್ತೇನೆ. ಇನ್ನು ಹರಿಜನರಿಗೆ, ಗಿರಿಜನರಿಗೆ ಮತ್ತು ದುರ್ಬಲ ವರ್ಗದವರಿಗೆ ಏನು ಜಮೀನು ಮಂಜೂರು ಆಗಿರುತ್ತದೆ ಅವರು ತಮ್ಮ ಒಂದು ಸಂಕಷ್ಟ ನಿವಾರಣೆಗಾಗಿ ಮಾರಾಟ ಮಾಡಬೇಕಾಗಿ ಬಂದಿದೆ. ಡಾಟ್‌ಪ್ರೋನ್ ಏರಿಯಾದಲ್ಲಿರತಕ್ಕಂಥವರು ತಮ್ಮ ಒಂದು ಸಂಕಷ್ಟ ನಿವಾರಣೆಗಾಗಿ ವಿಕ್ರಯ ಮಾಡಿದ್ದಾರೆ, ಆದುದರಿಂದ ಆ ಜಮೀನುಗಳು ಅವರಿಗೇ ಪುನಃ ಸಿಗಬೇಕಾದ್ದು ನ್ಯಾಯವಾಗಿದೆ. ಅದನ್ನು ನಮ್ಮ ಕಡೆ ನಂಬಿಕೆಯ ಕ್ರಯವೆಂದು ಹೇಳುತ್ತಾರೆ. ಎಸ್.ಸಿ-ಎಸ್.ಟಿ. ಯವರು ಜಮೀನನ್ನು ಪರಭಾರೆ ಮಾಡುವ ಹಾಗಿಲ್ಲ. ಆದರೂ ನಂಬಿಕೆಯ ಕ್ರಯದ ಮೇಲೆ ಅವರ ಜಮೀನುಗಳನ್ನು ಶ್ರೀಮಂತರು ಹೊಡೆದುಕೊಂಡಿದ್ದಾರೆ, ಅದಕ್ಕೆ ಒಂದು ಶಾಸನ ತಂದು ಅವರ ಜಮೀನನ್ನು ಅವರಿಗೆ ವಾಪಸ್ಸು ಕೊಡಿಸಿ ಕೊಡುವ ಬಗ್ಗೆ ತಾವು ಒಂದು ಸರಿಯಾದ ವ್ಯವಸ್ಥೆ ಮಾಡ ಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಅನ್‌ಆಥರೈಜ್ಡ್ ಕಲ್ಟಿವೇಷನ್ ಬಗ್ಗೆ ಹೇಳಬೇಕೆಂದರೆ, ಚಿಕ್ಕಮಗಳೂರು ಕಾಫಿ ಪ್ಲಾಂಟರ್ ಗಳ ಬಗ್ಗೆ ಮಾನ್ಯ ಸದಸ್ಯರುಗಳು ಹೇಳಿದರು, ನಿಜವಾಗಿಯೂ ಅವರು ಸರ್ಕಾರಿ ಜಮೀನನ್ನು ಪಡೆದು ಕೊಂಡು ದುಡ್ಡುಮಾಡಿಕೊಂಡಿದ್ದಾರೆ. ಅವರು ಸರಿಯಾಗಿ ಇನ್‌ಕಂಟ್ಯಾಕ್ಸ್ ಸೇಲ್ಸ್ ಟ್ಯಾಕ್ಸ್ ಯಾವುದನ್ನೂ ಕೊಡುತ್ತಿಲ್ಲ. ಮತ್ತೆ ಪುನಃ ಅವರಿಗೆ ರಿಯಾಯಿತಿ ಕೊಡುವುದು ನ್ಯಾಯವಾದುದಲ್ಲ. ಎಷ್ಟು ಎಕರೆ ಹೊಡೆದುಕೊಂಡಿದ್ದಾರೋ ಗೊತ್ತಿಲ್ಲ ಆದುದರಿಂದ ತಾವು ಸರ್ವೆ ಮಾಡಿಸಿ ಅಂಥಾದ್ದು ಏನಾದರೂ ಇದ್ದರೆ ಸರಿಪಡಿಸಬೇಕು ಇಲ್ಲದಿದ್ದರೆ ನ್ಯಾಯವಾಗಿ ಯಾರು ಕಾಫಿ ಪ್ಲಾಂಟರ್‌ಗಳು ಸೇಲ್ಸ್

ಟ್ಯಾಕ್ಸ್, ಇನ್‌ಕಂಟ್ಯಾಕ್ಸ್ ಕೊಡುತ್ತಿದ್ದಾರೋ ಅಂಥವರಿಗೆ ಬಹಳ ತೊಂದರೆಯಾಗಿದೆ. ಅವರ ಹತ್ತಿರ ವಾದರೆ ಎಲ್ಲಾ ಲೆಕ್ಕ ಪತ್ರಗಳೂ ಸಿಗುತ್ತವೆ ಆದರೆ ಇವರ ಹತ್ತಿರ ಯಾವ ಲೆಕ್ಕ ಪತ್ರಗಳೂ ಇರುವುದಿಲ್ಲ, ಇದರಿಂದಾಗಿ ನ್ಯಾಯವಾದ ರೀತಿಯಲ್ಲಿ ಕಾಫಿ ಬೆಳೆಯುತಕ್ಕಂಥವರಿಗೆ ನಷ್ಟವಾಗಿದೆ ಮತ್ತು ಅದರಿಂದ ಇಡೀ ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತದೆ, ಅಂಥವರಿಗೆ ತಾವು ಪುನ: ಸೌಜನ್ಯ ತೋರಿಸಬೇಕಾದ ಅವಶ್ಯಕತೆ ಇಲ್ಲ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ೨೫ ಎಕರೆ ಒಳಪಟ್ಟ ಜಮೀನಿನಲ್ಲಿ ಮರಗಳು ಇಲ್ಲದಿದ್ದರೆ ಆ ಜಮೀನನ್ನು ವ್ಯವಸಾಯಕ್ಕೆ ಕೊಡಬಹುದೆಂದು ಹೇಳಿದ್ದೀರಿ ಆದರಿಂದಲೇ ಒಂದು ತಾಪತ್ರಯ ಕಂಡು ಬರುತ್ತಿದೆ. ಅದು ಏನೆಂದರೆ ಮಲೆನಾಡು ಪ್ರದೇಶ ಮುಖ್ಯವಾಗಿ ಮರಗಳಿಂದಲೇ ಕೂಡಿರತಕ್ಕಂಥ ಪ್ರದೇಶ. ಒಂದು ಎಕರೆಯಲ್ಲಿ ಏನಿಲ್ಲವೆಂದರೂ ಒಂದು ೨೦ ಮರಗಳು ಇದ್ದೇ ಇರುತ್ತವೆ. ಮರಗಳು ಇಲ್ಲದೇ ಇರತಕ್ಕಂಥ ೫ ಸೆಂಟಿಮೀಟರ್ ಭೂಮಿ ನಿಮಗೆ ಸಿಗುವುದಿಲ್ಲ. ಮರಗಳು ಇದ್ದರೆ ಫಾರೆಸ್ಟ್ ಇಲಾಖೆಯವರು ವ್ಯವಸಾಯಕ್ಕೆ ಬಿಟ್ಟು ಕೊಡುವುದಿಲ್ಲ ಆ ರೀತಿ ಒಂದು ಆಜ್ಞೆ ಇದೆ. ಆದುದರಿಂದ ಮಲೆನಾಡು ಪ್ರದೇಶದಲ್ಲಿ ೨೦ ಗಿಡಗಳೂ ಸಹ ಇಲ್ಲದೇ ಇರುವಂಥ ಜಮೀನು ನಿಮಗೆ ಸಿಕ್ಕುವುದಿಲ್ಲ. ಆದುದರಿಂದ ಅಂಥವರಿಗೆ ವ್ಯವಸಾಯಕ್ಕೆ ಜಮೀನು ಕೊಡಿಸಿ ಕೊಡುವ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿತ್ತು ಆದರೆ ಟೈಮಿನ ಅಭಾವವಿರುವುದರಿಂದ ಇಷ್ಟು ವಿಷಯಗಳನ್ನು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI G.B. SHANKARA RAO (Hirekerur),-Mr. Speaker, Sir, I thank you for having given me the opportunity to speak on this demand. With my little experience, I wish to give some useful suggestions to my Hon'ble friend Mr. Basavalingappa. Mr. Speaker, Sir, a few members not only this side but also on the other side have rightly said that this department has lost the character of the Revenue Department. I think, it is partly true. This Revenue Department was originally incharge of Revenue Administration. It was entrusted with the responsibility of maintenance of records, collection ofland Revenue and so on so forth. After Independence this department is not exclusively in charge of Revenue Administration as it was in the previous years. But it is rightly called development oriented Department because much of the developmental work is to be done by this Department. For example the Divisional Commissioner at the divisional level is in charge of the development work. Here I would suggest to the Government to take away the appellate powers under the revenue laws and see that there is a Development Commissioner exclusively for the development work, at the Divisional level. Likewise, my suggestion is that Assistant Commissioners should be fully entrusted with the development work. After all the Assistant Commissioner in charge of the sub-division is not burdened with heavy work. So I suggest that the Assistant Commissioners may be redesignated as Assistant Development Commissioners at the Sub-Divi sion level,

Now I shall come to the duties of the Tahsildars. The Tahsildars never care to study the revenue laws and they do not apply their mind properly while discharging their official duties. They are entrusted with the work of issuing permit for sugar and cement. They actually

do not attend to other important work relating to revenue matters They resort to corrupt practices while issuing permits. Therefore, I urge upon the Government to take suitable steps to root out corruption in the Taluk Offices.

Now the most important work of the Revenue Department is the implementation of the Land Reforms Act. I appreciate the sincerits and the enthusiasm of my friend Mr. Basavalingappa in implementing the Land Reforms Act. He has gained considerable experience as Revenue Minister previously. I congratulate the Government and also the Minister for their sincerity in the implementation of this progressive measure of Land Reforms. The only trouble with them is they have so far not reconstituted the Land Tribunals. I do not know why this delay. I apprehended it may take days for the reconsitution of the Tribunals. The figures disclose that for the past 3 years not even 50 per cent of the backlog was cleared. There are still arrears. They say they are going to implement the Land Reforms before the end of December this year. If they donot work with all sincerity they cannot implement the Land Reforms by the end of this year. Therefore, I request the Hon'ble Minister for Revenue to reconstitute the Land Tribunals without any loss of time, I have my suggestions to make in regard. to reconstitution of Tribunals. While appointing a member to the Land Tribunal, I request the Hon'ble Minister to examine the past records of the member his reputation, knowledge of law etc. He should nominate such people who have got a little background of all these things. I also suggest a courseto the members on the Land Reforms which would help them to acquaint themsel2es with the provisions of law, record of rights and so on.

The Village Accountant is the lowest rung of the ladder of Revenue Administration. And what a pivotal position he occupies. What an amount of responsibility he is entrusted with. Whatever entries he makes in the registers are considered to be correct unless they are rebutted in a court of law. Whatever he says is considered to be gospel truth. I therefore request my Hon. friend, the Revenue Minister to volve some system whereby the entries in the registers made by these officials are correctly done so that the mischief played by thes subordinates in the department can be avoided.

There are a number of cases pending in the Land Tribunals. Why this number is so big? This is because of the entries in the Record of Rights espec all with regard to palani I can say from my experience that the Village Accountants are so irresponsible that they can change the entries as and when they like and manipulate the records. What about the plight of the ryots? Deterrent punishment must be provided for this. He must evolve a system so that this mischief can be avoided by the lowest subordinate of the department.

We have been speaking of encroachments for over a decade. Who are these pepole who encroach? They are people big like me. They grab lands in the hope that they will be regularised in their favour. If the Government allows this to continue, where is the end? Please put an end to this so that we can have land for granting it to land less otherwise the Govt. wastl and the forest lands will be completely eroded and we will not have even an inch of Government land for granting. The Hon'ble Minister should give serious thought to it.

Regarding crop-cutting experiments, I have to stress the importance of Survey and Settlement Department. From my experience I can say that the immediate attention that is to be given is to the Survey and Settlement Department. This is the most useful department in the interest of the ryots. If one pays a casual visit to this department and see the records, it will be seen that they are all in a mess. I am really pained to say this against the officers of this department. Survey and measurement is incomplete and incorporaition has been pending for years together and the ryots have to approach the Surveyors, pay something and get their things done. How long are we to continue with this state of affairs? What is the quantum of work in arrears? In the course of next ten years lakhs of entries will remain for incorporation. I would therefore request the Hon. Revenue Minister to see that incorporation work will be done without delay and copies are made whenever ryots approach them.

Bangalore is a very big city growing enormously. It is very strange that in such a big city no city survey has been thought of. In 1967 a survey of the Bangalore City was ordered. Even now that work is not complete. It is really an awful state of affairs because the buildings have encroached on the roads and marred the beauty of the city.

Regarding the collection of arrears of land revenue, the plight of the poor ryots is really bad. He is really. harassed at the village level. The Revenue authrities are using coersive measures and are violating the laws Under the law the ryots' foodgrains, bullocks and utensils cannot be attached. I am sorry to say that though repeatedly we make requests to the officers not to attach them, they go on doing these illegal acts. They attach these properties of the ryots in violation of the provisions of law proper instructions should be issued to the revenue officers that they should not attach these properties while resorting to coersive methods to collect the arrears.

While making nominations to the land Tribunals bad characters should be avoided. I know the Minister is an experienced man and he has the interest of the State at heart. He knows who is who being

a shrewd man. I have nothing to gain by praising him. I hope he will look into this matter.

Regarding the officers, I do not like to condemn them in general. so far as the senior I.A.S. officers are concerned, they have got the interest of the common man at heart. But I cannot say the same thing about the young I.A.S. Officers. This I have to say painfully. I had an occasion to meet a young I.A S. Officer. He spoke to me sitting in his car itself. This kind of attitude should change. Instead of doing good he will do a great harm to the administration in general.

With these words I thank the Chair for its generosity in giving me so much of time.

೬-೩೦ ಪಿ. ಎಂ.

† ಶ್ರೀ ಜಿ. ಎಸ್. ಶಿವನಂಜಪ್ಪ.—ನಮ್ಮ ತುಮಕೂರು ಟೌನ್ ಇತ್ತೀಚೆಗೆ ಮೂರು ನಾಲ್ಕು ವರ್ಷಗಳಿಂದ ವಿಪರೀತ ಬೆಳೆಯುತ್ತಿದೆ. ಇದರಲ್ಲಿ ಒಂದು ವಿಷಯ ಏನಾಗಿದೆಯೆಂದರೆ ಎರಡು ಕುಂಟೆ ಹಾಗೂ ಒಂದು ಕುಂಟೆ ಜಮೀನನ್ನು ಮನೆ ಕಟ್ಟಿಕೊಳ್ಳಲಿಕ್ಕೆ ಅಲಿನಿಯೇಷನ್ ಮಾಡುತ್ತಿಲ್ಲ. ರೆವಿನ್ಯೂ ಅಧಿಕಾರಿಗಳನ್ನು ಕೇಳಿದರೆ ಫ್ರಾಗ್‌ಮೆಂಟೇಷನ್ ಎಂದು ಹೇಳುತ್ತಾರೆ. ಅದರಲ್ಲೂ ಲ್ಯಾಂಡ್ ರೀ ಫಾರಮ್ಸ್ ಆಕ್ಟಿನ ಪ್ರಕಾರ ಪರಬಾರೆ ಮಾಡಿರುವುದನ್ನು ಅಲಿನಿಯೇಷನ್ ಮಾಡುವುದಿಲ್ಲವೆಂದು ಹೇಳುತ್ತಾರೆ. ಇನ್ನು ತುಮಕೂರು ಟೌನಿಗೆ ವಾಚ್ ಫ್ಯಾಕ್ಟರಿ, ಪಾಲಿಟೆಕ್ನಿಕ್ ಫಸ್ಟ್‌ಗ್ರೇಡ್ ಕಾಲೇಜ್ ಹಾಗೂ ರೆಗ್ಯುಲೇಟೆಡ್ ಮಾರ್ಕೆಟ್ ಯಾರ್ಡ್ ಎಂದು ಬೇಕಾದಷ್ಟು ಇಲಾಖೆಗಳು ಬರುವುದರಿಂದ ನಮ್ಮ ತುಮಕೂರು ಟೌನ್ ಬೆಳೆಯುತ್ತದೆ. ಅಲ್ಲಿ ವಾಸಮಾಡುತ್ತಿರುವ ಜನರಿಗೆ ಮನೆಗಳಿಲ್ಲದೆ ಬಾಡಿಗೆ ಮನೆಗಳಿಗೆ ೧೫೦ರೂ ೨೦೦ರೂ ವರೆಗೆ ಬಾಡಿಗೆ ವಸೂಲುಮಾಡುತ್ತಿದ್ದಾರೆ. ಈ ಕಾರಣದಿಂದ ಜನರಿಗೆ ಬಹಳ ತೊಂದರೆಯಾಗುತ್ತಿರುವುದರಿಂದ ಒಂದು ಎರಡು ಕುಂಟೆ ಜಮೀನುಗಳಿಗೆ ಅಲಿನಿಯೇಷನ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ,

ಶ್ರೀ ಜಿ. ಡಿ. ಸೋಮಪ್ಪ (ಸಕಲೇಶಪುರ).—ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ ಕೆಲವು ಜಮೀನುಗಳನ್ನು ಸಾಗುವಳಿಮಾಡುತ್ತಿದ್ದಾರೆ. ಅದರಲ್ಲಿ ಖಾತಾ ಬದಲಾವಣೆಮಾಡಿ ೧೫ ವರ್ಷಗಳಿಂದ ಜಮೀನುಗಳನ್ನು ರಿಜಿಸ್ಟರ್ ಮಾಡದೆ ಹಾಗೆಯೇ ಇಟ್ಟುಕೊಂಡಿದ್ದಾರೆ. ಅವರಿಗೆ ಆ ಜಮೀನುಗಳನ್ನು ಉಪಯೋಗಿಸಿಕೊಳ್ಳುತ್ತಿದ್ದರೂ ಅವರ ಹೆಸರಿಗೆ ಇಲ್ಲದೆ ಇರುವುದರಿಂದ ಬಹಳ ತೊಂದರೆಯಾಗಿದೆ. ಅಂಥಾದ್ದನ್ನೆಲ್ಲಾ ಕೂಡಲೇ ಮಾನ್ಯ ಮಂತ್ರಿಗಳು ಒಂದು ತಿಂಗಳೊಳಗೆ ಖುಲ್ಲಾ ಮಾಡಿಸಿ ಯಾರಿಗೆ ಅನ್ಯಾಯ ಮಾಡಿದ್ದಾರೆ ಅದನ್ನು ಅವರಿಗೆ ಹಂಚಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಎಸ್. ಪ್ರಮೀಳಾ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೆ, ಹಿಂದೆ ಕಂದಾಯ ಮಂತ್ರಿಗಳಾಗಿದ್ದ ಮಾನ್ಯ ಹುಚ್ಚಮಾಸ್ತಿಗೌಡರು ಭೂಸುಧಾರಣೆ ಕಾನೂನನ್ನು ತರುವಾಗ ಶ್ರೀ ಶ್ರೀ ಉಡುಪಿ ಹಾಗೂ ಶೃಂಗೇರಿ ಗುರುಗಳ ಆಶೀರ್ವಾದ ಪಡೆದುಕೊಂಡು ಬಂದು ಭಾಷಣ ಮಾಡುತ್ತಾ ಈ ಅಮೆಂಡ್‌ಮೆಂಟ್‌ನ್ನು ತಂದಿದ್ದೇನೆ ಎಂದು ಹೇಳಿದ್ದರು. ಆದರೆ ನಾನು ಇವತ್ತಿನದಿವಸ ಮಾನ್ಯ ಕಂದಾಯ ಮಂತ್ರಿಗಳಿಗೆ ಹೇಳುತ್ತೇನೆ. ಶ್ರೀಶ್ರೀಗಳ ಆಶೀರ್ವಾದ ಪಡೆಯುವುದರ ಬದಲು ಮೊದಲು ನಿಮ್ಮ ತಾಯಿ ಹಾಗೂ ಮಡದಿಯನ್ನು ಕೇಳಿ ಭೂಸುದಾರಣಾ ಕಾನೂನನ್ನು ತರುವುದು ಒಳ್ಳೆಯದು ಎಂದು ಹೇಳುತ್ತೇನೆ. ಜನ್ಮ ಕೊಡುವವರು ತಾಯಿ ಆ ತಾಯಿಯನ್ನು ಕೇಳಿದರೆ ನಿಮ್ಮ ಕಾನೂನಿಗೆ ಶಕ್ತಿಬರುತ್ತದೆ ಹಾಗೂ ನಿಮಗೂ ಒಳ್ಳೆಯದು ಆಗುತ್ತದೆಂದು ಹೇಳುತ್ತೇನೆ. ಹಿಂದೆ ಮನೆ ಕಂದಾಯ ಹಾಗೂ ತಲೆ ಕಂದಾಯ ಎಂದು ಹಾಕುತ್ತಿದ್ದರು. ಈ ಭೂಸುಧಾರಣಾ ಕಾನೂನಿನಲ್ಲಿ ತಲೆಗಳನ್ನು ತೆಗೆದು ಹಾಕಿದ್ದಾರೆ. ಅದರಲ್ಲೂ ಹೆಣ್ಣುಮಕ್ಕಳ ಅಸ್ತಿತ್ವವನ್ನೇ ತೆಗೆದು ಹಾಕಿದ್ದಾರೆ. ಹೆಣ್ಣುಮಕ್ಕಳ ತಲೆಯನ್ನು ತೆಗೆದುಹಾಕಿದ್ದೀರಿ ? ದೈವದೃಷ್ಟಿಯಲ್ಲಿರುವುದು ಎರಡೇ ಜಾತಿ ಆ ರೀತಿ ಗಂಡಹೆಂಡರು ಹಾಗೂ ಗಂಡು ಮಕ್ಕಳು ಹೆಣ್ಣುಮಕ್ಕಳು ಒಂದೇ ಸರಿಸಮಾನವೆಂದು ಕಾನೂನು ದೃಷ್ಟಿಯಲ್ಲಿ ನಾನು ಭಾವಿಸಿದ್ದೇನೆ.

ತಮ್ಮ ಕಾನೂನಿನಲ್ಲಿ ೫೫ ಎಕರೆ ಸೀಲಿಂಗ್ ಇಟ್ಟಿದ್ದೀರಿ ಅದನ್ನು ಬೇಕಾದರೆ ರೆಡ್ಯೂಸ್ ಮಾಡಿ ೨ ಎಕರೆ ಯೆಂದು ಮಾಡಿ ನಾವು ಬೇಡವೆಂದು ಹೇಳುವುದಿಲ್ಲ ಆದರೆ ಹೆಣ್ಣುಮಕ್ಕಳು ಹಾಗೂ ಗಂಡುಮಕ್ಕಳಲ್ಲಿ ಏನು ವ್ಯತ್ಯಾಸ ಮಾಡಿದ್ದೀರಿ ಅದು ಸ ರಿಯಾದುದಲ್ಲವೆಂದು ಹೇಳುತ್ತೇನೆ. ಮಾನ್ಯ ಬಸವಲಿಂಗಪ್ಪನವರ ಕಾಲದಲ್ಲಿಯಾದರೂ ಹೆಣ್ಣುಮಕ್ಕಳಿಗೆ ಆಗಿರುವ ಅನ್ಯಾಯವನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ಉದಾಹರಣೆಯನ್ನು ಕೊಡಬೇಕೆಂದರೆ ಟ್ರಿಬ್ಯೂನಲ್‌ಗಳನ್ನು ಏನುಮಾಡಿದ್ದೀರಿ ಅದನ್ನು ಮೊದಲು ಅಬಾಲಿಷ್ ಮಾಡಿ. ಏತಕ್ಕೆಂದರೆ ಲ್ಯಾಡ್ ರೆವಿನ್ಯೂ ಕಾನೂಸಿನಲ್ಲಿ ಏನು ಮಾಡಿದ್ದೀರಿ ಅದು ಪ್ರಯೋಜನ ವಾಗಿಲ್ಲ. ಒಂದು ಟ್ರಿಬ್ಯೂನಲ್‌ನಲ್ಲಿ ೫ ಮಂದಿ ಸದಸ್ಯರು ಇರಬೇಕೆಂದುಮಾಡಿದ್ದೀರಿ ಒಬ್ಬ ಸದಸ್ಯರಿಗೆ ಒಂದು ವರ್ಷಕ್ಕೆ ಇನ್ನೂರು ರೂಪಾಯಿ ಖರ್ಚಾಗುತ್ತದೆ. ಒಬ್ಬ ಸದಸ್ಯರಿಗೆ ಒಂದು ಸಿಟಿಂಗೆ ಸುಮಾರು ೪೦ ರೂಪಾಯಿ ಕೊಡಬೇಕಾಗುತ್ತದೆ. ನಮ್ಮಲ್ಲಿ ಸುಮಾರು ೧೭೫ ಟ್ರಿಬ್ಯೂನಲ್‌ಗಳು ಇವೆ ಆ ಟ್ರಿಬ್ಯೂನಲ್ ಮೆಂಬರುಗಳಿಗೆ ಹಾಗೂ ಆದರ ಒಟ್ಟು ಖರ್ಚು ೭೭ ಕೋಟಿ ೪೪ ಲಕ್ಷದ ರೂಪಾಯಿ ಖರ್ಚಾಗುತ್ತದೆ, ಇದು ಯಾರಿಗೆ ಎಂದು ಕೇಳುತ್ತೇನೆ. ಒಂದು ವರ್ಷಕ್ಕೆ ಇದು ತೀರ್ಮಾನವಾಗುತ್ತದೆಯೋ ಆದ್ದರಿಂದ ನಾಲ್ಕು ವರ್ಷಗಳಿಂದ ಎಷ್ಟು ಹಣ ಖರ್ಚುಮಾಡಿದ್ದೀರಿ ? ಈಗ ಏನು ಭೂಮಿಯನ್ನು ಎಲ್ಲರಿಂದ ತೆಗೆದುಕೊಂಡಿದ್ದೀರಿ ಅದಕ್ಕೆ ಮಾರ್ಕೆಟ್ ವಾಲ್ಯೂ ಕೊಟ್ಟಿದ್ದರೆ ಈ ಟ್ರಿಬ್ಯೂನಲ್‌ಗಳು ಬೇಕಾಗಿರಲಿಲ್ಲ. ಭೂಮಿ ಹೊಂದಿರುವವರಿಗೆ ಅವರು ಕೋರ್ಟು ಕಚೇರಿಗೆ ಬಂದು ಹೊಡೆದಾಡಬೇಕಾಗಿರಲಿಲ್ಲ. ಇಷ್ಟು ಜನ ಮೆಂಬರ್ಸ್‌ಗಳನ್ನು ಇಟ್ಟುಕೊಂಡು ಹಣವನ್ನು ಖರ್ಚು ಮಾಡಬೇಕಾಗಿರಲಿಲ್ಲ............

You abolish these tribunals. I am substantiating this proposition. Make up your mind forthwith to pay the people from whom you have taken land. Pay the n the market value so that widows and unmaried people who have lost the small holdings will be beuefitted. They will not have any grievance.

ಮಾನ್ಯ ಆರ್ಮುಗಂ ರವರು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಏನು ರಿಸರ್‌ವೇಷನ್ ಕೊಟ್ಟಿದ್ದೀರೆಂದು ಕೇಳಿದ್ದಾರೆ ? ಏನು ೧೭೫ ಟ್ರಿಬ್ಯೂನಲ್ಸ್ ಮಾಡಿದ್ದೀರಿ ಅದರಲ್ಲಿ ಎಷ್ಟು ಮಕ್ಕಳಿಗೆ ರಿಸರ್‌ವೇಷನ್ ಮಾಡಿದ್ದೀರೆಂದು ನಾನು ಪ್ರಶ್ನೆ ಕೇಳುತ್ತೇನೆ. ನಿಮ್ಮ ಹರಿಜನ ಗಿರಿಜನರಿಗೆ ಏನು ರಿಸರ್‌ವೇಷನ್ ಮಾಡಿದ್ದೀರಿ ಅದೇ ರೀತಿ ನಮ್ಮ ಹೆಣ್ಣು ಮಕ್ಕಳಿಗೂ ಕೊಡಿ ಎಂದು ಕೇಳುತ್ತೇನೆ. ನಮ್ಮ ಜಮೀನುಗಳನ್ನು ಏನು ಕಿತ್ತುಕೊಂಡಿದ್ದೀರಿ ? ಆ ಜಮೀನಿನಲ್ಲಿ ಹರಿಜನಗಿರಿಜನರಿಗೆ ಏನು ಕೊಡಬೇಕೆಂದು ಮಾಡಿದ್ದೀರಿ ಅದು ಬೇಡವೆಂದು ಹೇಳುತ್ತಿಲ್ಲ, ಅದೇ ರೀತಿ ನಮ್ಮ ಹೆಣ್ಣುಮಕ್ಕಳಿಗೂ ರಿಸರ್‌ವೇಷನ್ ಕೊಡಿ ಎಂದು ಹೇಳಿ ಹಿಂದೆ ಆಗಿರುವ ಅನ್ಯಾಯವನ್ನು ತಪ್ಪಿಸಬೇಂಬು ಕೇಳುತ್ತೇನೆ. ಇನ್ನು ಒಂದು ಕಡೆ ಹೇಳುತ್ತೀರಿ ಯಾವ ಜಮೀನನ್ನು ಹೆಣ್ಣುಮಕ್ಕಳಿಂದ ಪಡೆದುಕೊಂಡಿದ್ದೀರಿ ಅವರಿಗೆ ಲಂಪ್‌ಸಮ್ ಕೊಟ್ಟಿದ್ದೀವೆಂದು ಹೇಳುತ್ತೀರಿ ಅದು ನಿಜವಾಗಿಯೂ ಕಾರ್ಯಗತವಾಗಿದೆಯೋ ಎಂದು ಕೇಳುತ್ತೇನೆ. ಉದಾಹರಣೆಗೆ ಒಬ್ಬ ಹೆಣ್ಣುಮಗಳು ಗಂಡನಿಲ್ಲ ಭೂಮಿ ಇಲ್ಲ ಅವರು ಹೇಗೆ ಬದುಕಬೇಕು. ಒಂದು ಉದಾಹರಣೆಯನ್ನು ಮಾತ್ರ ಹೇಳುತ್ತೇನೆ ಒಬ್ಬ ಹೆಣ್ಣುಮಗಳು ವಿದವೆ ಬೇಲೂರಿನಲ್ಲಿ ನಾಲ್ಕು ವರ್ಷಗಳಿಂದ ಕಾಂಪನ್‌ಸೇಷನ್ ಕೇಳಿಕೊಂಡು ನಾಲ್ಕು ವರ್ಷಗಳಿಂದ ಕಣ್ಣೀರು ಇಡುತ್ತಿದ್ದಾರೆ. ಈಗ ಸಾಯುವ ಸ್ಥಿತಿಯಲ್ಲಿದ್ದಾರೆ, ಈಗ ಅವರನ್ನು ನೋಡಿಕೊಳ್ಳುವರು ಯಾರು ತಮ್ಮ ಕಾನೂನಿನಲ್ಲಿ ಹೆಣ್ಣು ಮಕ್ಕಳಿಗೆ ಭೂಮಿ ಬೇಡವೆಂದು ಏನು ಮಾಡಿದ್ದೀರಿ ಅದು ಸರಿಯಾದುದಲ್ಲ. ತಾವು ಈಗ ಏನು ಒಂದು ಅಮೆಂಡ್‌ಮೆಂಟ್ ತರಬೇಕೆಂದು ಏನು ಯೋಚನೆಮಾಡಿದ್ದೀರಿ ಅದರಲ್ಲಿಯಾದರೂ ನಾನು ಹೇಳಿರುವ ವಿಚಾರವನ್ನೆಲ್ಲಾ ಪರಿಶೀಲನೆ ಮಾಡಿ ಆದನ್ನು ಸರಿಪಡಿಸಬೇಕೆಂದು ಹೇಳಿ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

## Business of the House—Announcement

MR. SPEAKER.—The discussion on this demand is concluded. Tomorrow the Hon. Minister will reply.